ಗ್ರಾಮೀಣ ಮಹಿಳಾ ಸಬಲೀಕರಣದಲ್ಲಿ ಉದ್ಯಮಶೀಲತೆಯ ಪಾತ್ರ : ಒಂದು ಪ್ರಕರಣ ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು
ಶೋಭಾಮಣಿ

ಮಾರ್ಗದರ್ಶಕರು
ಡಾ. ವಿ. ಬಾಸಿಲ್ ಹನ್ಸ್

೨೦೦೮

ಕರ್ನಾಟಕ ಥಿಯೊಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು-೫೭೫೦೦೧

ಗ್ರಾಮೀಣ ಮಹಿಳಾ ಸಬಲೀಕರಣದಲ್ಲಿ ಉದ್ಯಮಶೀಲತೆಯ ಪಾತ್ರ : ಒಂದು ಪ್ರಕರಣ ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು
ಶೋಭಾಮಣಿ

ಮಾರ್ಗದರ್ಶಕರು
ಡಾ. ವಿ. ಬಾಸಿಲ್ ಹನ್ಸ್

೨೦೦೯

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು - ೫೭೫೦೦೧

ಯೋಗ್ಯತಾ ಪತ್ರ

ಶೋಭಾಮಣಿ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಗ್ರಾಮೀಣ ಮಹಿಳಾ ಸಬಲೀಕರಣದಲ್ಲಿ ಉದ್ಯಮಶೀಲತೆಯ ಪಾತ್ರ : ಒಂದು ಪ್ರಕರಣ ಅಧ್ಯಯನ – ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲ–ಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಡಾ. ವಿ. ಬಾಸಿಲ್ ಹನ್ಸ್

ಸಂಶೋಧನ ಮಾರ್ಗದರ್ಶಕರು

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು.

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ಗ್ರಾಮೀಣ ಮಹಿಳಾ ಸಬಲೀಕರಣದಲ್ಲಿ ಉದ್ಯಮಶೀಲತೆಯ ಪಾತ್ರ : ಒಂದು ಪ್ರಕರಣ ಅಧ್ಯಯನ ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು, ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ. ವಿ. ಬಾಸಿಲ್ ಹನ್ಸ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೊಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

ಶೋಭಾಮಣಿ

ಸಂಶೋಧಕರು

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು.

ಗ್ರಾಮೀಣ ಮಹಿಳಾ ಸಬಲೀಕರಣದಲ್ಲಿ ಉದ್ಯಮಶೀಲತೆಯ ಪಾತ್ರ : ಒಂದು ಪ್ರಕರಣ ಅಧ್ಯಯನ

ಅಧ್ಯಯನದ ವಿವರಗಳು

ಅಧ್ಯಾಯ - ೧ : ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

- ❖ ಪ್ರವೇಶ
- ❖ ಉದ್ದೇಶ ಮತ್ತು ಸ್ವರೂಪ
- ❖ ಅಧ್ಯಯನದ ವ್ಯಾಪ್ತಿ
- ❖ ಅಧ್ಯಯನದ ಹಾದಿ
- ❖ ಅಧ್ಯಯನದ ಮಹತ್ವ
- ❖ ಅಧ್ಯಯನ ಪ್ರದೇಶದ ಪರಿಚಯ

ಅಧ್ಯಾಯ - ೧ : ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

೧.೧ ಪ್ರವೇಶ

ವಿಶ್ವ ಜನಸಂಖ್ಯೆಯ ೩/೪ ರಷ್ಟು ಜನರು ಇನ್ನೂ ಹಳ್ಳಿಗಳಲ್ಲೇ ವಾಸಿಸುತ್ತಿದ್ದಾರೆ. ಭಾರತವು ಹಳ್ಳಿಗಳ ರಾಷ್ಟ್ರ. ಬಡತನ ಮತ್ತು ಹಿಂದುಳಿದಿರುವಿಕೆ ಹಳ್ಳಿಗಳಲ್ಲೇ ಕಂಡು ಬರುತ್ತಿದೆ. ದೇಶದಲ್ಲಿ ಶೇ. ೭೦ ರಷ್ಟು ಜನರು ವಾಸಿಸುವ ೬ ಲಕ್ಷ ಹಳ್ಳಿಗಳಿವೆ. ಭಾರತದ ಅಭಿವೃದ್ಧಿಯು ಅದರ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಲ್ಲಿ ಅಡಗಿದೆ. ದೇಶದ ಶೇ. ೭೦ ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿರುವುದರಿಂದ ಅಭಿವೃದ್ಧಿಗೆ ಸಂಬಂಧಪಟ್ಟ ಯಾವುದೇ ಕಾರ್ಯನೀತಿ ಹಳ್ಳಿಗಳ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಕೇಂದ್ರವಾಗಿಸಬೇಕು. ಗ್ರಾಮೀಣ ಅಭಿವೃದ್ಧಿ ಎಂಬ ಪರಿಕಲ್ಪನೆ ಗ್ರಾಮೀಣ ವಾಸಿಗಳ ಜೀವನ ಮಟ್ಟವನ್ನು ಉತ್ತಮಪಡಿಸುವುದು, ಅದರಲ್ಲೂ ಹಳ್ಳಿಗಳ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವುದರೊಂದಿಗೆ ಹಳ್ಳಿಗಳ ಸರ್ವತೋಮುಖ ಬೆಳವಣಿಗೆಯಾಗಿದೆ. ಇಂದು ಗ್ರಾಮೀಣ ಅಭಿವೃದ್ಧಿ ಎಂಬುದು ಇಡೀ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯು ಮರುಸಂಘಟನೆ ಹೊಂದಿರುವ ಬಹು ಆಯಾಮವುಳ್ಳ ಪ್ರಕ್ರಿಯೆಯನ್ನಾಗಿ ಬಿಂಬಿಸಲಾಗುತ್ತದೆ. ಗ್ರಾಮೀಣ ಅಭಿವೃದ್ಧಿಯು ಒಟ್ಟು ಅಭಿವೃದ್ಧಿಯ ಪೂರ್ವಾವಶ್ಯಕತೆಯಾಗಿದ್ದು, ಹೆಚ್ಚಿನ ಆದ್ಯತೆಯ ಅವಶ್ಯಕತೆ ಇದೆ.

ಇಂದು ಎಲ್ಲೆಡೆ ಕೇಳಿಬರುತ್ತಿರುವ ಅಭಿವೃದ್ಧಿಯ ಪರಿಕಲ್ಪನೆ ಎಂದರೆ ಒಳಗೊಳ್ಳುವ ಅಭಿವೃದ್ಧಿ. ಒಳಗೊಳ್ಳುವ ಅಭಿವೃದ್ಧಿ ಎಂದರೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅಭಿವೃದ್ಧಿಯ ಫಲವನ್ನು ಮುಖ್ಯವಾಗಿ ಅಂಚಿಗೆ ತಳ್ಳಲ್ಪಟ್ಟ, ಶೋಷಿತ ಸಮುದಾಯಗಳನ್ನು ಒಳಗೊಂಡು ಮುಂದುವರಿಯುವ ಪ್ರಕ್ರಿಯೆಯಾಗಿದೆ. ಭಾರತೀಯ ಸಮಾಜವು ಅಂಚಿಗೆ ಸರಿಸಲ್ಪಟ್ಟ ಒಂದು ಸಮಾಜವಾಗಿದ್ದು, ಅದು ದಲಿತರು, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರು ಹೀಗೆ ವೈವಿಧ್ಯಮಯ ಗುಂಪುಗಳಿಂದ ಕೂಡಿದೆ. ಇವರೆಲ್ಲರೂ ವಿಭಿನ್ನ ಸಾಮಾಜಿಕ-ಆರ್ಥಿಕ ಗುಣ ಲಕ್ಷಣಗಳನ್ನು ಹಾಗೂ ಸಮಸ್ಯೆಗಳನ್ನು ಹೊಂದಿದ್ದಾರೆ. ಅಂಚಿಗೆ ತಳ್ಳಲ್ಪಡುವಿಕೆ ಎಂಬ ಪದದ ಅರ್ಥವೆಂದರೆ, ಅಭಿವೃದ್ಧಿಯ ಸನ್ನಿವೇಶದಲ್ಲಿ ಒಂದು ಗುಂಪು ಅಥವಾ ವರ್ಗವು ಇನ್ನೊಂದು ಗುಂಪು ಅಥವಾ ವರ್ಗದಿಂದ ಒಂದಲ್ಲ ಒಂದು ರೀತಿಯಲ್ಲಿ ಅಡ್ಡಿ ಆತಂಕಗಳನ್ನು ಒಂದು ವರ್ತುಲದಿಂದ ಇನ್ನೊಂದು ವರ್ತುಲಕ್ಕೆ ಅಥವಾ ಒಂದು ಸ್ತರದಿಂದ ಇನ್ನೊಂದು ಸ್ತರಕ್ಕೆ ಎದುರಿಸುವುದು. ಹೀಗೆ ಅಂಚಿಗೆ ತಳ್ಳಲ್ಪಟ್ಟ ಗುಂಪು ಪ್ರಗತಿಯ ಲಾಭಗಳ ಅಂಚಿನಲ್ಲಿದ್ದು, ಒಟ್ಟಾರೆಯಾಗಿ ಸಮಾಜದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಸಂಭವಿಸುವ ಯಾವುದೇ ತೆರನ ಸುಧಾರಣೆಗಳಿಂದ

ಹರಿದು ಬರುವ ಲಾಭಗಳಲ್ಲಿ ಒಂದು ಹಕ್ಕಿನ ನೆಲೆಯಲ್ಲಿ ಲಭಿಸತಕ್ಕ ಪಾಲಿನಿಂದ ವಂಚಿತವಾಗಿರುತ್ತದೆ. ಇಲ್ಲಿ 'ಅಂಚನ್ನು' ವ್ಯಾಖ್ಯಾನಿಸುವ ಅತ್ಯಂತ ಸರಳ ವಿಧಾನವೆಂದರೆ, ಸಂಬಂಧಿತ ಗುಂಪು ಯಾ ವರ್ಗ ಯಾವ ಭೇದಭಾವಕ್ಕೆ ಪಕ್ಕಾಗಿದೆಯೋ ಆ ಭೇದಭಾವವನ್ನು ವಿವರಿಸುವುದು. ಈ ಭೇದಭಾವ ಅಥವಾ ಪಕ್ಷಪಾತವು ಸ್ವತಃ ಅಸಮಾನತೆಗಳು, ತಾರತಮ್ಯ ಹಾಗೂ ಅವಕಾಶ ವಂಚನೆ ಇತ್ಯಾದಿ ರೂಪದಲ್ಲಿರುತ್ತವೆ. ಭಾರತದಲ್ಲಿ ಚಾರಿತ್ರಿಕ ಯಾತನೆಗಳಿಗೆ ಹೆಸರಾಗಿರುವ ಒಂದು ಪ್ರಧಾನ ಅಂಚಿಗೆ ಸರಿಸಲ್ಪಟ್ಟ ಗುಂಪು ಎಂದರೆ ಮಹಿಳೆಯರು ವಾಸ್ತವದಲ್ಲಿ ಇದೊಂದು ಲಿಂಗತ್ವ ಸಮಸ್ಯೆ. ಇದರಿಂದಾಗಿಯೇ ಲಿಂಗತ್ವ ನಿಷ್ಪಕ್ಷಪಾತತೆ ಮತ್ತು ಮಹಿಳಾ ಸಬಲೀಕರಣ ಇತ್ಯಾದಿ ಕ್ಲೀಷೆಯೆನಿಸಿಬಿಟ್ಟಿರುವ ಕರೆಗಳು ಕೇಳುತ್ತಿರುವುದು. ಸಬಲೀಕರಣ ಸಮಸ್ಯೆಯ ಅಂತರಾಳದಲ್ಲಿರುವುದೆಂದರೆ, ಪುರುಷರು ಮತ್ತು ಮಹಿಳೆಯರ ನಡುವೆ ಜವಾಬ್ದಾರಿಗಳು, ಸಂಪನ್ಮೂಲಗಳು ಹಾಗೂ ಪ್ರತಿಫಲಗಳ ಹಂಚಿಕೊಳ್ಳುವಿಕೆಗೆ ಮನವಿ. (ಹ್ಯಾನ್ಸ್, ೨೦೦೭) ಒಟ್ಟಾರೆಯಾಗಿ ಮಹಿಳಾ ಸಬಲೀಕರಣಕ್ಕೆ ಅಥವಾ ನಿರ್ದಿಷ್ಟವಾಗಿ ಗ್ರಾಮೀಣ ಮಹಿಳಾ ಸಬಲೀಕರಣಕ್ಕೆ ನೀಡಲಾಗುತ್ತಿರುವ ಕರೆಗೆ ಒಂದು ಪ್ರಧಾನ ಕಾರಣವೆಂದರೆ ಮಹಿಳೆಯರ ಆರ್ಥಿಕ ಸ್ವಾವಲಂಬನೆ. ಮಹಿಳೆಯರನ್ನು ಸಬಲರನ್ನಾಗಿ ಮಾಡುವುದು, ಅವರಿಗೆ ಸ್ವಾಯತ್ತತೆಯನ್ನು ನೀಡುವುದು ಮತ್ತು ಅವರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಾನಮಾನವನ್ನು ಉತ್ತಮಪಡಿಸುವುದು, ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು ಅತ್ಯಗತ್ಯ.

ಜಗತ್ತಿನಾದ್ಯಂತ ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುತ್ತಿರುವುದು ಇಂದಿನ ಬೆಳವಣಿಗೆ. ಮಹಿಳೆಯರ ಕ್ರಿಯಾಶೀಲ ಭಾಗವಹಿಸುವಿಕೆ ಇಲ್ಲದೆ ಅವಿಶ್ರಾಂತ ಅಭಿವೃದ್ಧಿ ಅಸಾಧ್ಯ ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಅದರಂತೆ ಅಂಚಿಗೆ ತಳ್ಳಲ್ಪಟ್ಟ ಮಹಿಳಾ ಸಮುದಾಯವನ್ನು ಅಭಿವೃದ್ಧಿ ಮುಖ್ಯವಾಹಿನಿಗೆ ತರುವಂಥ ಪ್ರಯತ್ನ ಇಂದು ಎಲ್ಲೆಡೆ ನಡೆಯುತ್ತಿದೆ. ಮಾದರಿ ಅಥವಾ ಸಿದ್ಧಾಂತಗಳಲ್ಲಿ ಮಹಿಳೆಯರನ್ನು ಉತ್ಪಾದಕರು, ಹಣ ಸಂಪಾದಿಸುವವರು, ಆಹಾರ ಸಂಗ್ರಹಿಸುವವರು, ಉಳುಮೆ ಮಾಡುವವರು ಎಂದು ಗುರುತಿಸಲೇ ಇಲ್ಲ ಅಥವಾ ಮಹಿಳೆಯರು ಅಭಿವೃದ್ಧಿ ಯೋಜನೆಯ ಒಂದು ಅಂಗ ಎಂದು ಪರಿಗಣಿಸಲೇ ಇಲ್ಲ. ಆರ್ಥಿಕ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವ ದೃಷ್ಟಿಯಿಂದ ಲಭ್ಯವಿರುವ ದುಡಿಯುವ ವರ್ಗವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವ ಅವಶ್ಯಕತೆಯಿದೆ.

ಯಾವುದೇ ಸಮಾಜದಲ್ಲಾಗಲಿ ಅಲ್ಲಿನ ಅಭಿವೃದ್ಧಿಯ ಮುಖ್ಯ ಸೂಚಕವೆಂದರೆ ಮಹಿಳೆಯರ ಸ್ಥಾನಮಾನ. ಮಹಿಳೆಯರಿಗಿಂತ ಪುರುಷರ ಸಂಖ್ಯೆ ಜಾಸ್ತಿಯಾಗಿರುವ ಕೆಲವೇ ಕೆಲವು ರಾಷ್ಟ್ರಗಳಲ್ಲಿ ಭಾರತ ಕೂಡ ಒಂದು ಮತ್ತು ಈ ರೀತಿಯ ಅಸಮತೋಲನ ಕಳೆದ ಹಲವಾರು ವರ್ಷಗಳಲ್ಲಿ

ಹೆಚ್ಚುತ್ತಲೇ ಇದೆ. ದೇಶದಲ್ಲಿ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಗ್ರಾಮೀಣ ಮಹಿಳೆಯರ ಪಾಲು ಹೆಚ್ಚು ಕಡಿಮೆ ೭೫ ಪ್ರತಿಶತದಷ್ಟಿದೆ. ಭಾರತದ ಆರ್ಥಿಕತೆಯ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಗ್ರಾಮೀಣ ವಲಯ ಮತ್ತು ಗ್ರಾಮೀಣ ಮಹಿಳೆಯರು ಹಿಂದಿನಿಂದಲೂ ಒಂದು ಪ್ರಮುಖ ಭಾಗವಾಗಿದೆ. ಹಳ್ಳಿಗಳ ರಾಷ್ಟ್ರ ಎಂದು ಕರೆಸಿಕೊಂಡಿರುವ ಭಾರತದಲ್ಲಿ ಗ್ರಾಮೀಣ ಜನರು ಅಧಿಕ ಸಂಖ್ಯೆಯಲ್ಲಿದ್ದು ಬಹುಪಾಲು ಮಹಿಳೆಯರು ಹಳ್ಳಿಗಳಲ್ಲೇ ವಾಸಿಸುತ್ತಿದ್ದಾರೆ. ಗ್ರಾಮೀಣ ವಲಯ ಭಾರತದ ಆರ್ಥಿಕ ಚಟುವಟಿಕೆಯ ಪ್ರಮುಖ ವಲಯವೆಂದು ಪರಿಗಣಿಸಲ್ಪಟ್ಟಿದೆ. ಹಾಗಾಗಿ ಗ್ರಾಮೀಣ ಮಹಿಳೆಯರು ಗ್ರಾಮೀಣಾಭಿವೃದ್ಧಿಯ ಕೇಂದ್ರ ಬಿಂದುವಾಗಿದ್ದಾರೆ. ಸಮಾಜದ ಸುವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರ ಹಿರಿದಾದುದುದಾಗಿದೆ. ಗ್ರಾಮೀಣ ಮಹಿಳೆಯರ ಪ್ರಗತಿಯಿಂದ ಕುಟುಂಬಕ್ಕೆ ಹಾಗೂ ಒಟ್ಟು ದೇಶದ ಪ್ರಗತಿಗೆ ಅನುಕೂಲವಾಗುತ್ತದೆ. ಆದರೆ ನಗರ ಪ್ರದೇಶಗಳ ಮಹಿಳೆಯರಿಗೆ ಹೋಲಿಸಿದರೆ ಗ್ರಾಮೀಣ ಪ್ರದೇಶದ ಮಹಿಳೆಯರು ಹೆಚ್ಚಿನೆಲ್ಲಾ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಹೆಚ್ಚಿನೆಲ್ಲಾ ಗ್ರಾಮೀಣ ಮಹಿಳೆಯರು ಬಡವರು, ಮುಗ್ಧರೂ, ಅನಕ್ಷರಸ್ಥರೂ ಮತ್ತು ತುಳಿತಕ್ಕೊಳಗಾದವರಾಗಿದ್ದಾರೆ. ಗ್ರಾಮೀಣ ಮಹಿಳೆಯರು ಅಸಂಘಟಿತರಾಗಿದ್ದು ಸೂಕ್ತ ಪ್ರಾತಿನಿಧ್ಯವನ್ನು ಹೊಂದಿಲ್ಲ. ಸಮಾಜದ ಅಂಗವಿಕಲತೆ, ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಮರ್ಪಕ ಅವಕಾಶಗಳ ಕೊರತೆ, ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ತೊಡಕಾಗಿದೆ. ದೇಶದಲ್ಲಿ ಮಹಿಳೆಯರು ಇನ್ನೂ ಎರಡನೆ ದರ್ಜೆ ನಾಗರಿಕರು ಎಂದು ನೋಡಲಾಗುತ್ತಿದೆ. ಲಿಂಗ ಸಮಾನತೆಗಾಗಿ ಮಾಡಲ್ಪಡುವ ಎಲ್ಲಾ ಪ್ರಯತ್ನಗಳು ಮಾನವ ಸಮಾಜದ ಸರ್ವತೋಮುಖ ಅಭಿವೃದ್ಧಿಯನ್ನು ಉಂಟುಮಾಡುತ್ತದೆ.

ಮಹಿಳೆಯರನ್ನು ಅಭಿವೃದ್ಧಿಯಲ್ಲಿ ಪುರುಷರಿಗೆ ಸಮಾನ ಪಾಲುದಾರರು ಎಂದು ಪರಿಗಣಿಸಿದಾಗ ಮಾತ್ರವೇ ದೇಶದ ಸರ್ವತೋಮುಖ ಬೆಳವಣಿಗೆಯಾಗಲು ಸಾಧ್ಯ. ಮಹಿಳೆ ಮತ್ತು ಅಭಿವೃದ್ಧಿಯು ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಚರ್ಚೆಯ ವಿಷಯವಾಗಿದೆ. ಮಹಿಳಾ ಸಬಲೀಕರಣ ಪರಿಪೂರ್ಣವಾಗಲು ಗ್ರಾಮೀಣ ಮಹಿಳೆಯರನ್ನು ಮೊದಲು ಸಶಕ್ತಳನ್ನಾಗಿಸಬೇಕು ಎಂದು ಮಾತುಗಳಲ್ಲಿ ಪೂರ್ಣ ಸತ್ಯಾಂಶವಿದೆ. ಯಾಕೆಂದರೆ ನಮ್ಮದು ಹಳ್ಳಿಗಳ ದೇಶ. ಗ್ರಾಮೀಣ ವಲಯದ ಸುಧಾರಣೆಯೆ ದೇಶದ ನಿಜವಾದ ಸುಧಾರಣೆ ಎಂದು ಮಹಾತ್ಮ ಗಾಂಧೀಜಿ ಹೇಳಿದ್ದರು. ಒಂದು ಸಂತಸದ ಸಂಗತಿಯೆಂದರೆ ಇಂದು ಗ್ರಾಮೀಣ ಮಹಿಳೆ ರಾಷ್ಟ್ರ ನಿರ್ಮಾಣದ ಮುಖ್ಯವಾಹಿನಿಗೆ ಬರುತ್ತಿದ್ದಾಳೆ. ಸ್ವಯಂ ಪ್ರೇರಿತರಾಗಿ ಸಾಧನೆಯತ್ತ ಇಂದಿನ ಮಹಿಳೆಯರು ಸಾಗುತ್ತಿರುವುದು ರಾಷ್ಟ್ರ ನಿರ್ಮಾಣದ ಕಾರ್ಯವನ್ನು ಸುಲಭಗೊಳಿಸಿದಂತಾಗಿದೆ. ಅಲ್ಲದೆ ಉದ್ಯಮಶೀಲತೆಯಲ್ಲಿ ಮಹಿಳೆಯರ ಪಾತ್ರ ಹೆಚ್ಚುತ್ತಿರುವುದು ಒಂದು ಉತ್ತಮ ಬೆಳವಣಿಗೆ. ಆದ್ದರಿಂದ ಇಂದು ತ್ವರಿತ ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಮಹಿಳೆಯರನ್ನು ಉದ್ಯಮಶೀಲತಾ

ರಂಗಕ್ಕೆ ಕರೆತರಬೇಕಾದ ಅಗತ್ಯವಿದೆ.

೧.೨ ಉದ್ದೇಶ ಮತ್ತು ಸ್ವರೂಪ :-

ಸ್ವ ಉದ್ಯೋಗಿಗಳಾಗಿ, ಉದ್ಯಮಗಳನ್ನು ನಡೆಸುವವರಾಗಿ ಮಹಿಳೆಯರು ಆರ್ಥಿಕ ಚಟುವಟಿಕೆಗಳಲ್ಲಿ ಪ್ರಮುಖ ಪಾಲುದಾರರಾಗಿರುವುದರಿಂದ ಉದ್ಯಮಿಗಳಾಗಿ ಮಹಿಳೆಯರನ್ನು ವಿಶೇಷವಾಗಿ ಅಧ್ಯಯನ ಮಾಡುವುದು ಅವಶ್ಯಕ. ಮಹಿಳಾ ಉದ್ಯಮ ಸಾಹಸಿಗಳು, ಆರ್ಥಿಕ ವ್ಯವಸ್ಥೆಯಲ್ಲಿ ವಿಶಿಷ್ಟವಾದ ಸ್ಥಾನ ಹೊಂದಿದ್ದಾರೆ. ಅವರು ಆರ್ಥಿಕಾಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮಹತ್ವದ ಪ್ರತಿನಿಧಿಗಳೆಂಬ ಮನ್ನಣೆಗೆ ಪಾತ್ರರಾಗಿದ್ದಾರೆ. ಭಾರತದಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆ ಕಡಿಮೆ ಇದ್ದರೂ ಕೈಗಾರಿಕಾ ರಂಗವೂ ಸೇರಿದಂತೆ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳುವ ಸಾಮರ್ಥ್ಯ ಅವರಲ್ಲಿದೆ.

ಪ್ರಸ್ತುತ ಕೈಗೊಂಡ ಅಧ್ಯಯನವು ಮಹಿಳೆಯರ ಸಬಲೀಕರಣದ ಬಗೆಗಿನ ವಿಚಾರಗಳನ್ನು ಅರಿತುಕೊಳ್ಳಲು ಕೈಗೊಂಡುದುದಾಗಿದೆ. ಅದರಲ್ಲೂ ಮುಖ್ಯವಾಗಿ ಉದ್ಯಮ ರಂಗದಲ್ಲಿ ಮಹಿಳೆಯರು ಯಾವ ರೀತಿ ತಮ್ಮನ್ನು ತೊಡಗಿಸಿಕೊಂಡು ಸಬಲೀಕರಣ ಎನ್ನುವ ಇಂದಿನ ಪರಿಕಲ್ಪನೆಗೆ ನ್ಯಾಯ ಒದಗಿಸುತ್ತಿದ್ದಾರೆ ಎಂಬುದನ್ನು ತಿಳಿಯಲು ನೆರವಾಗಲಿದೆ. ಹಾಗಾಗಿ ಈ ಅಧ್ಯಯನವು ಈ ಕೆಳಗಿನ ಪ್ರಮುಖ ಉದ್ದೇಶಗಳನ್ನು ಮುಂದಿಟ್ಟುಕೊಂಡು ಕೈಗೊಳ್ಳಲಾಗಿದೆ.

೧) ಆರ್ಥಿಕ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಸಬಲೀಕರಣವನ್ನು ಗುರುತಿಸುವುದು.

೨) ಆರ್ಥಿಕ ಅಭಿವೃದ್ಧಿಯ ಬದಲಾದ ಪರಿಕಲ್ಪನೆಯಲ್ಲಿ ಒಳಗೊಳ್ಳುವ ಅಭಿವೃದ್ಧಿಯಲ್ಲಿ ಮಹಿಳೆಯರ ಕೊಡುಗೆಗಳನ್ನು ತಿಳಿಸುವುದು.

೩) ಗ್ರಾಮೀಣ ಮಹಿಳೆಯರ ಅಭಿವೃದ್ಧಿಯಲ್ಲಿ ಸಬಲೀಕರಣದ ಮಹತ್ವವನ್ನು ತಿಳಿಸುವುದು.

೪) ಅಭಿವೃದ್ಧಿಯಲ್ಲಿ ಉದ್ಯಮಶೀಲತೆಯ ವ್ಯಾಪ್ತಿ ಮತ್ತು ವಿಧಗಳನ್ನು ಸ್ಪಷ್ಟೀಕರಿಸುವುದು.

೫) ಮಹಿಳಾ ಸಬಲೀಕರಣದಲ್ಲಿ ಉದ್ಯಮಶೀಲತೆಯ ಪ್ರಭಾವವನ್ನು ಸ್ಥಳೀಯ ಚೌಕಟ್ಟಿನಲ್ಲಿ ಅಧ್ಯಯನ ಮಾಡುವುದು.

೧.೩ ಅಧ್ಯಯನದ ವ್ಯಾಪ್ತಿ

ಈ ಅಧ್ಯಯನವು ಪ್ರಮುಖವಾಗಿ ಗ್ರಾಮೀಣ ವಲಯದಲ್ಲಿ ಮಹಿಳೆಯರ ಸಬಲೀಕರಣಕ್ಕೆ ಉದ್ಯಮವು ಯಾವ ರೀತಿ ಸಹಕರಿಸುತ್ತಿದೆ ಎಂಬುದನ್ನು ತಿಳಿದುಕೊಳ್ಳುವ ಒಂದು ಪ್ರಯತ್ನವಾಗಿದೆ. ಇದಕ್ಕಾಗಿ ಎರಡನೆ ಅಧ್ಯಾಯದಲ್ಲಿ ಬದಲಾದ ಅಭಿವೃದ್ಧಿಯ ಪರಿಕಲ್ಪನೆಯನ್ನು ವಿಶ್ಲೇಷಿಸಲಾಗಿದೆ. ಅಭಿವೃದ್ಧಿಯ

ಸ್ವರೂಪವು ಕಾಲದಿಂದ ಕಾಲಕ್ಕೆ ಹಿರಿದಾಗುತ್ತಾ ಬಂದಿದ್ದು, ಇಂದು ಒಳಗೊಳ್ಳುವ ಅಭಿವೃದ್ಧಿಯಾಗಿ ಅಂದರೆ ಸಮಾಜದ ದುರ್ಬಲ ವರ್ಗದವರು ಮತ್ತು ಮಹಿಳೆಯರನ್ನು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸೇರಿಸಿಕೊಂಡು ಮುನ್ನೆಡೆಯಬೇಕಾಗಿ ಬಂದಿರುವುದರಿಂದ ಇದರ ವ್ಯಾಪ್ತಿ ವಿಶಾಲವಾಗಿದೆ. ಹಾಗೆಯೇ ಮಹಿಳೆ ಮತ್ತು ಅಭಿವೃದ್ಧಿ ಎನ್ನುವ ವಿಷಯದಡಿಯಲ್ಲಿ ಇಲ್ಲಿಯವರೆಗೆ ಹೆಚ್ಚಿನ ಗ್ರಾಮೀಣ ಮಹಿಳೆಯರು ಬೇಸಾಯ, ಪಶು ಸಾಕಾಣಿಕೆ, ಮೀನುಗಾರಿಕೆ, ಅರಣ್ಯೀಕರಣ ಮತ್ತು ಕೃಷಿ ಆಧಾರಿತ ಚಟುವಟಿಕೆಗಳನ್ನು ಜೀವನೋಪಾಯಕ್ಕಾಗಿ ಅವಲಂಬಿಸಿಕೊಂಡು ಬಂದಿರುವ ಮಹಿಳೆಯರು ಇಂದು ಹೊಸ ಬೆಳವಣಿಗೆ ಎಂಬಂತೆ ಉದ್ಯಮರಂಗವನ್ನು ಪ್ರವೇಶಿಸಿದ್ದಾರೆ. ಇದು ಚರ್ಚೆಯ ವಿಷಯ. ಹೀಗೆ ಪ್ರಚಲಿತ ವಿದ್ಯಮಾನವಾಗಿರುವ ಮಹಿಳಾ ಸಬಲೀಕರಣ ಉದ್ಯಮಶೀಲತೆಯ ಹಿನ್ನಲೆಯಲ್ಲಿ ಅಧ್ಯಯನ ಮಾಡುವುದು ಇದರ ಉದ್ದೇಶವಾಗಿದೆ.

ಉದ್ಯಮಶೀಲತೆಯು ಮಹಿಳೆಯರನ್ನು ಆರ್ಥಿಕ ಸ್ವಾವಲಂಬಿಗಳಾಗಲು ಪ್ರೇರೇಪಿಸಿದೆ. ಅಲ್ಲದೆ, ಉದ್ಯಮಶೀಲತೆಯು ಗ್ರಾಮೀಣ ಮಹಿಳೆಯರ ಬದುಕಿನ ದಿಕ್ಕನ್ನೇ ಬದಲಾಯಿಸುವುದರ ಮೂಲಕ ಗ್ರಾಮೀಣಾಭಿವೃದ್ಧಿಯ ಪ್ರಕ್ರಿಯೆಯು ಸರಾಗವಾಗಿ ನಡೆಯುವಂತೆ ಮಾಡಿದೆ. ಪುರುಷ ಪ್ರಧಾನ ಸಮಾಜದಲ್ಲಿ ಮತ್ತು ಪುರುಷ ಪ್ರಧಾನ ರಂಗದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳಾವುವು ಎಂದನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ. ಇದಕ್ಕೆ ಪೂರಕವೆಂಬಂತೆ ಒಂದು ಉದ್ಯಮಶೀಲತೆ ಅಭಿವೃದ್ಧಿ ಸಂಸ್ಥೆಯನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಸಿಂಡಿಕೇಟ್ ಬ್ಯಾಂಕ್ ಪ್ರಾಯೋಜಿತ ಸಿಂಡಿಕೇಟ್ ಗ್ರಾಮೀಣ ಅಭಿವೃದ್ಧಿ ಟ್ರಸ್ಟ್‌ನಿಂದ ನಡೆಸಲ್ಪಡುತ್ತಿರುವ ಮಣಿಪಾಲದ ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತೆ ಅಭಿವೃದ್ಧಿ ಸಂಸ್ಥೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಸಂಸ್ಥೆಯ ಕಾರ್ಯವ್ಯಾಪ್ತಿ ನಾಲ್ಕು ಜಿಲ್ಲೆಗಳಿಗೆ ಹರಡಿದೆ. ಆದರೆ ಅಧ್ಯಯನವನ್ನು ಉಡುಪಿ ಜಿಲ್ಲೆಗೆ ಮಾತ್ರ ಸೀಮಿತಗೊಳಿಸಲಾಗಿದೆ. ಈ ಸಂಸ್ಥೆಯಿಂದ ತರಬೇತಿ ಪಡೆದ ಮಹಿಳೆಯರನ್ನು ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಪಡೆಯಲು ಭೇಟಿ ಮಾಡಲಾಗಿದ್ದು ಆ ಅಧಾರದ ಮೇಲೆ ತೀರ್ಮಾನಕ್ಕೆ ಬರಲಾಗಿದೆ.

ಹೀಗೆ ಅಭಿವೃದ್ಧಿಯ ಪರಿಕಲ್ಪನೆ ಮತ್ತು ಪಥ, ಮಹಿಳೆ ಮತ್ತು ಅಭಿವೃದ್ಧಿ, ಗ್ರಾಮೀಣಾಭಿವೃದ್ಧಿ, ಮಹಿಳೆ ಮತ್ತು ಸಬಲೀಕರಣ, ಉದ್ಯಮಶೀಲತೆ, ಮಹಿಳೆ ಮತ್ತು ಉದ್ಯಮಶೀಲತೆ, ಪ್ರಕರಣದ ಅಧ್ಯಯನ, ಅಂಕಿ ಅಂಶಗಳ ವಿಶ್ಲೇಷಣೆ, ಮಹಿಳಾ ಸಬಲೀಕರಣದ ಮಾದರಿ, ಸಾರ, ಅಧ್ಯಯನದ ಶೋಧ, ಸಲಹೆ ಸೂಚನೆಗಳು ಹೀಗೆ ಅಧ್ಯಯನವು ಸಾಗುತ್ತದೆ.

೧.೪ ಅಧ್ಯಯನದ ಹಾದಿ

ಮಹಿಳಾ ಸಬಲೀಕರಣದಲ್ಲಿ ಉದ್ಯಮಶೀಲತೆಯ ಪ್ರಭಾವವನ್ನು ಸ್ಥಳೀಯ ಚೌಕಟ್ಟಿನಲ್ಲಿ ಅಧ್ಯಯನ ಮಾಡುವುದು ಅಧ್ಯಯನದ ಉದ್ದೇಶಗಳಲ್ಲೊಂದಾಗಿದೆ. ಇದಕ್ಕಾಗಿ ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತೆ ಅಭಿವೃದ್ಧಿ ಸಂಸ್ಥೆ, ಮಣಿಪಾಲ ಇದನ್ನು ಅಧ್ಯಯನಕ್ಕೆ ಆರಿಸಿಕೊಳ್ಳಲಾಗಿದೆ.

ಅಧ್ಯಯನ ವಿಷಯದ ಬಗೆಗಿನ ಪೂರಕ ಮಾಹಿತಿಯನ್ನು ಅಧ್ಯಯನಕ್ಕೆ ಆರಿಸಿಕೊಂಡಿರುವ ಮಣಿಪಾಲದ ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆಯಿಂದ ಪಡೆಯಲಾಗಿದೆ. ಅಧ್ಯಯನವನ್ನು ಒಟ್ಟು ಮೂರು ತಿಂಗಳ ಅವಧಿಯಲ್ಲಿ ಕೈಗೊಳ್ಳಲಾಗಿದೆ. ಒಟ್ಟು ಅವಧಿಯನ್ನು ಮೂರು ಹಂತಗಳಾಗಿ ವಿಂಗಡಿಸಲಾಗಿದೆ. ಮೊದಲ ಹಂತದಲ್ಲಿ ಸಾಹಿತ್ಯ ಸಮೀಕ್ಷೆಯನ್ನು ನಡೆಸಲಾಗಿದೆ. ಇದರಲ್ಲಿ ಅಭಿವೃದ್ಧಿ, ಸಬಲೀಕರಣ, ಗ್ರಾಮೀಣಾಭಿವೃದ್ಧಿ, ಉದ್ಯಮಶೀಲತೆ ಮುಂತಾದ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಎರಡನೆ ಹಂತದಲ್ಲಿ ಮಾಹಿತಿ ಸಂಗ್ರಹ ಕಾರ್ಯ ಕೈಗೊಳ್ಳಲಾಯಿತು. ಕೊನೆಯ ಹಂತದಲ್ಲಿ ಮಾಹಿತಿ ವಿಶ್ಲೇಷಣೆಯನ್ನು ಮಾಡಲಾಗಿದೆ. ಸಂಸ್ಥೆಗೆ ಸಂಬಂಧಪಟ್ಟ ಮಾಹಿತಿಯನ್ನು ಪ್ರಾಥಮಿಕ ಮೂಲಗಳಿಂದ ಪಡೆಯಲಾಗಿದೆ. ಪ್ರಾಥಮಿಕ ಮೂಲಕ್ಕೆ ಪ್ರಶ್ನಾವಳಿ ವಿಧಾನ ಮತ್ತು ಸಂದರ್ಶನ ವಿಧಾನವನ್ನು ಬಳಸಲಾಗಿದೆ. ಅಲ್ಲದೆ ಸಂಸ್ಥೆಯ ವಾರ್ಷಿಕ ವರದಿಯನ್ನು ಪೂರಕ ಮಾಹಿತಿಗಾಗಿ ಬಳಸಿಕೊಳ್ಳಲಾಗಿದೆ. ಸಂಸ್ಥೆಯ ಸಂಬಂಧಪಟ್ಟ ಅಧಿಕಾರಿಗಳನ್ನು ಮತ್ತು ಈ ಸಂಸ್ಥೆಯ ಫಲಾನುಭವಿಗಳನ್ನು ಕಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಮಹಿಳೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಮಾಹಿತಿಯನ್ನು ಮಾಧ್ಯಮಿಕ ಅಥವಾ ಅನುಷಂಗಿಕ ಮೂಲಗಳಿಂದ ಪಡೆಯಲಾಗಿದೆ. ಹೀಗೆ ಅಧ್ಯಯನವು ಮಾಹಿತಿಗಾಗಿ ಎರಡು ಮೂಲಗಳನ್ನು ಬಳಸಿಕೊಂಡಿದೆ.

೧.೫ ಅಧ್ಯಯನದ ಮಹತ್ವ

ಆರ್ಥಿಕಾಭಿವೃದ್ಧಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯ ದರವು ಇಂದಿನ ದಿನಗಳಲ್ಲಿ ಹೆಚ್ಚುತ್ತಿರುವುದರಿಂದ ಈ ಅಧ್ಯಯನವು ಮಹತ್ವಪೂರ್ಣವಾಗಿದೆ. ಪ್ರಸ್ತುತ ಅಧ್ಯಯನವು ಗ್ರಾಮೀಣ ಮಹಿಳೆಯರು ಹೇಗೆ ಗ್ರಾಮೀಣಾಭಿವೃದ್ಧಿಯ ಕೇಂದ್ರ ಬಿಂದುವಾಗಿದ್ದಾರೆ ಎಂಬುದನ್ನು ತಿಳಿಸುವ ಪ್ರಯತ್ನವಾಗಿದೆ. ಭಾರತದಲ್ಲಿ ಜನಸಂಖ್ಯೆಯ ಭಾಗವಹಿಸುವಿಕೆಯ ದರ ೨೦೦೧ರ ಜನಗಣತಿಯ ಪ್ರಕಾರ ಶೇ. ೩೯.೩. ಇದರಲ್ಲಿ ಮಹಿಳೆಯರ ಭಾಗವಹಿಸುವಿಕೆಯ ದರ ಶೇ. ೩೧.೬. ನಗರ ಪ್ರದೇಶಕ್ಕೆ ಹೋಲಿಸಿದಾಗ ಗ್ರಾಮೀಣ ಮಹಿಳೆಯರ ಭಾಗವಹಿಸುವಿಕೆಯ ದರ ಹೆಚ್ಚಿರುವುದು ಕಂಡು ಬರುತ್ತದೆ.

ಮಹಿಳೆಯರ ವಿಷಯದಲ್ಲಿ ಸಬಲೀಕರಣದ ಕೂಗು ಎಲ್ಲೆಡೆ ಕೇಳಿಬರುತ್ತಿರುವ ಈ ಸಂದರ್ಭದಲ್ಲಿ ಮಹಿಳಾ ಅಧ್ಯಯನಗಳು ಇಂದು ಹೆಚ್ಚು ಪ್ರಸ್ತುತ. ಸಬಲೀಕರಣ ಸಾಧಿಸಲು ಆರ್ಥಿಕ ಸ್ವಾವಲಂಬನೆ ಅತೀ ಅಗತ್ಯ. ಯಾಕೆಂದರೆ ಆರ್ಥಿಕ ಸ್ವಾವಲಂಬನೆಯು ಆರ್ಥಿಕ ಸಬಲೀಕರಣಕ್ಕೆ ದಾರಿಮಾಡಿಕೊಟ್ಟು ಸಾಮಾಜಿಕ ಸಬಲೀಕರಣ ತನ್ನಿಂದ ತಾನೆ ಸಾಧ್ಯವಾಗುತ್ತದೆ. ಅದಕ್ಕಾಗಿ ಆರ್ಥಿಕ ಸ್ವಾವಲಂಬನೆಯ ಗುರಿಯನ್ನು ಹೊಂದಿರುವ ಆರ್ಥಿಕ ಚಟುವಟಿಕೆಗಳಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಬೇಕಾಗಿದೆ. ಅದಕ್ಕಾಗಿ ಉದ್ಯಮಶೀಲತೆಯಂತಹ ಚಟುವಟಿಕೆಯನ್ನು ಮಹಿಳೆಯರಲ್ಲಿ ಅಭಿವೃದ್ಧಿಪಡಿಸಬೇಕಾದ ಅನಿವಾರ್ಯತೆ ಇದೆ. ಹಾಗಾಗಿ ಈ ಅಧ್ಯಯನವು ಉದ್ಯಮ ಶೀಲತಾ ಅಭಿವೃದ್ಧಿ ಸಂಸ್ಥೆಯ ಒಂದು ಪ್ರಕರಣವನ್ನು ಬಳಸಿಕೊಂಡು ಮಹಿಳೆಯರು ಹೇಗೆ ಆರ್ಥಿಕ ಸ್ವಾವಲಂಬಿಗಳಾಗಿದ್ದಾರೆ ಎಂಬ ವಿಚಾರವನ್ನು ತಿಳಿಸುವ ನಿಟ್ಟಿನಲ್ಲಿ ಮಹತ್ವಪೂರ್ಣವಾಗಿದೆ.

ದೇಶದ ಅಭಿವೃದ್ಧಿಗೆ ಮಾನವ ಸಂಪನ್ಮೂಲವನ್ನು ಪೂರ್ಣ ಮತ್ತು ಗರಿಷ್ಟ ಪ್ರಮಾಣದಲ್ಲಿ ಬಳಸಿಕೊಳ್ಳಬೇಕಾಗಿರುವುದರಿಂದ ಗ್ರಾಮೀಣ ಪ್ರದೇಶದ ಜನರ ಪೂರ್ಣ ಬಳಕೆ ಅದರಲ್ಲೂ ಮಹಿಳೆಯರನ್ನು ಮುಖ್ಯವಾಹಿನಿಗೆ ತರಬೇಕಾಗಿದೆ.

೧.೬ ಅಧ್ಯಯನ ಪ್ರದೇಶದ ಪರಿಚಯ

ಪ್ರಸ್ತುತ ಅಧ್ಯಯನವು ಪ್ರಕರಣ ಅಧ್ಯಯನವಾದ್ದರಿಂದ ಸಿಂಡಿಕೇಟ್ ಬ್ಯಾಂಕ್ ಪ್ರಯೋಜಿತ ಸಿಂಡಿಕೇಟ್ ಗ್ರಾಮೀಣ ಅಭಿವೃದ್ಧಿ ಟ್ರಸ್ಟ್, ಮಣಿಪಾಲ ಇದರ ವತಿಯಿಂದ ನಡೆಸಲ್ಪಡುತ್ತಿರುವ ಮಣಿಪಾಲದ ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತೆ ಅಭಿವೃದ್ಧಿ ಸಂಸ್ಥೆಯನ್ನು ಆರಿಸಿಕೊಳ್ಳಲಾಗಿದೆ. ಈ ಸಂಸ್ಥೆಯ ಕಾರ್ಯ ವ್ಯಾಪ್ತಿ ನಾಲ್ಕು ಜಿಲ್ಲೆಗಳಿಗೆ ಹರಡಿದೆ. ಅವೆಂದರೆ ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಶಿವಮೊಗ್ಗ. ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಉಡುಪಿ ಜಿಲ್ಲೆಯನ್ನು ಮಾತ್ರವೇ ಆರಿಸಿಕೊಳ್ಳಲಾಗಿದೆ. ಮೂಲತಃ ಉಡುಪಿಯು ದಕ್ಷಿಣ ಕನ್ನಡ ಜಿಲ್ಲೆಯ ಅವಿಭಾಜ್ಯ ಅಂಗವಾಗಿದ್ದ ಉತ್ತರದ ಮೂರು ತಾಲುಕುಗಳು ಸೇರಿ ೧೯೯೭ ಆಗಸ್ಟ್ ೨೫ ರಂದು ಉದ್ಘಾಟನೆಗೊಂಡು ಪ್ರತ್ಯೇಕಗೊಂಡು ಜಿಲ್ಲೆಯಾಗಿ ರೂಪುಗೊಂಡಿತು. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ૩೫೭೫ ಚದರ ಕಿಲೋಮೀಟರ್. ಆಡಳಿತದ ದೃಷ್ಟಿಯಿಂದ ಜಿಲ್ಲೆಯನ್ನು ಉಡುಪಿ, ಕುಂದಾಪುರ ಮತ್ತು ಕಾರ್ಕಳವೆಂಬ ಮೂರು ತಾಲೂಕುಗಳಾಗಿ ವಿಂಗಡಿಸಲಾಗಿದೆ. ಕರಾವಳಿಯ ಸುಂದರ ಪರಿಸರದಲ್ಲಿ ಜಿಲ್ಲೆಯಾಗಿ ರೂಪುಗೊಂಡ ಉಡುಪಿಯು ಶ್ರೀ ಕೃಷ್ಣನ ನಾಡಾಗಿದ್ದು, ಹೋಟೆಲ್ ಉದ್ಯಮ, ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಗಳಿಂದಾಗಿ ಅಂತರಾಷ್ಟ್ರೀಯ ಖ್ಯಾತಿಯನ್ನು ಹೊಂದಿದೆ. ೨೦೦೧ರ ಜನಗಣತಿಯ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ ೧೧,೧೨,೨೪೩. ಜಿಲ್ಲೆಯು ಶೇ. ೮೧.೪೫ರಷ್ಟು ಗ್ರಾಮೀಣ ಜನಸಂಖ್ಯೆಯನ್ನು ಹೊಂದಿದೆ. ಕೃಷಿ,

ಮೀನುಗಾರಿಕೆ, ತೆಂಗು ಬೆಳೆ ಇತ್ಯಾದಿ ಜಿಲ್ಲೆಯ ಜನರ ಪ್ರಮುಖ ಉದ್ಯೋಗವಾಗಿದೆ. ಜಿಲ್ಲೆಯ ಪ್ರಮುಖ ಭಾಷೆಗಳು ತುಳು, ಕನ್ನಡ ಮತ್ತು ಕೊಂಕಣಿ. ಜಿಲ್ಲೆಯ ಒಟ್ಟು ಸಾಕ್ಷರತೆ ಪ್ರಮಾಣ ೯೨%. ಕರ್ನಾಟಕದಲ್ಲೇ ಅತೀ ಹೆಚ್ಚು ಸಾಕ್ಷರತೆಯನ್ನು ಹೊಂದಿದ ಕೀರ್ತಿ ಜಿಲ್ಲೆಗೆ ಸಲ್ಲುತ್ತದೆ. ಅಲ್ಲದೆ ರಾಜ್ಯದ ಮಾನವ ಅಭಿವೃದ್ಧಿ ಸೂಚಿಯಲ್ಲಿ ಮೂರನೇ ಸ್ಥಾನವನ್ನು ಹೊಂದಿರುವ ಜಿಲ್ಲೆಯು ಅಭಿವೃದ್ಧಿ ಹೊಂದಿದ ಜಿಲ್ಲೆಗಳಲ್ಲೊಂದಾಗಿದೆ.

ಉಡುಪಿ:- ಉಡುಪಿ ತಾಲೂಕು ಜಿಲ್ಲೆಯ ಪ್ರಮುಖ ಪ್ರದೇಶವಾಗಿದೆ. ಜಿಲ್ಲೆಯ ಕೇಂದ್ರ ಸ್ಥಳವಾದ ಉಡುಪಿ ತಾಲೂಕು ಸುಮಾರು ೫೦,೦೦೦ ಜನಸಂಖ್ಯೆಯನ್ನು ಹೊಂದಿದೆ.

ಕಾರ್ಕಳ :- ೨೬.೦೬ ಚದರ ಕಿಲೋಮೀಟರ್ ಭೌಗೋಳಿಕ ಪ್ರದೇಶವನ್ನು ಹೊಂದಿರುವ ಕಾರ್ಕಳ ತಾಲೂಕು ಜಿಲ್ಲೆಯ ಮುಖ್ಯ ಪಟ್ಟಣವಾಗಿದೆ. ೨೦೦೧ರ ಜನಗಣತಿಯ ಪ್ರಕಾರ ೨೫,೧೧೮ ಜನಸಂಖ್ಯೆಯನ್ನು ಹೊಂದಿದೆ. ಶೇ.೫೧ರಷ್ಟು ಪುರುಷ ಜನಸಂಖ್ಯೆಯನ್ನು ಮತ್ತು ಶೇ.೪೯ರಷ್ಟು ಮಹಿಳಾ ಜನಸಂಖ್ಯೆಯನ್ನು ಹೊಂದಿದೆ. ಸಾಕ್ಷರತೆ ಪ್ರಮಾಣ ಶೇ. ೮೨ ಆಗಿದ್ದು, ಮಹಿಳಾ ಸಾಕ್ಷರತೆ ಶೇ. ೭೯ ಮತ್ತು ಪುರುಷರ ಸಾಕ್ಷರತೆ ಶೇ. ೮೫ ಆಗಿದೆ.

ಕುಂದಾಪುರ :- ಜಿಲ್ಲೆಯ ಉತ್ತರ ಭಾಗದಲ್ಲಿರುವ ಇನ್ನೊಂದು ತಾಲೂಕು ಕುಂದಾಪುರ. ೨೦೦೧ರ ಜನಗಣತಿಯ ಪ್ರಕಾರ ತಾಲೂಕಿನ ಒಟ್ಟು ಜನಸಂಖ್ಯೆ ೨೮,೪೯೫. ಶೇ. ೪೯ರಷ್ಟು ಪುರುಷ ಜನಸಂಖ್ಯೆಯನ್ನು ಮತ್ತು ಶೇ. ೫೧ರಷ್ಟು ಮಹಿಳಾ ಜನಸಂಖ್ಯೆಯನ್ನು ಹೊಂದಿದೆ. ಸಾಕ್ಷರತೆ ಪ್ರಮಾಣ ಶೇ. ೯೨ ಆಗಿದ್ದು, ಮಹಿಳಾ ಸಾಕ್ಷರತೆ ಶೇ. ೮೮ ಮತ್ತು ಪುರುಷರ ಸಾಕ್ಷರತೆ ಶೇ ೯೪ ಆಗಿದೆ.

ಅಧ್ಯಾಯ – ೨ : ಸಬಲೀಕರಣದ ನಿರೂಪಣೆ

- ಪ್ರವೇಶ
- ಸಬಲೀಕರಣ– ಆಯಾಮ ಮತ್ತು ಅನ್ವಯ
- ಅಭಿವೃದ್ಧಿಯ ಪರಿಕಲ್ಪನೆ ಮತ್ತು ಪಥ
- ಮಹಿಳೆ ಮತ್ತು ಅಭಿವೃದ್ಧಿ
- ಗ್ರಾಮೀಣಾಭಿವೃದ್ಧಿ ಮತ್ತು ಮಹಿಳೆ
- ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ

ಅಧ್ಯಾಯ - ೨ : ಸಬಲೀಕರಣದ ನಿರೂಪಣೆ

೨.೧ ಪ್ರವೇಶ

ಸಬಲೀಕರಣ ಎಂಬುದು ತೊಂಬತ್ತರ ದಶಕದ ವಿದ್ಯಮಾನವಾಗಿದ್ದು, ಇದನ್ನು ಅಧಿಕಾರ ನೀಡುವುದು, ತನ್ನೊಳಗೆ ಅಧಿಕಾರ ಸೃಷ್ಟಿಸುವುದು ಮತ್ತು ಸಮರ್ಥರನ್ನಾಗಿಸುವುದು ಎಂದೆಲ್ಲಾ ವ್ಯಾಖ್ಯಾನಿಸಲಾಗುತ್ತದೆ. ಆಂಗ್ಲ ಪದ 'ಎಂಪವರ್‌ಮೆಂಟ್' ಅನ್ನು ಕನ್ನಡದಲ್ಲಿ ಸಬಲೀಕರಣ ಅಥವಾ ಸಶಕ್ತೀಕರಣ ಎಂದು ಅನುವಾದಿಸಲಾಗಿದೆ. ಎಂಪವರ್‌ಮೆಂಟ್ ಪದಕ್ಕೆ ನಿಘಂಟಿನಲ್ಲಿ ಶಕ್ತಿ ಕೊಡು, ಅಧಿಕಾರ ವಹಿಸು, ಕಾನೂನಿನ ಹಕ್ಕುಗಳನ್ನು ನೀಡು, ಸಮರ್ಥ ಮಾಡು ಅರ್ಹತೆ, ಹೆಸರು, ಬಿರುದು ಕೊಡು ಎಂಬ ಅರ್ಥಗಳನ್ನು ನೀಡಲಾಗಿದೆ. ಇಲ್ಲಿ ಸ-ಬಲಕರಣ ಅಂದರೆ ವೈಯಕ್ತಿಕವಾಗಿ ಅಥವಾ ಸ್ವಂತವಾಗಿ ಸಬಲಗೊಳ್ಳುವ ಅಥವಾ ಶಕ್ತರಾಗುವ ಪ್ರಕ್ರಿಯೆ ಎಂದು ಹೇಳಬಹುದು. ಇನ್ನೊಂದು ಅರ್ಥದಲ್ಲಿ ಸಬಲೀಕರಣವೆಂದರೆ ಬಡವರ ದೀನ ದಲಿತರ ಪರಾವಲಂಬಿತರ ಶಕ್ತಿ ಸಂವರ್ಧನೆ ಎಂದರ್ಥ.

ಮಹಿಳೆಯರು ಶೋಷಿತರಾಗಿರುವುದರಿಂದ ಅವರ ಸಬಲೀಕರಣ ಅಥವಾ ಶಕ್ತಿ ಸಂವರ್ಧನೆ ಕುರಿತು ಇಂದು ಜಗತ್ತಿನಾದ್ಯಂತ ಚರ್ಚೆ ನಡೆಯುತ್ತಿದೆ. ಮಹಿಳೆಯರು ಸಮಸ್ತ ಕ್ಷೇತ್ರದಲ್ಲೂ ಪುರುಷರಿಗೆ ಹೋಲಿಸಿದಂತೆ ಹಿಂದೆ ಬಿದ್ದಿದ್ದಾರೆ. ಹೀಗಾಗಿ ಮಹಿಳೆಯರನ್ನು ಸಮಾಜವೊಂದರ ದುರ್ಬಲ ವರ್ಗವೆಂದು ಕರೆಯಲಾಗುವುದು.

ಸಬಲೀಕರಣ ಅರ್ಥ : -

ಕೇವಲ ನಿರ್ಧಾರ ಕೈಗೊಳ್ಳುವ ಹಕ್ಕನ್ನು ಪಡೆಯುವುದೇ ಸಶಕ್ತೀಕರಣವಲ್ಲ. ಮಹಿಳೆಯರು ತಮ್ಮನ್ನು ತಾವು ಸಮರ್ಥರು, ನಿರ್ಧಾರ ಕೈಗೊಳ್ಳುವ ಶಕ್ತಿ ಇರುವವರು ಎಂಬ ಭಾವನೆಯನ್ನು ಬೆಳೆಸಿಕೊಳ್ಳಬೇಕು. ಮಹಿಳೆಯರು ಈ ಭಾವನೆಯನ್ನು ಬೆಳೆಸಿಕೊಳ್ಳುವುದು, ಸಂಪನ್ಮೂಲಗಳ ಮೇಲಿನ ನಿಯಂತ್ರಣ ಹೊಂದುವುದು, ಆತ್ಮ ವಿಶ್ವಾಸ, ಅರಿವು, ಆತ್ಮ ಗೌರವ ಬೆಳೆಸಿಕೊಂಡು ಸ್ವಂತ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವನ್ನು ಪಡೆಯುವುದೇ ಮಹಿಳಾ ಸಶಕ್ತೀಕರಣ.

ಮಹಿಳಾ ಸಬಲೀಕರಣವು ಬಹು ಆಯಾಮಗಳನ್ನು ಹೊಂದಿರುವ ಒಂದು ಸಾಮಾಜಿಕ ಪ್ರಕ್ರಿಯೆ. ಮಹಿಳೆಯರು ತಮ್ಮ ಆರ್ಥಿಕ ಸ್ವಾತಂತ್ರ್ಯ ಪಡೆಯುವುದರ ಜೊತೆಗೆ ರಾಜಕೀಯ ಭಾಗವಹಿಸುವಿಕೆ ಮತ್ತು ಸಾಮಾಜಿಕ ಅಭಿವೃದ್ಧಿಗೆ ಕಾರಣವಾಗುವ ಬೇರೆ ಬೇರೆ ಅಂಶಗಳ ಮೇಲೆ ನಿಯಂತ್ರಣವನ್ನು ಸಾಧಿಸುವುದು ಮತ್ತು ಅವುಗಳನ್ನು ಹೊಂದುವಂತೆ ಮಾಡುವ ಪ್ರಕ್ರಿಯೆಯೇ ಸಬಲೀಕರಣ.

ನೈಲಾ ಕಬೀರ್- ಅವರ ಪ್ರಕಾರ ಮಹಿಳೆಯರು ತಮ್ಮ ಸ್ವಾವಲಂಬನೆಯನ್ನು ಹೆಚ್ಚಿಸಿಕೊಂಡು

ಸ್ವಾತಂತ್ರ್ಯದ ಹಕ್ಕನ್ನು ಪ್ರತಿಪಾದಿಸುವ, ಆಯ್ಕೆ ಮಾಡುವ, ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವ ಮತ್ತು ಪರಾಧೀನತೆಯನ್ನು ಪ್ರಶ್ನಿಸಿ ಅದನ್ನು ಹೋಗಲಾಡಿಸುವ ಸಾಮರ್ಥ್ಯವನ್ನು ಪಡೆಯುವ ಪ್ರಕ್ರಿಯೆಯೇ ಮಹಿಳಾ ಸಶಕ್ತೀಕರಣ.

ಕ್ಯಾರೊಲಿನ್ ಮೋಸರ್– ಅವರ ಪ್ರಕಾರ ಮಹಿಳೆಯರು ಸ್ವಾವಲಂಬನೆ ಮತ್ತು ಆಂತರಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದೆ ಸಶಕ್ತೀಕರಣ. ಭೌತಿಕ ಹಾಗೂ ಅಭೌತಿಕ ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸಿ ಅದರ ಮೂಲಕ ಜೀವನದಲ್ಲಿ ಆಯ್ಕೆ ಸ್ವಾತಂತ್ರ್ಯವನ್ನು ಪಡೆಯುವುದು ಹಾಗೂ ಬದಲಾವಣೆಯನ್ನು ಪ್ರಭಾವಿಸುವ ಸಾಮರ್ಥ್ಯ ಪಡೆಯುವುದೇ ಮಹಿಳಾ ಸಶಕ್ತೀಕರಣ.

ಸಬಲೀಕರಣವು ಒಂದು ಪ್ರಕ್ರಿಯೆಯಾಗಿದ್ದು ಮಹಿಳೆಯರು ತಮ್ಮಸ್ವಾವಲಂಬನೆಯನ್ನು ವೃದ್ಧಿಸುವುದಕ್ಕೋಸ್ಕರ, ಆಯ್ಕೆಗಳನ್ನು ಮಾಡಿಕೊಳ್ಳಲು ತಮಗಿರುವ ವೈಯುಕ್ತಿಕ ಹಕ್ಕನ್ನು ಪ್ರತಿಪಾದಿಸುವುದಕ್ಕೋಸ್ಕರ, ಮತ್ತು ತಮ್ಮ ಅಧೀನತೆಯನ್ನು ಪ್ರಶ್ನಿಸುವ ಮತ್ತು ನಿವಾರಿಸುವಲ್ಲಿ ತಮ್ಮೊಳಗೆ ಸಂಘಟಿತರಾಗುವುದಾಗಿದೆ ಎಂದು ಕೆಲ್ಲರ್ ಮತ್ತು ಮ್ಬ್ವೆ (೧೯೯೧) ವರ್ಣಿಸಿದ್ದಾರೆ.

ಮೇಲಿನ ವ್ಯಾಖ್ಯೆಗಳಿಂದ ಮಹಿಳಾ ಸಬಲೀಕರಣದಲ್ಲಿ ಕೆಲವು ಪ್ರಮುಖ ಅಂಶಗಳನ್ನು ಗುರುತಿಸಬಹುದು.

೧. ಇದು ಸಂಪನ್ಮೂಲದ ಮೇಲಿನ ನಿಯಂತ್ರಣ ಹಾಗೂ ಸ್ವಾವಲಂಬನೆಗೆ ಸಂಬಂಧಪಟ್ಟದ್ದು.

೨. ಸಮಾನತೆ ಸಾಧಿಸುವುದು ಮತ್ತು ನಿರ್ಧಾರ ಕೈಗೊಳ್ಳುವ ಆಯ್ಕೆಯ ಹಕ್ಕನ್ನು ಪಡೆಯುವುದು ಇದರ ಗುರಿ.

೩. ಆತ್ಮವಿಶ್ವಾಸ ಗಳಿಸುವುದು, ಉತ್ಪಾದಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದು,

೪. ಅರಿವು ಮೂಡಿಸಿಕೊಳ್ಳುವುದು, ಸಮಾಜದಲ್ಲಿ ಈಗಿರುವ ಅಧಿಕಾರ ಸಂಬಂಧಗಳನ್ನು ಪ್ರಶ್ನಿಸಿ ಬದಲಾಯಿಸುವುದೇ ಸಶಕ್ತೀಕರಣ.

ಸಬಲೀಕರಣ ಅಥವಾ ಸಶಕ್ತೀಕರಣ ಪದವನ್ನು ಇತೀಚಿನ ವರ್ಷಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ವ್ಯಾಪಕವಾಗಿ ಬಳಸಲಾಗುತ್ತದೆ. ಅನೇಕ ವೇಳೆ ಇದನ್ನು ಮಹಿಳಾ ಅಭಿವೃದ್ಧಿ, ಮಹಿಳಾ ಕಲ್ಯಾಣ, ಮಹಿಳಾ ಜಾಗೃತಿ, ಮಹಿಳಾ ಭಾಗವಹಿಸುವಿಕೆ, ಮಹಿಳೆಯರ ಉದ್ಧಾರ, ಮಹಿಳಾ ಪ್ರಗತಿ ಎಂಬ ಪದಗಳಿಗೆ ಪರ್ಯಾಯವಾಗಿ ಬಳಸಲಾಗುತ್ತದೆ. ಆದರೆ ಮಹಿಳಾ ಸಬಲೀಕರಣವು ವಿಶಿಷ್ಟವೂ ವಿಶಾಲವೂ ಆದ ಪರಿಕಲ್ಪನೆಯಾಗಿದೆ. ಮಹಿಳಾ ಸಬಲೀಕರಣ ಎಂಬುದು ಭಾರತದ ಇತ್ತೀಚಿನ ಅಭಿವೃದ್ಧಿ ಕಾರ್ಯಗಳಲ್ಲಿ ಒಂದು ಪ್ರಮುಖ ವಿಷಯವಾಗಿದೆ. ಅದರಲ್ಲೂ ಗ್ರಾಮದ

ಮಹಿಳೆಯರನ್ನು ಆರ್ಥಿಕವಾಗಿ ಬಲಗೊಳಿಸಬೇಕಾಗಿರುವುದು ಮತ್ತಷ್ಟು ಪ್ರಮುಖ ಚರ್ಚಾ ವಿಷಯವಾಗಿದೆ. ಇದಕ್ಕೆ ಕಾರಣ ದೇಶದ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಶೇಕಡಾ ೮೧ ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿರುವುದು ಮತ್ತು ದೇಶದ ಒಟ್ಟು ೩೧ ದಶಲಕ್ಷ ದುಡಿಯುವ ಮಹಿಳೆಯರಲ್ಲಿ ಶೇ.೬೫ ರಷ್ಟು ಮಂದಿ ಹಳ್ಳಿಗಳಲ್ಲಿ ವಾಸಿಸುತ್ತಿರುವುದು.

೩.೧ ಸಬಲೀಕರಣ– ಆಯಾಮ ಮತ್ತು ಅನ್ವಯ

ಸಬಲೀಕರಣದ ಆಯಾಮಗಳು

ಹೆಚ್ಚಿನೆಲ್ಲಾ ಆಧುನಿಕ ಪ್ರಜಾಪ್ರಭುತ್ವ ರಾಷ್ಟ್ರಗಳು ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳು ಮಹಿಳಾ ಸಬಲೀಕರಣದ ಪ್ರಕ್ರಿಯೆ ಬಗ್ಗೆ ಸಾರ್ವಜನಿಕ ಅಜೆಂಡಾವನ್ನು ಹೊಂದಿವೆ. ಇದೊಂದು ಅಂತರಾಷ್ಟ್ರೀಯ ಬದ್ಧತೆಯಾಗಿದೆ.

ಮಹಿಳಾ ಸಬಲೀಕರಣ ಎನ್ನುವುದು ಸಂಕೀರ್ಣವಾದ ಕಲ್ಪನೆಗಳುಳ್ಳ ಒಂದು ಪ್ರಕ್ರಿಯೆಯಾಗಿದೆ. ಇದು ಮಹಿಳೆಯರಲ್ಲಿ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಶಕ್ತಿ ಮತ್ತು ಸಾಮರ್ಥ್ಯಗಳನ್ನು ಅರ್ಥೈಸಿಕೊಳ್ಳಲು ಸಹಕಾರಿಯಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಮಹಿಳೆಯರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿಚಾರಗಳಿಗೆ ಸಂಬಂಧಿಸಿದಂತೆ ಸ್ವಯಂ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆ ಎಂದು ಹೇಳಬಹುದು. ಸಹಜವಾಗಿಯೆ ಮಹಿಳೆಯರ ವೈಯಕ್ತಿಕ ಹಾಗೂ ಸಾಮುದಾಯಿಕ ಸಬಲೀಕರಣವು ಸ್ವಾವಲಂಬನೆ, ಸ್ವ ಅರಿವು, ಸಾಮುದಾಯಿಕತೆ ಮತ್ತು ಸಂಘಟನೆ ಕೌಶಲ್ಯ ಮತ್ತು ಸಾಮರ್ಥ್ಯ ಬೆಳೆಸಿಕೊಳ್ಳುವುದು, ಹೊರ ಜಗತ್ತಿನ ಸಂಬಂಧಗಳನ್ನು ಆಧರಿಸಿದೆ.

ಹಾಗಾಗಿ ಮಹಿಳೆಯರ ಸಬಲೀಕರಣವನ್ನು ಒಂದು ಬಹು ಆಯಾಮವುಳ್ಳ ವಿದ್ಯಮಾನವಾಗಿ ಕಾಣಬಹುದು. ಇದು ಕೇವಲ ರಾಜಕೀಯ ಅಥವಾ ಆರ್ಥಿಕ ಸಬಲೀಕರಣವನ್ನು ಮಾತ್ರ ಹೊಂದಿಲ್ಲ. ಬದಲಾಗಿ ಸಮಾಜ, ಸಮುದಾಯ ಮತ್ತು ಸ್ವತಃ ವ್ಯಕ್ತಿ ಪರಿವರ್ತನೆಗೊಳ್ಳಬೇಕೆಂದು ಸೂಚಿಸುತ್ತದೆ. ಮಹಿಳಾ ಸಬಲೀಕರಣವು ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಹಾಗೂ ನೆಲೆಗಳನ್ನು ಹೊಂದಿದೆ. ಮಹಿಳಾ ಸಬಲೀಕರಣ ಕ್ರಿಯೆಯು ಕೆಳಕಂಡ ಆಯಾಮಗಳನ್ನು ಒಳಗೊಳ್ಳುತ್ತದೆ ಎನ್ನಲಾಗುವುದು.

೧. ಮಹಿಳಾ ಸ್ವಾತಂತ್ರ್ಯ ಮತ್ತು ಸಮಾನತೆ

೨. ಮಹಿಳೆಗೆ ಆರ್ಥಿಕ ಅವಕಾಶಗಳ ಸೃಷ್ಟಿ

೩. ಶಿಕ್ಷಣ, ಆರೋಗ್ಯ, ಸುರಕ್ಷೆಗಳಿಗೆ ಮಹಿಳೆಯರ ಪ್ರವೇಶ

೪. ಮಹಿಳಾ ಸಬಲೀಕರಣಕ್ಕೆ ಅವಶ್ಯವಾದ ಕಾನೂನು ಮತ್ತು ಶಾಸನಾತ್ಮಕ ಚೌಕಟ್ಟನ್ನು ನಿರ್ಮಿಸುವುದು. ಈ ಶಾಸನಾತ್ಮಕ ಚೌಕಟ್ಟನ್ನು ಮಹಿಳಾ ಶೋಷಣೆ, ದಮನ, ತಾರತಮ್ಯಗಳು ಅಪರಾಧವೆಂದು ಪರಿಗಣಿಸುವುದು.

ಮಹಿಳಾ ಸಬಲೀಕರಣ ಕ್ರಿಯೆಯಲ್ಲಿ ಸಮಾಜಕ್ಕೆ ಮತ್ತು ಸರ್ಕಾರಕ್ಕೆ ಮಹತ್ವದ ಪಾತ್ರವಿದೆ. ಸಮಾಜವೆಂದರೆ ಪುರುಷ ಮತ್ತು ಮಹಿಳೆ ಮತ್ತು ಅವರು ಕಟ್ಟಿ ಬೆಳೆಸಿರುವ ಸಾಮಾಜಿಕ ಸಂಸ್ಥೆಗಳಾದ ಕುಟುಂಬ, ಧರ್ಮ, ಧಾರ್ಮಿಕ ಕೇಂದ್ರಗಳು. ಎಲ್ಲರೂ ಮಹಿಳಾ ಸಬಲೀಕರಣದಲ್ಲಿ ವಿಶ್ವಾಸ ತಳೆಯಬೇಕಾಗಿರುವುದು ಇಂದಿನ ತುರ್ತು ಅಗತ್ಯವಾಗಿದೆ. ಅಲ್ಲದೆ ಮಹಿಳಾ ಸಬಲೀಕರಣಕ್ಕಾಗಿ ಅವಶ್ಯವಿರುವ ಆರ್ಥಿಕ ಬೆಳವಣಿಗೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಬೇಕು.

ಮಹಿಳಾ ಉನ್ನತಿಗೆ ಸಂಬಂಧಿಸಿದ ದೃಷ್ಟಿಕೋನದಲ್ಲಿ ಈಗ ಬದಲಾವಣೆಯಾಗಿ ಮಹಿಳೆಯರ ಶ್ರೇಯೋಭಿವೃದ್ಧಿಗೆ ಬದಲಾಗಿ ಮಹಿಳೆಯರ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ೧೯೭೧ರಲ್ಲಿ ಭಾರತದಲ್ಲಿ ಮಹಿಳೆಯರ ಸ್ಥಿತಿಗತಿಯ ಬಗ್ಗೆ ಸಮಿತಿಯೊಂದನ್ನು ನೇಮಿಸುವುದರ ಮೂಲಕ ಮಹಿಳೆಯರ ಸ್ಥಿತಿಗತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಪ್ರಥಮ ಗಂಭೀರ ಪ್ರಯತ್ನ ಮಾಡಲಾಯಿತು. ಇದರ ವರದಿಯನ್ನು ೧೯೭೪ ರಲ್ಲಿ ಸಲ್ಲಿಸಲಾಗಿದ್ದು, ೧೯೮೮ ರಿಂದ ೨೦೦೦ದ ಅವಧಿಗೆ ಮಹಿಳೆಯರಿಗಾಗಿ ದೂರದೃಷ್ಟಿಯುಳ್ಳ ಯೋಜನೆಯ ರಚನೆಗೆ ಇದು ಕಾರಣವಾಯಿತು.

೨೦೦೧ ವರ್ಷವನ್ನು ವಿಶ್ವ ಸಂಸ್ಥೆ ಮಹಿಳಾ ಸಬಲೀಕರಣದ ವರ್ಷವೆಂದು ಘೋಷಿಸಿದ ಬೆನ್ನಲ್ಲೇ ಮಾರ್ಚ್ ೨೦, ೨೦೦೧ರಲ್ಲಿ ರಾಷ್ಟ್ರೀಯ ಮಹಿಳಾ ಸಬಲೀಕರಣ ನೀತಿಯನ್ನು ಪ್ರಕಟಿಸಲಾಯಿತು. ಈ ನೀತಿಯ ಮುಖ್ಯಾಂಶಗಳು ಈ ಕೆಳಗಿನಂತಿವೆ.

* ಸಾಮಾಜಿಕ ದೃಷ್ಟಿಕೋನದ ಬದಲಾವಣೆಯಿಂದ ಮಹಿಳಾ ಸಬಲೀಕರಣ
* ಮಹಿಳೆಯರಿಗೆ ಸಂಬಂಧಿಸಿದಂತೆ ಎಲ್ಲಾ ತಾರತಮ್ಯಗಳನ್ನು ತೆಗೆದುಹಾಕುವುದು.
* ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಅವಕಾಶ
* ಮಾನವಿಕ ಅಭಿವೃದ್ಧಿಯಲ್ಲಿ ಮಹಿಳಾ ಅಭಿವೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯ
* ಆರ್ಥಿಕ ಅಭಿವೃದ್ಧಿಯ ನಿರ್ಣಯಗಳನ್ನು ಮಹಿಳೆಯರ ವಿಚಾರಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು.
* ತ್ರಿವಳಿ ಸೂತ್ರಗಳಾದ ಸಾಮಾಜಿಕ ಸಬಲೀಕರಣದ ಹಾಗೂ ಅರ್ಥಿಕ ಸಬಲೀಕರಣದ ಸಾಧಿಸುವಿಕೆ

ಮತ್ತು ಲಿಂಗಭೇದಭಾವದ ಅನ್ಯಾಯವನ್ನು ಹೋಗಲಾಡಿಸುವುದು.

ಆರ್ಥಿಕ ಸಬಲೀಕರಣ ಮತ್ತು ಮಹಿಳೆಯರ ಕಲ್ಯಾಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ. ಅವುಗಳೆಂದರೆ ಸ್ವಯಂ ಸಿದ್ಧ, ರಾಷ್ಟ್ರೀಯ ಮಹಿಳಾ ಕೋಶ್, ಸ್ವಲಂಬನ್ ಮತ್ತು ತರಭೇತಿ ಮತ್ತು ಉದ್ಯೋಗ ಕಾರ್ಯಕ್ರಮಗಳಿಗೆ ಬೆಂಬಲ, ಸ್ವಧರ್ ಮತ್ತು ದುಡಿಯುವ ಮಹಿಳೆಯರಿಗಾಗಿ ವಸತಿಗೃಹ ಇತ್ಯಾದಿ.

೨.೨ ಅಭಿವೃದ್ಧಿಯ ಪರಿಕಲ್ಪನೆ ಮತ್ತು ಪಥ

ಅಭಿವೃದ್ಧಿಯ ಪರಿಕಲ್ಪನೆ :

ಅಭಿವೃದ್ಧಿ ಎನ್ನುವುದು ಇಂದು ಅತ್ಯಂತ ಜನಜನಿತವಾದ ಒಂದು ಪರಿಭಾವನೆಯಾಗಿದೆ. ಅಭಿವೃದ್ಧಿ ಎನ್ನುವುದು ಹಿಂದುಳಿದ ರಾಷ್ಟ್ರಗಳ ಒಂದು ಷರತ್ತಾಗಿದೆ. ಅಭಿವೃದ್ಧಿ ಎಂದರೆ ಸಾಮಾನ್ಯ ಅರ್ಥದಲ್ಲಿ ಪ್ರಗತಿ ಪಥದತ್ತ ಮುನ್ನಡೆಯುವುದು ಎಂದು ಅಭಿವೃದ್ಧಿ ಎನ್ನುವುದು ಕೆಳಮಟ್ಟದಿಂದ ಮೇಲ್ಮಟ್ಟಕ್ಕೆ ಬದಲಾವಣೆಯಾಗುವಂಥ ಒಂದು ಕ್ರಿಯೆ. ಅಭಿವೃದ್ಧಿ ಎಂದರೆ ಕೇವಲ ಆರ್ಥಿಕಾಭಿವೃದ್ಧಿ ಎಂದು ಅರ್ಥವಲ್ಲ. ಅಭಿವೃದ್ಧಿಗೆ ವಿಶಾಲವಾದ ಅರ್ಥವಿದ್ದು, ಸಾಮಾಜಿಕ ಅಭಿವೃದ್ಧಿಯೇ ನಿಜವಾದ ಅಭಿವೃದ್ಧಿ ಎಂಬುದು ಬಹುಮುಖ್ಯವಾದ ಅಂಶ. ಜೀವನ ಗುಣಮಟ್ಟದಲ್ಲಿ ಹೆಚ್ಚಳ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವಂತಹ ಸಾಮಾಜಿಕ ವ್ಯವಸ್ಥೆಯ ನಿರ್ಮಾಣ ಮೂಲಭೂತ ಅವಶ್ಯಕತೆಗಳನ್ನಾದರೂ ಪೂರೈಸಿಕೊಳ್ಳಬಹುದಾದಂತಹ ಒಂದು ಪರಿಸ್ಥಿತಿ ಇನ್ನೂ ಹತ್ತು ಹಲವು ಪರಿಸ್ಥಿತಿಗಳು ಆರ್ಥಿಕ ಬೆಳವಣಿಗೆಯ ಜೊತೆಜೊತೆಗೆ ನಿರ್ಮಾಣವಾದಾಗ ಮಾತ್ರ ಅಭಿವೃದ್ಧಿ ಒಂದು ನಿಜವಾದ ಅರ್ಥದಲ್ಲಿ ಉಂಟಾಗುವುದು. ಅಭಿವೃದ್ಧಿ ಎನ್ನುವುದು ಬಹು ಆಯಾಮಗಳನ್ನು ಹೊಂದಿರುವಂಥ ಒಂದು ಪರಿಕಲ್ಪನೆ.

ಎರಡನೇ ಮಹಾಯುದ್ಧದ ನಂತರ ವಸಾಹತುಶಾಹಿಯಿಂದ ಮುಕ್ತಗೊಂಡ ಹಾಗೂ ಹೊಸದಾಗಿ ಹುಟ್ಟಿಕೊಂಡ ದೇಶಗಳು ತಮ್ಮ ಗಮನವನ್ನು ಅಭಿವೃದ್ಧಿಯತ್ತ ಹರಿಸಿದವು. ಅಭಿವೃದ್ಧಿ ಎಂಬ ಪರಿಕಲ್ಪನೆಯು ಏನನ್ನು ಒಳಗೊಂಡಿರಬೇಕು ಎಂಬುದರ ಬಗ್ಗೆ ಕೂಡ ವಿಶೇಷವಾದ ಗಮನವನ್ನು ಹರಿಸಲಾಯಿತು. ೧೯೭೦ರ ದಶಕದಲ್ಲಿ ಅನೇಕ ದೇಶಗಳ ಪರಿಸ್ಥಿತಿ ನಿರೀಕ್ಷಿಸಿದ್ದಕ್ಕಿಂತ ವಿರುದ್ಧವಾದ ದಿಕ್ಕಿನಲ್ಲಿ ಚಲಿಸಿದ್ದು ಕಂಡು ಬಂದಿತು. ಆರ್ಥಿಕ ಬೆಳವಣಿಗೆಯ ಜೊತೆ ಬಡತನವೂ ಹೆಚ್ಚಾಗುತ್ತಿತ್ತು. ಈ ಹಂತದಲ್ಲಿ ಅಭಿವೃದ್ಧಿ ಎಂಬ ಪರಿಕಲ್ಪನೆಯು ವ್ಯಾಖ್ಯೆಯು ಬದಲಾಗಿ ಹೆಚ್ಚು ವಿಶಾಲವಾದ ಅರ್ಥವನ್ನು ಪಡೆದುಕೊಂಡಿತು. ಅಭಿವೃದ್ಧಿಯನ್ನು ಅಳೆಯುವ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ವಿಚಾರದಲ್ಲಿ ಆರ್ಥಿಕ ಅಂಶಗಳ ಜೊತೆಗೆ ಆರ್ಥಿಕೇತರ ಅಂಶಗಳನ್ನು ಅಭಿವೃದ್ಧಿಯ ಮಟ್ಟವನ್ನು ಅಳೆಯುವ ಮಾಪಕದಲ್ಲಿ

ಸೇರಿಸಲಾಯಿತು. ಅಭಿವೃದ್ಧಿಯ ಹೊಸ ವ್ಯಾಖ್ಯಾನದಲ್ಲಿ ಬಡತನದ ನಿರ್ಮೂಲನೆ, ಸಮಾನ ಹಂಚಿಕೆ, ಸಾಮಾಜಿಕ ನ್ಯಾಯ ಮುಂತಾದ ಆರ್ಥಿಕೇತರ ಅಂಶಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಯಿತು. ಅದರಲ್ಲೂ ವಿಶೇಷವಾಗಿ ಅಭಿವೃದ್ಧಿಶೀಲ ಸಮಾಜಗಳ ಸನ್ನಿವೇಶದಲ್ಲಿ ಅಭಿವೃದ್ಧಿ ಎಂಬ ಪದವನ್ನು ವಿವರಿಸಲಾಯಿತು. ಕೇವಲ ಉತ್ಪನ್ನ, ಆದಾಯ, ಬಂಡವಾಳ ಹೂಡಿಕೆಯನ್ನು ಹೆಚ್ಚಿಸಿದರೆ ಅಭಿವೃದ್ಧಿಯನ್ನು ಹೊಂದಲು ಸಾಧ್ಯವಿಲ್ಲ. ಅವುಗಳ ಜೊತೆ ಸಾಮಾಜಿಕ ಅಂಶಗಳು ಎಂದರೆ ಜೀವನ ಮಟ್ಟವನ್ನು ಸುಧಾರಿಸುವುದು, ಮೂಲಭೂತ ಸೌಕರ್ಯಗಳಾದ ಆಹಾರ, ಆರೋಗ್ಯ, ಶಿಕ್ಷಣ, ಸಾರಿಗೆ ವ್ಯವಸ್ಥೆ, ಕುಡಿಯುವ ನೀರು ಮುಂತಾದುವುಗಳನ್ನು ನೀಡುವುದರ ಮೂಲಕ ಅಭಿವೃದ್ಧಿಯನ್ನು ಸಾಧಿಸಬಹುದು ಎಂಬ ಅಂಶವನ್ನು ಎತ್ತಿ ಹಿಡಿಯಲಾಯಿತು.

ಅಭಿವೃದ್ಧಿಯ ಅಳೆಯುವಿಕೆಯಲ್ಲಿ ಸಾಕ್ಷರತೆ, ಮರಣ ಪ್ರಮಾಣ, ಆಯುರ್ಮಾನ, ಜೀವನದ ಭೌತಿಕ ಗುಣಮಟ್ಟ ಮುಂತಾದ ಆರ್ಥಿಕೇತರ ಅಂಶಗಳು ಸೇರಿಕೊಂಡವು. ಒಟ್ಟಿನಲ್ಲಿ ಅಭಿವೃದ್ಧಿಯು ಅಭಿವೃದ್ಧಿಶೀಲ ರಾಷ್ಟ್ರಗಳ ಸನ್ನಿವೇಶಗಳಲ್ಲಿ ವಿಶ್ಲೇಷಿಸಬೇಕಾದಂತಹ ಒಂದು ಪರಿಕಲ್ಪನೆಯಾಗಿ ಬೆಳೆದುಬಂದಿದೆ.

ಅರ್ಥಶಾಸ್ತ್ರಜ್ಞರು ಅಭಿವೃದ್ಧಿಗೆ ನೀಡಿರುವ ಕೆಲವು ವ್ಯಾಖ್ಯಾನಗಳನ್ನು ಇಲ್ಲಿ ಹೆಸರಿಸಬಹುದು.

ಆರ್ಥಿಕ ಅಭಿವೃದ್ಧಿ ಎಂಬ ಕೃತಿಯಲ್ಲಿ ಸಿ.ಪಿ.ಕಿನ್ಡಲ್ ಬರ್ಗರ್ "ಆರ್ಥಿಕ ಅಭಿವೃದ್ಧಿಯು ಅಧಿಕ ಉತ್ಪನ್ನ ಮತ್ತು ಅದನ್ನು ಉತ್ಪಾದಿಸುವ ತಾಂತ್ರಿಕ ಮತ್ತು ಸಾಂಸ್ಥಿಕ ಬದಲಾವಣೆ ಇವೆರಡನ್ನು ಒಳಗೊಂಡಿದೆ" ಎಂದು ಹೇಳಿದ್ದಾರೆ.

ತೊದಾರೊ ಅವರ ಪ್ರಕಾರ "ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಥಿಕ ಪ್ರಕ್ರಿಯೆಯ ಮೂಲಕ ಉತ್ತಮ ಜೀವನವನ್ನು ಪಡೆಯಲು ಸಮಾಜವು ಹೊಂದಿರುವ ಭೌತಿಕ ಮತ್ತು ಮಾನಸಿಕ ಸ್ಥಿತಿಯೇ ಅಭಿವೃದ್ಧಿ".

ಬೆಜೋರ ಹ್ಯಾಟ್ನೆ ಹೇಳುವಂತೆ "ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಬದಲಾವಣೆ ತಂದು ಅದರ ಎಲ್ಲಾ ಗುಂಪಿನ ಜನರು ಭಾಗವಹಿಸುವಂತೆ ಮಾಡುವ ಪ್ರಕ್ರಿಯೆಯೇ ಅಭಿವೃದ್ಧಿ".

ಇಡೀ ಸಾಮಾಜಿಕ ವ್ಯವಸ್ಥೆಯ ಮೇಲ್ಮುಖ ಚಲನೆಯೇ ಅಭಿವೃದ್ಧಿ ಎಂದು ಗುನ್ನಾರ್ ಮಿರ್ಡಾಲ ಅವರು ವ್ಯಾಖ್ಯಾನಿಸಿದ್ದಾರೆ.

ವಿಶ್ವ ಸಂಸ್ಥೆಯ ತಜ್ಞರ ಸಮಿತಿ ಪ್ರಕಾರ ಅಭಿವೃದ್ಧಿಯು ಮಾನವನ ಭೌತಿಕ ಅಗತ್ಯತೆಗಳನ್ನು ಮಾತ್ರವಲ್ಲದೆ ಅವನ ಜೀವನದ ಸಾಮಾಜಿಕ ಸ್ಥಿತಿಯ ಸುಧಾರಣೆಯನ್ನು ಕೂಡಾ ಒಳಗೊಂಡಿದೆ. ಹಾಗಾಗಿ ಅಭಿವೃದ್ಧಿಯೆಂದರೆ ಆರ್ಥಿಕ ಬೆಳವಣಿಗೆ ಮಾತ್ರವಲ್ಲ ಸಾಮಾಜಿಕ, ಸಾಂಸ್ಕೃತಿಕ, ಸಾಂಸ್ಥಿಕ,

ಆರ್ಥಿಕ ಬೆಳವಣಿಗೆಯೂ ಕೂಡಾ.

೧೯೮೦ ಮತ್ತು ೧೯೯೦ ದಶಕಗಳಲ್ಲಿ ಅಭಿವೃದ್ಧಿ ಪರಿಕಲ್ಪನೆಯು ಸ್ವಲ್ಪ ಮಟ್ಟಿನ ಬದಲಾವಣೆಗಳನ್ನು ಕಂಡಿತು. ಅಭಿವೃದ್ಧಿಯು ಮೂಲಭೂತವಾಗಿ ಜನಾಭಿವೃದ್ಧಿಯಾಯಿತು. ಅಭಿವೃದ್ಧಿಯಲ್ಲಿ ಪರಿಸರ ಸಂರಕ್ಷಣೆ, ಮಾನವ ಅಭಿವೃದ್ಧಿ, ಆರ್ಥಿಕ ರಾಜನಿಕ ಹೊಂದಾಣಿಕೆ, ಮಾನವ ಹಕ್ಕುಗಳು ಹಾಗೂ ನಿರಂತರತೆಯ ಲಕ್ಷಣವನ್ನು ಹೊಂದಿರುವ ಅಭಿವೃದ್ಧಿ ಅಂಶಗಳು ಸೇರಿಕೊಂಡವು. ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಸ್ವನಂಬಿಕೆ, ಸ್ವ ಸಾಮರ್ಥ್ಯ ಹಾಗೂ ಅಧಿಕ ಜನರ ಒಳಿತಿಗೆ ಹೆಚ್ಚು ಒತ್ತು ನೀಡಲಾಯಿತು. ಲಿಂಗ ವ್ಯವಸ್ಥೆ, ಜನಾಂಗೀಯ, ಧಾರ್ಮಿಕ, ಪ್ರಾದೇಶಿಕ ಮತ್ತು ದೇಶಗಳ ಗಡಿಗಳನ್ನು ದಾಟಿ ಎಲ್ಲಾ ಜನರ ಆರ್ಥಿಕ, ರಾಜಕೀಯ ಮತ್ತು ನಾಗರಿಕ ಹಕ್ಕುಗಳನ್ನು ಹೆಚ್ಚಿಸುವುದೇ ಅಭಿವೃದ್ಧಿ ಎಂದು ವಿಶ್ವ ಬ್ಯಾಂಕಿನ ವ್ಯಾಖ್ಯೆ ಹೇಳುತ್ತದೆ. (ವಿಶ್ವ ಅಭಿವೃದ್ಧಿ ವರದಿ ೧೯೯೧)

ಸೌತ್ ಕಮಿಷನ್ ಅಭಿವೃದ್ಧಿಯನ್ನು ಹೀಗೆ ವ್ಯಾಖ್ಯಾನಿಸಿದೆ- "ಅಭಿವೃದ್ಧಿಯ ಗುರಿ ಜನಕೇಂದ್ರಿತ ಅಭಿವೃದ್ಧಿಯನ್ನು ಸಾಧಿಸುವುದಾಗಿದ್ದು ಅದು ಸ್ವನಂಬಿಕೆ, ಸಮಾನತೆ, ಸಮಾನ ಭಾಗವಹಿಸುವಿಕೆ ಹಾಗೂ ನಿರಂತರತೆಯ ಲಕ್ಷಣವನ್ನು ಹೊಂದಿರುವ ಅಭಿವೃದ್ಧಿಯಾಗಿರಬೇಕು. ಜನರ ಸಕ್ರಿಯ ಭಾಗವಹಿಸುವಿಕೆ ಅವರದೇ ಆಸಕ್ತಿಗಳಿಂದ ಕೂಡಿದ್ದು, ತಮ್ಮದೇ ಸಂಪನ್ಮೂಲಗಳನ್ನು ಅವಲಂಬಿಸಿ ಅದೆಲ್ಲವನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡು ಸಾಧಿಸುವ ಪ್ರಕ್ರಿಯೆಯೆ ಅಭಿವೃದ್ಧಿ - ಸೌತ್ ಕಮೀಷನ್ ಇನ್ ಸಮ್ಮರಿ ೧೯೯೦, ಕೇಟ್ ಯಂಗ್ ೧೯೯೩.

ಸಮಕಾಲೀನ ಸಮಾಜಗಳಲ್ಲಿ ಅದರಲ್ಲೂ ವಿಶೇಷವಾಗಿ ಅಭಿವೃದ್ಧಿಶೀಲ ಸಮಾಜಗಳಲ್ಲಿ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದು ಜೀವನದ ಗುಣಮಟ್ಟದ್ದನ್ನು ಹೆಚ್ಚಿಸುವುದು ಮತ್ತು ಪರಾವಲಂಬಿತನದಿಂದ ಮುಕ್ತಿ ಹೊಂದುವುದು ಇವು ಅಭಿವೃದ್ಧಿಯ ಮೂರು ಮುಖ್ಯ ಗುರಿಗಳಾದುವು. ಅದೇನೇ ಇದ್ದರೂ ಅಭಿವೃದ್ಧಿ ಎಂಬುದು ವ್ಯಕ್ತಿಯಿಂದ ವ್ಯಕ್ತಿಗೆ, ದೇಶದಿಂದ ದೇಶಕ್ಕೆ, ಸಮಾಜದಿಂದ ಸಮಾಜಕ್ಕೆ, ಕಾಲದಿಂದ ಕಾಲಕ್ಕೆ ಭಿನ್ನವಾಗುವಂತಹ ಪರಿಕಲ್ಪನೆ ಹಾಗೂ ಪ್ರಕ್ರಿಯೆಯಾಗಿದೆ.

ಅಭಿವೃದ್ಧಿ ಎಂದರೆ ಮಾನವನ ಜೀವನವನ್ನು ಉತ್ತಮಗೊಳಿಸುವ ಒಂದು ದೀರ್ಘಾವಧಿ ಪ್ರಕ್ರಿಯೆ. ಅಭಿವೃದ್ಧಿಯ ಅಂತರಾರ್ಥ ಜೀವನದ ಗುಣಮಟ್ಟವನ್ನು ಹೆಚ್ಚಿಸುವುದು. ಅಭಿವೃದ್ಧಿಯು ಏಕಮುಖ ಪ್ರಕ್ರಿಯೆಯಲ್ಲ. ಅಂದರೆ ಅಭಿವೃದ್ಧಿಯು ಹೇರಲ್ಪಡುವ ವಿಷಯವಲ್ಲ. ಅದು ಆಂತರಿಕ ತುಡಿತ. ಸರಕಾರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದು. ಅಷ್ಟರಿಂದಲೇ ಅಭಿವೃದ್ಧಿ ಸಾಧಿಸಲು ಸಾಧ್ಯವಿಲ್ಲ. ಜನರು ಸ್ವಪ್ರೇರಣೆಯಿಂದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಿ ತಾವು ನೇರವಾಗಿ ಕಾರ್ಯಕ್ರಮಗಳಲ್ಲಿ ಭಾಗಿಗಳಾದರೆ ಅಭಿವೃದ್ಧಿ ಪ್ರಕ್ರಿಯೆ ಸುಲಭವಾಗುತ್ತದೆ.

ಅವರು ನೀಡುವ ಅತ್ಯಮೂಲ್ಯವಾದ ಕೊಡುಗೆಯನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ ಎಂದು ಹೇಳಬಹುದು. ವಿಶ್ವಸಂಸ್ಥೆಯ ಎರಡನೇ ಅಭಿವೃದ್ಧಿ ದಶಕದಲ್ಲಿ ಅಂದರೆ ೧೯೭೦-೭೯ರ ದಶಕದಲ್ಲಿ ಮಹಿಳಾ ವಿಷಯಗಳು ಮತ್ತು ಅಭಿವೃದ್ಧಿ ಚಿಂತನೆಗಳ ನಡುವೆ ಮೊದಲ ಬಾರಿಗೆ ಸಂಪರ್ಕವೇರ್ಪಟ್ಟಿತು. ಕ್ಷಿಪ್ರ ಆರ್ಥಿಕ ಬೆಳವಣಿಗೆಯೆ ಎಲ್ಲಾ ಚಟುವಟಿಕೆಗಳ ಗುರಿ, ಆರ್ಥಿಕ ಬೆಳವಣಿಗೆಯನ್ನು ಸಾಧಿಸಿದರೆ ಅಭಿವೃದ್ಧಿ ಹೊಂದಿದಂತೆ ಎಂದು ಅದುವರೆಗೆ ಇದ್ದ ನಂಬಿಕೆ ಸುಳ್ಳಾಗಿ ಅಭಿವೃದ್ಧಿ ಯೋಜನೆಯ ಒತ್ತು ಆರ್ಥಿಕ ಬೆಳವಣಿಗೆಯಿಂದ ಸಂಪನ್ಮೂಲಗಳ ಸಮಾನ ಹಂಚಿಕೆ, ಬಡತನದ ನಿರ್ಮೂಲನ, ಸಾಮಾಜಿಕ ನ್ಯಾಯ, ಸ್ಥಳೀಯ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೆ ಆದ್ಯತೆ ನೀಡುವುದಕ್ಕೆ ಬದಲಾಗಿ ಮಹಿಳಾಪರ ಚಿಂತನೆ ಅಭಿವೃದ್ಧಿ ಪ್ರಕ್ರಿಯೆಯನ್ನು ಪ್ರವೇಶಿಸಿತು. ೧೯೭೦ರ ದಶಕದಲ್ಲಿ ಅಭಿವೃದ್ಧಿಯು ಹೆಚ್ಚು ಜನಕೇಂದ್ರಿತ ಅಥವಾ ಜನಪರವಾದಂತೆ ಅದರಲ್ಲಿ ಸ್ತ್ರೀಪರ ಕಾಳಜಿಗಳು ಕಾಣಿಸಿಕೊಳ್ಳತೊಡಗಿದವು. ಕುಟುಂಬಕ್ಕೆ ಮತ್ತು ಸಮಾಜಕ್ಕೆ ಮಹಿಳೆಯರು ನೀಡುವ ಕೊಡುಗಿಯನ್ನು ಮೊದಲ ಬಾರಿಗೆ ಗಣನೆಗೆ ತೆಗೆದುಕೊಳ್ಳಲಾಯಿತು. ಇದರ ಜೊತೆಗೆ ಈ ಸಮಯದಲ್ಲಿ ಜನಸಂಖ್ಯಾ ಬೆಳವಣಿಗೆ ಕುರಿತು ಉದಯವಾದ ಚಿಂತನೆ ಹಾಗೂ ಕೃಷಿ ಉತ್ಪನ್ನದ ಹೆಚ್ಚಳಕ್ಕೆ ನೀಡಿದ ಆದ್ಯತೆ - ಇವೆರಡೂ ಮಹಿಳೆಯರ ಕಡೆಗೆ ಗಮನ ನೀಡಲೂ ಕಾರಣವಾದವು. ಸಮಾಜ ವಿಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿ ಕೈಗೊಂಡ ಸಂಶೋಧನಾ ಅಧ್ಯಯನಗಳಿಂದ ಕೃಷಿ ಕ್ಷೇತ್ರದಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ದುಡಿಯುತ್ತಿರುವುದು ಕಂಡು ಬಂದಿತು. ಬಡತನ ನಿರ್ಮೂಲನ ಕಾರ್ಯಕ್ರಮಗಳಿಗೆ ಫಲಾನುಭವಿಗಳನ್ನು ಗುರುತಿಸುವಾಗ ಬಡವರಲ್ಲಿ ಹೆಚ್ಚು ಬಡವರಾಗಿರುವವರು, ಮಹಿಳೆಯರು ಮತ್ತು ಅತ್ಯಂತ ಬಡ ಕುಟುಂಬಗಳಲ್ಲಿ ಮೂಲಭೂತ ಅಗತ್ಯಗಳನ್ನು ಒದಗಿಸುತ್ತಿರುವವರು ಮಹಿಳೆಯರು ಎಂಬ ಅಂಶಗಳೆರಡೂ ಅಭಿವೃದ್ಧಿಯಲ್ಲಿ ಮಹಿಳೆಯರ ಕುರಿತು ವಿಶೇಷವಾದಂಥ ಚಿಂತನೆಯನ್ನು ಬೆಳಕಿಗೆ ತಂದವು. ಅಲ್ಲದೆ ದೇಶ ವಿದೇಶಗಳಲ್ಲಿ ನಡೆದ ಮಹಿಳಾ ಚಳುವಳಿಗಳು, ರಾಷ್ಟ್ರೀಯ, ಅಂತರಾಷ್ಟ್ರೀಯ ಸಂಸ್ಥೆಗಳಲ್ಲಿ ಹಾಗೂ ಸರ್ಕಾರದ ವಲಯಗಳಲ್ಲಿ ಮಹಿಳೆಯರ ದುಡಿಮೆಯ ಸಾಮಾಜಿಕ ಮಹತ್ವವನ್ನು ಕುರಿತು ಜಾಗೃತಿಯ ಧ್ವನಿ ಮೊಳಗುವಂತೆ ಮಾಡುವುದರಲ್ಲಿ ಮಹತ್ವವಾದ ಪಾತ್ರವನ್ನು ವಹಿಸಿದವು.

"ಅಭಿವೃದ್ಧಿಯಲ್ಲಿ ಮಹಿಳೆ" ನಿಲುವನ್ನು ಪ್ರತಿಪಾದಿಸುವರಲ್ಲಿ ಮೊದಲಿಗರೆಂದರೆ ಎಸ್ತರ್ ಬೋಸರಪ್ ನಂತರ ಐರಿನ್ ಟಿಂಕರ್, ಬಾರ್ಬರ ರೋಜರ್ ಮತ್ತಿತರರು ಈ ನಿಲುವನ್ನು ಎತ್ತಿಹಿಡಿದರು. ಎಸ್ತರ್ ಬೋಸರಪ್ ಅವರ "ವಿಮೆನ್ಸ್ ರೋಲ್ ಇನ್ ಎಕನಾಮಿಕ್ ಡೆವಲಪ್‌ಮೆಂಟ್" (1970) ಐರಿನ್ ಟಿಂಕರ್ ಅವರ 'ದಿ ಆಡ್ವರ್ಸ್ ಇಂಪ್ಯಾಕ್ಟ್ ಆಫ್ ಡೆವಲಪ್‌ಮೆಂಟ್ ಆಫ್ ವಿಮೆನ್ (1979) ಹಾಗೂ ಬಾರ್ಬರ ರೋಜರ್ ಅವರ "ದಿ ಡೊಮೆಸ್ಟಿಫಿಕೇಶನ್ ಆಫ್ ವಿಮೆನ್ : ಡಿಸ್ಕ್ರಿಮಿನೇಷನ್ ಇನ್

ಅವರು ನೀಡುವ ಅತ್ಯಮೂಲ್ಯವಾದ ಕೊಡುಗೆಯನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ ಎಂದು ಹೇಳಬಹುದು. ವಿಶ್ವಸಂಸ್ಥೆಯ ಎರಡನೇ ಅಭಿವೃದ್ಧಿ ದಶಕದಲ್ಲಿ ಅಂದರೆ ೧೯೭೦-೭೯ರ ದಶಕದಲ್ಲಿ ಮಹಿಳಾ ವಿಷಯಗಳು ಮತ್ತು ಅಭಿವೃದ್ಧಿ ಚಿಂತನೆಗಳ ನಡುವೆ ಮೊದಲ ಬಾರಿಗೆ ಸಂಪರ್ಕವೇರ್ಪಟ್ಟಿತು. ಕ್ಷಿಪ್ರ ಆರ್ಥಿಕ ಬೆಳವಣಿಗೆಯೆ ಎಲ್ಲಾ ಚಟುವಟಿಕೆಗಳ ಗುರಿ, ಆರ್ಥಿಕ ಬೆಳವಣಿಗೆಯನ್ನು ಸಾಧಿಸಿದರೆ ಅಭಿವೃದ್ಧಿ ಹೊಂದಿದಂತೆ ಎಂದು ಅದುವರೆಗೆ ಇದ್ದ ನಂಬಿಕೆ ಸುಳ್ಳಾಗಿ ಅಭಿವೃದ್ಧಿ ಯೋಜನೆಯ ಒತ್ತು ಆರ್ಥಿಕ ಬೆಳವಣಿಗೆಯಿಂದ ಸಂಪನ್ಮೂಲಗಳ ಸಮಾನ ಹಂಚಿಕೆ, ಬಡತನದ ನಿರ್ಮೂಲನ, ಸಾಮಾಜಿಕ ನ್ಯಾಯ, ಸ್ಥಳೀಯ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೆ ಆದ್ಯತೆ ನೀಡುವುದಕ್ಕೆ ಬದಲಾಗಿ ಮಹಿಳಾಪರ ಚಿಂತನೆ ಅಭಿವೃದ್ಧಿ ಪ್ರಕ್ರಿಯೆಯನ್ನು ಪ್ರವೇಶಿಸಿತು. ೧೯೭೦ರ ದಶಕದಲ್ಲಿ ಅಭಿವೃದ್ಧಿಯು ಹೆಚ್ಚು ಜನಕೇಂದ್ರಿತ ಅಥವಾ ಜನಪರವಾದಂತೆ ಅದರಲ್ಲಿ ಸ್ತ್ರೀಪರ ಕಾಳಜಿಗಳು ಕಾಣಿಸಿಕೊಳ್ಳತೊಡಗಿದವು. ಕುಟುಂಬಕ್ಕೆ ಮತ್ತು ಸಮಾಜಕ್ಕೆ ಮಹಿಳೆಯರು ನೀಡುವ ಕೊಡುಗಿಯನ್ನು ಮೊದಲ ಬಾರಿಗೆ ಗಣನೆಗೆ ತೆಗೆದುಕೊಳ್ಳಲಾಯಿತು. ಇದರ ಜೊತೆಗೆ ಈ ಸಮಯದಲ್ಲಿ ಜನಸಂಖ್ಯಾ ಬೆಳವಣಿಗೆ ಕುರಿತು ಉದಯವಾದ ಚಿಂತನೆ ಹಾಗೂ ಕೃಷಿ ಉತ್ಪನ್ನದ ಹೆಚ್ಚಳಕ್ಕೆ ನೀಡಿದ ಆದ್ಯತೆ – ಇವೆರಡೂ ಮಹಿಳೆಯರ ಕಡೆಗೆ ಗಮನ ನೀಡಲೂ ಕಾರಣವಾದವು. ಸಮಾಜ ವಿಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿ ಕೈಗೊಂಡ ಸಂಶೋಧನಾ ಅಧ್ಯಯನಗಳಿಂದ ಕೃಷಿ ಕ್ಷೇತ್ರದಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ದುಡಿಯುತ್ತಿರುವುದು ಕಂಡು ಬಂದಿತು. ಬಡತನ ನಿರ್ಮೂಲನ ಕಾರ್ಯಕ್ರಮಗಳಿಗೆ ಫಲಾನುಭವಿಗಳನ್ನು ಗುರುತಿಸುವಾಗ ಬಡವರಲ್ಲಿ ಹೆಚ್ಚು ಬಡವರಾಗಿರುವವರು, ಮಹಿಳೆಯರು ಮತ್ತು ಅತ್ಯಂತ ಬಡ ಕುಟುಂಬಗಳಲ್ಲಿ ಮೂಲಭೂತ ಅಗತ್ಯಗಳನ್ನು ಒದಗಿಸುತ್ತಿರುವವರು ಮಹಿಳೆಯರು ಎಂಬ ಅಂಶಗಳೆರಡೂ ಅಭಿವೃದ್ಧಿಯಲ್ಲಿ ಮಹಿಳೆಯರ ಕುರಿತು ವಿಶೇಷವಾದಂಥ ಚಿಂತನೆಯನ್ನು ಬೆಳಕಿಗೆ ತಂದವು. ಅಲ್ಲದೆ ದೇಶ ವಿದೇಶಗಳಲ್ಲಿ ನಡೆದ ಮಹಿಳಾ ಚಳುವಳಿಗಳು, ರಾಷ್ಟ್ರೀಯ, ಅಂತರಾಷ್ಟ್ರೀಯ ಸಂಸ್ಥೆಗಳಲ್ಲಿ ಹಾಗೂ ಸರ್ಕಾರದ ವಲಯಗಳಲ್ಲಿ ಮಹಿಳೆಯರ ದುಡಿಮೆಯ ಸಾಮಾಜಿಕ ಮಹತ್ವವನ್ನು ಕುರಿತು ಜಾಗೃತಿಯ ಧ್ವನಿ ಮೊಳಗುವಂತೆ ಮಾಡುವುದರಲ್ಲಿ ಮಹತ್ವವಾದ ಪಾತ್ರವನ್ನು ವಹಿಸಿದವು.

"ಅಭಿವೃದ್ಧಿಯಲ್ಲಿ ಮಹಿಳೆ" ನಿಲುವನ್ನು ಪ್ರತಿಪಾದಿಸುವರಲ್ಲಿ ಮೊದಲಿಗರೆಂದರೆ ಎಸ್ತರ್ ಬೋಸರಪ್ ನಂತರ ಐರಿನ್ ಟಿಂಕರ್, ಬಾರ್ಬರ ರೋಜರ್ ಮತ್ತಿತರರು ಈ ನಿಲುವನ್ನು ಎತ್ತಿಹಿಡಿದರು. ಎಸ್ತರ್ ಬೋಸರಪ್ ಅವರ "ವಿಮೆನ್ಸ್ ರೋಲ್ ಇನ್ ಎಕನಾಮಿಕ್ ಡೆವಲಪ್‌ಮೆಂಟ್" (1970) ಐರಿನ್ ಟಿಂಕರ್ ಅವರ 'ದಿ ಆಡ್ವರ್ಸ್ ಇಂಪ್ಯಾಕ್ಟ್ ಆಫ್ ಡೆವಲಪ್‌ಮೆಂಟ್ ಆಫ್ ವಿಮೆನ್ (1979) ಹಾಗೂ ಬಾರ್ಬರ ರೋಜರ್ ಅವರ "ದಿ ಡೊಮೆಸ್ಟಿಫಿಕೇಶನ್ ಆಫ್ ವಿಮೆನ್ : ಡಿಸ್ಕ್ರಿಮಿನೇಷನ್ ಇನ್

ಡೆವಲಪಿಂಗ್ ಸೊಸೈಟೀಸ್ (1980) ಗ್ರಂಥಗಳಲ್ಲಿ ಅಭಿವೃದ್ಧಿಯಲ್ಲಿ ಮಹಿಳೆಯ ನಿಲುವುಗಳನ್ನು ಕಾಣಬಹುದು.

ಈ ಸಂದರ್ಭದಲ್ಲಿ ಮಹಿಳೆ ಮತ್ತು ಅಭಿವೃದ್ಧಿ ಕುರಿತಂತೆ ಎರಡು ನಿಲುವುಗಳು ಎದ್ದವು. ಒಂದು ನಿಲುವು ಯೋಜನಾಕಾರರು ಮತ್ತು ನೀತಿ ನಿರೂಪಕರು ಮಹಿಳೆಯರ ಆರ್ಥಿಕ ಚಟುವಟಿಕೆಗಳನ್ನು ನಿರ್ಲಕ್ಷಿಸುವುದರಿಂದ ಅವರನ್ನು ಅಭಿವೃದ್ಧಿ ಪ್ರಕ್ರಿಯೆಯಿಂದ ಸಂಪೂರ್ಣವಾಗಿ ಹೊರಗಿಡಲಾಗಿದೆ. ಆದುದರಿಂದ ಅವರನ್ನು ಅಭಿವೃದ್ಧಿಯಲ್ಲಿ ಸೇರಿಸಿಕೊಳ್ಳಬೇಕು ಎಂದು ಹೇಳುತ್ತದೆ. ಇಷ್ಟೇ ಅಲ್ಲದೆ ಅವರ ಅಗತ್ಯ ಮತ್ತು ಆದ್ಯತೆಗಳನ್ನು ಅವಶ್ಯವಾಗಿ ಗಣನೆಗೆ ತೆಗೆದುಕೊಳ್ಳಬೇಕು ಎಂದು ಹೇಳುತ್ತಾ ಅಭಿವೃದ್ಧಿಯಲ್ಲಿ ಮಹಿಳೆಯರು ಸಂಪೂರ್ಣ ನಿರ್ಲಕ್ಷಕ್ಕೆ ಒಳಗಾದ ಗುಂಪು ಎಂದು ಈ ನಿಲುವು ವಾದಿಸುತ್ತದೆ. ಆದರೆ ಇನ್ನೊಂದು ನಿಲುವು ಸೂಚಿಸಿದ್ದು ಮಹಿಳೆಯರು ಈಗಾಗಲೇ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆದರೆ ಅದನ್ನು ಸಂಬಂಧಿಸಿದವರು ಗಣನೆಗೆ ತೆಗೆದುಕೊಂಡಿಲ್ಲ. ಯೋಜನಾಕಾರರಲ್ಲಿ ಮಹಿಳೆಯರ ದುಡಿಮೆ ಮತ್ತು ಕೊಡುಗೆಗಳ ಬಗ್ಗೆ ಹಲವು ಮಿಥ್ಯೆಗಳು ಸೃಷ್ಟಿಯಾಗಿರುವುದರಿಂದ ಅವರ ನಿಜವಾದ ಅಗತ್ಯಗಳು ನಿರ್ಲಕ್ಷಕ್ಕೆ ಒಳಗಾಗಿವೆ ಹಾಗೂ ಅವರ ಶ್ರಮವನ್ನು ನಿರ್ಲಕ್ಷಿಸಲಾಗಿದೆ ಎಂದು ಹೇಳುತ್ತದೆ. ಇದರ ಪರಿಣಾಮವಾಗಿ ಅಭಿವೃದ್ಧಿ ಕಾರ್ಯಗಳ ಲಾಭ ಹಾಗೂ ಇತರ ಸಂಪನ್ಮೂಲಗಳನ್ನು ಪಡೆಯುವಲ್ಲಿ ಮಹಿಳೆಯರು ಪುರುಷರಿಗಿಂತ ಹಿಂದೆ ಬಿದ್ದಿದ್ದು ಮಹಿಳೆಯರು ನಿರ್ಲಕ್ಷಿತ ಸಂಪನ್ಮೂಲವೆನ್ನುವುದಕ್ಕಿಂತ ಅತಿ ಹೊರೆಯನ್ನು ಹೊರುತ್ತಿರುವ ಮತ್ತು ಅಪಮೌಲ್ಯಕ್ಕೆ ಒಳಗಾಗಿರುವ ಸಂಪನ್ಮೂಲ ಎಂದು ಎರಡನೇ ನಿಲುವು ಅಭಿಪ್ರಾಯಪಡುತ್ತದೆ. ಮಹಿಳೆಯರ ಅಭಿವೃದ್ಧಿಗೆ ನೀಡುತ್ತಿರುವ ಕೊಡುಗೆಯನ್ನು ಪುನರ್ಮೌಲ್ಯೀಕರಣ ಮಾಡಬೇಕು. ಅಭಿವೃದ್ಧಿ ಲಾಭವನ್ನು ಸಮಾನವಾಗಿ ಹಂಚಬೇಕು ಹಾಗೂ ಜವಾಬ್ದಾರಿಯನ್ನು ಪುರುಷರು ಮತ್ತು ಮಹಿಳೆಯರಿಬ್ಬರೂ ಹಂಚಿಕೊಳ್ಳಬೇಕೆಂದು ಈ ನಿಲುವು ಹೇಳುತ್ತದೆ.

೧೯೭೦ ರಲ್ಲಿ ಪ್ರಕಟವಾದ ಎಸ್ತಾರ್ ಬೋಸರಪ್ ಅವರ 'ವಿಮೆನ್ಸ್ ರೋಲ್ ಇನ್ ಎಕನಾಮಿಕ್ ಡೆವೆಲಪ್‌ಮೆಂಟ್' ಎಂಬ ಗ್ರಂಥ 'ಮಹಿಳೆ ಮತ್ತು ಅಭಿವೃದ್ಧಿ' ಕ್ಷೇತ್ರದಲ್ಲಿ ಉದ್ಭವವಾದ ಚಿಂತನೆಯ ಮೊದಲ ಪ್ರಮುಖ ಹೆಜ್ಜೆಯೆಂದು ಹೇಳಿದರೆ ತಪ್ಪಾಗಲಾರದು. ಈ ಪುಸ್ತಕದಲ್ಲಿ ಅವರು ಮಹಿಳೆಯರು ಪುರುಷರಿಗಿಂತ ಹೆಚ್ಚು ದುಡಿಯುತ್ತಿದ್ದಾರೆ, ಮಕ್ಕಳನ್ನು ಹೆರುವುದು, ಪೋಷಿಸುವುದು, ಮನೆ ಕೆಲಸ ಮಾಡುವುದರ ಜೊತೆಗೆ ಕೃಷಿಕರಾಗಿ, ಅಸಂಘಟಿತ ಕ್ಷೇತ್ರದಲ್ಲಿ ದುಡಿಮೆಗಾರರಾಗಿ, ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ, ದೇಶದ ಆರ್ಥಿಕತೆಗೆ ಹೆಚ್ಚಿನ ಕೊಡುಗೆಗಳನ್ನು ನೀಡುತ್ತಿದ್ದಾರೆ." ಎಂಬ ಅಂಶವನ್ನು ಬೆಳಕಿಗೆ ತಂದರು. ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರವನ್ನು ಕುರಿತು ಜಗತ್ತಿನ ಗಮನವನ್ನು ಸೆಳೆಯುವಲ್ಲಿ ಬೋಸರಪ್ ಅವರ ಗ್ರಂಥ ಪ್ರಮುಖ ಪಾತ್ರವಹಿಸಿತು.

೧೯೬೦ರ ದಶಕದ ನಂತರ ಒಂದು ಅಂತರಶಾಸ್ತ್ರೀಯ ವಿಷಯವಾಗಿ ಹೊರ ಬಂದಂತಹ ಮಹಿಳಾ ಅಧ್ಯಯನವು ಮಹಿಳಾ ವಿಷಯಗಳಿಗೆ ಸಂಬಂಧಪಟ್ಟಂತೆ ಅಧ್ಯಯನ, ಸಂಶೋಧನೆ, ವಿಚಾರ ಸಂಕಿರಣಗಳು ಪುಸ್ತಕ, ಲೇಖನ, ಪ್ರಬಂಧ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳನ್ನು ನಡೆಸುತ್ತಿದೆ. ಮಹಿಳೆಗೆ ಸಂಬಂಧ ಪಟ್ಟಂತೆ ಸಮಾಜ, ಕುಟುಂಬ, ಶಿಕ್ಷಣ, ದುಡಿಮೆ, ಆರ್ಥಿಕತೆ, ರಾಜಕೀಯ, ಪ್ರಕ್ರಿಯೆ, ಆರೋಗ್ಯ ಮುಂತಾದವುಗಳನ್ನು ಕುರಿತು ಅದು ಅಧ್ಯಯನ ಮಾಡುತ್ತಿದೆ.

ವಿಶ್ವಸಂಸ್ಥೆಯ ಅಭಿವೃದ್ಧಿ ದಶಕಗಳ ಪ್ರಾರಂಭದಲ್ಲಿ ಮಹಿಳೆಯರ ಕಲ್ಯಾಣಕ್ಕೆ ಆದ್ಯತೆ ನೀಡಲಾಯಿತು.

ನಂತರ ಮುಖ್ಯವಾಹಿನಿ ಅಭಿವೃದ್ಧಿಯು ತನ್ನ ಗುರಿಯನ್ನು ಬಡತನ ನಿರ್ಮೂಲನ ಮತ್ತು ಮೂಲಭೂತ ಅಗತ್ಯಗಳ ಪೂರೈಕೆಗಳತ್ತ ಕೇಂದ್ರೀಕರಿಸಿದಾಗ ಮಹಿಳೆಯರನ್ನು ಅಭಿವೃದ್ಧಿಯ ಪಾಲುದಾರರು ಹಾಗೂ ಅಭಿವೃದ್ಧಿ ಯೋಜನೆಗಳ ನಿರ್ಲಕ್ಷಿತ ಫಲಾನುಭವಿಗಳು ಎಂದು ಗುರುತಿಸಲು ಸಾಧ್ಯವಾಯಿತು. ಇದರಿಂದ ಬಡತನ ನಿರ್ಮೂಲನ ಫಲಾನುಭವಿಗಳು ಎಂದು ಗುರುತಿಸಲು ಸಾಧ್ಯವಾಯಿತು. ಇದರಿಂದ ಬಡತನ ನಿರ್ಮೂಲನ ನೀತಿಗಳಲ್ಲಿ, ಮೂಲಭೂತ ಅಗತ್ಯಗಳನ್ನು ಪೂರೈಸುವ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ಆದ್ಯತೆ ಅಥವಾ ಮೀಸಲಾತಿಯನ್ನು ನೀಡುವ ಯೋಜನೆ ಪ್ರಾರಂಭವಾಯಿತು. ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರವನ್ನು ಕುರಿತ ವಿಶ್ಲೇಷಣೆಯು ಮಹಿಳೆಯರ ಭಾಗವಹಿಸುವಿಕೆ ಪುರುಷರ ಮೇಲೆ, ಅಧಿಕಾರ ರಚನೆಯ ಮೇಲೆ ಮತ್ತು ಲಿಂಗಾಧಾರಿತ ಶ್ರಮವಿಭಜನೆಯ ಮೇಲೆ ಪರಿಣಾಮ ಬೀರುತ್ತದೆ ಎಂಬ ಅಂಶವನ್ನು ಬೆಳಕಿಗೆ ತಂದಿತು.

ಪ್ರಾರಂಭದಲ್ಲಿ 'ಅಭಿವೃದ್ಧಿಯಲ್ಲಿ ಮಹಿಳೆ'ಯ ಪ್ರತಿಪಾದಕರು ಮಹಿಳೆಯರ ದುಡಿಮೆಯ ಅಗೋಚರತೆ, ಅವರ ಚಟುವಟಿಕೆಗಳ ಬಗ್ಗೆ ಇರುವ ಮಾಹಿತಿ ಕೊರತೆ, ಅಭಿವೃದ್ಧಿ ಪ್ರಕ್ರಿಯೆಯಿಂದ ಅವರನ್ನು ಹೊರಗಿಟ್ಟಿರುವುದು ಇವೇ ಮುಂತಾದ ಅಂಶಗಳನ್ನು ಎತ್ತಿ ತೋರಿಸಿದರು. ಅಭಿವೃದ್ಧಿಯಲ್ಲಿ ಮಹಿಳೆಯರನ್ನು ಹೆಚ್ಚು ತೊಡಗಿಸುವುದು, ಸೂಕ್ತ ತಾಂತ್ರಿಕ ಬೆಳವಣಿಗೆಯಿಂದ ಅವರ ಕೆಲಸದ ಹೊರೆಯನ್ನು ಕಡಿಮೆ ಮಾಡುವುದು, ಅವರು ಆಧುನಿಕ ಶಿಕ್ಷಣ ಜ್ಞಾನ ಪಡೆಯುವಂತೆ ಮಾಡುವುದು, ಹಣಕಾಸಿನ ಸೌಲಭ್ಯ ಒದಗಿಸುವುದು, ಕೃಷಿ ಕ್ಷೇತ್ರದಲ್ಲೂ ಅವರಿಗೆ ತರಬೇತಿ ನೀಡುವುದು ಮುಂತಾದ ಕಾರ್ಯಗಳಿಗೂ ಈ ಪ್ರಸ್ತಾವನೆ ಒತ್ತು ನೀಡಿದೆ.

ಆರ್ಥಿಕ ಅಭಿವೃದ್ಧಿ ಕಾರ್ಯಗಳು ಮಹಿಳೆಯರಿಗೆ ಲಾಭದಾಯಕವಾಗಿಲ್ಲ ಎಂದು ಗುರುತಿಸಿದ 'ಅಭಿವೃದ್ಧಿಯಲ್ಲಿ ಮಹಿಳೆ' ದೃಷ್ಟಿಕೋನವು ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಂಶೋಧನೆ, ಯೋಜನೆ ಮತ್ತು ಸಂಯೋಜನೆಗಳ ಮೂಲಕ ಮಹಿಳೆಯರಿಗೆ ವಿಶೇಷ ಹಾಗೂ ಪ್ರತ್ಯೇಕವಾದಂತ ಪ್ರಾಮುಖ್ಯತೆಯನ್ನು ನೀಡಿ ಅಭಿವೃದ್ಧಿಯ ಲಾಭವು ಅವರನ್ನು ತಲುಪುವಂತೆ ಮಾಡಬೇಕೆಂದು ಪ್ರತಿಪಾದಿಸಿತು. ಮುಖ್ಯವಾಹಿನಿ

ಅಭಿವೃದ್ಧಿಯು ಬಡತನ ನಿರ್ಮೂಲನಾಕಾರ್ಯ ಹಾಗೂ ಮೂಲಭೂತ ಅಗತ್ಯಗಳ ಪೂರೈಕೆ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಬೇಕೆಂದು ಈ ಪ್ರಸ್ತಾವನೆಯು ಒತ್ತಾಯವನ್ನು ತಂದಿತು.

ಮಹಿಳೆಯರ ಸಬಲೀಕರಣ, ಶಿಕ್ಷಣದ ಮಹತ್ವ, ಉನ್ನತ ಶಿಕ್ಷಣದಲ್ಲಿ ಮಹಿಳೆಯರಿಗಿರುವ ಅವಕಾಶಗಳು, ಮಹಿಳೆಯ ಅಭಿವೃದ್ಧಿಯಲ್ಲಿ ಅಧಿಕಾರದ ವಿಕೇಂದ್ರೀಕರಣದ ಅಗತ್ಯ, ಆಧುನಿಕ ಕಾಲಘಟ್ಟದಲ್ಲಿ ಮಹಿಳೆಯರಿಗೆ ತೆರೆದುಕೊಳ್ಳುವ ಉದ್ಯೋಗದ ಅವಕಾಶಗಳು, ಮಹಿಳೆಯರು ಸಾಧಿಸುತ್ತಿರುವ ಆರ್ಥಿಕ ಸ್ವಾವಲಂಬನೆ, ಮಹಿಳಾ ವಿಮೋಚನೆಯ ಹೋರಾಟ, ಮಹಿಳೆಯರ ಮೇಲಿನ ದೌರ್ಜನ್ಯಗಳ ಸ್ವರೂಪ, ಮಹಿಳೆಯರು ನಿರ್ವಹಿಸುತ್ತಿರುವ ಬಹುಮುಖೀ ಜವಾಬ್ದಾರಿಗಳು ಹೀಗೆ ಮಹಿಳೆಯರು ಮತ್ತು ಅಭಿವೃದ್ಧಿ ವಿಷಯ ಪ್ರಾಮುಖ್ಯತೆಯನ್ನು ಪಡೆದಿದೆ. ಮಹಿಳೆ ಮತ್ತು ಅಭಿವೃದ್ಧಿ ಎಂದು ಹೇಳುವಾಗ ಅದಕ್ಕೆ ಹಲವು ಆಯಾಮಗಳಿವೆ. ಮಹಿಳೆಯರ ಅಭಿವೃದ್ಧಿ, ಮಹಿಳೆಯರ ಆರ್ಥಿಕತೆ ಮತ್ತು ಅಭಿವೃದ್ಧಿ, ಮಹಿಳೆಯರ ಶಿಕ್ಷಣ ಮತ್ತು ಅಭಿವೃದ್ಧಿ, ಮಹಿಳೆಯರ ಉದ್ಯೋಗ ಮತ್ತು ಅಭಿವೃದ್ಧಿ- ಇವು ಕೆಲವು ಮುಖ್ಯ ಆಯಾಮಗಳಾಗಿವೆ.

ಮನೆ ನೆರೆಹೊರೆ ಸಮುದಾಯ ಉದ್ಯೋಗ ಒಟ್ಟಾರೆಯಾಗಿ ಉತ್ತಮ ನಾಯಕತ್ವ ವಹಿಸುತ್ತಿರುವ ಮಹಿಳೆ ನವಭಾರತ ನಿರ್ಮಾಣದ ವೇಗವನ್ನು ಹೆಚ್ಚಿಸುತ್ತಿರುವುದು ಸತ್ಯ. ಇಂದಿನ ಮಹಿಳೆಗೆ ತನ್ನ ಶಕ್ತಿ ಜವಾಬ್ದಾರಿಗಳೆರಡರ ಅರಿವೂ ಇದೆ. ಸ್ವಯಂ ಪ್ರೇರಿತರಾಗಿ ಸಾಧನೆಯತ್ತ ಇಂದಿನ ಮಹಿಳೆಯರು ಸಾಗುತ್ತಿರುವುದು ರಾಷ್ಟ್ರ ನಿರ್ಮಾಣದ ಕಾರ್ಯವನ್ನು ಸುಲಭಗೊಳಿಸಿದಂತಾಗಿದೆ. ಮಹಿಳೆಯರ ಆರ್ಥಿಕ ಸಹಭಾಗಿತ್ವವನ್ನು ಗ್ರಹಿಸುವ ಶಕ್ತಿಯನ್ನು ಸಬಲ ನಾರಿ ಸಬಲ ಸಮಾಜವನ್ನು ಕಾಣಲು ಸಾಧ್ಯವಿಲ್ಲವೊ ಆ ರಾಷ್ಟ್ರವು ಅಭಿವೃದ್ಧಿ ಬೆಳವಣಿಗೆಯನ್ನು ಕೂಡ ಕಾಣಲು ಸಾಧ್ಯವಿಲ್ಲ.

ಮಹಿಳೆಯ ಸ್ಥಾನಮಾನವು ನೇರವಾಗಿ ಆರ್ಥಿಕ ಮಟ್ಟವನ್ನು ಸಂಬಂಧಿಸಿದೆ. ಅದು ಪರೋಕ್ಷವಾಗಿ ಭಾಗವಹಿಸುವಿಕೆಯು ಅವಕಾಶ ಮತ್ತು ಆರ್ಥಿಕ ಚಟುವಟಿಕೆಗಳನ್ನು ಅವಲಂಬಿಸಿದೆ. ಮಹಿಳೆಯು ಸರ್ವಾಂಗೀಣ ಸ್ವಾವಲಂಬನೆಗೆ ಆರ್ಥಿಕ ಸ್ವಾವಲಂಬನೆಯನ್ನು ಗಿಟ್ಟಿಸಿಕೊಳ್ಳುವುದು ಅತಿ ಮುಖ್ಯ. ಮಹಿಳಾ ಸ್ವಾವಲಂಬನೆಯು ಆಕೆಯ ಗೌರವವನ್ನು ಹೆಚ್ಚಿಸಲು, ಭವಿಷ್ಯದ ಭದ್ರತೆಯನ್ನು ಗಟ್ಟಿಗೊಳಿಸಲು ಅಗತ್ಯ. ಸ್ವ ಉದ್ಯೋಗವನ್ನು ಗಿಟ್ಟಿಸಿ ಆರ್ಥಿಕ ಸ್ವಾತಂತ್ರ್ಯ ಹೊಂದುವುದು ಇದಕ್ಕೆ ಅತೀ ಮುಖ್ಯ ದಾರಿ.

ಒಟ್ಟಿನಲ್ಲಿ 'ಮಹಿಳೆ ಮತ್ತು ಅಭಿವೃದ್ಧಿ' ಪ್ರಕ್ರಿಯೆಯು ಹಲವಾರು ಹಂತಗಳನ್ನು ದಾಟಿ ವಿವಿಧ ಸ್ವರೂಪಗಳನ್ನು ಪಡೆದಿದೆ. ಅಂತರಾಷ್ಟ್ರೀಯ ಸಂಸ್ಥೆ, ಸರ್ಕಾರ, ಸ್ವಯಂಸೇವಾ ಸಂಸ್ಥೆ ಹಾಗೂ ಮಹಿಳಾ ಚಳುವಳಿಗಳ ಸಮಗ್ರ ಪ್ರಯತ್ನಗಳಿಂದ ಅದು ವ್ಯಾಪಕವಾಗಿ ಹಾಗೂ ನಿರಂತರವಾಗಿ ನಡೆಯುತ್ತಿದೆ.

ಆದರೆ ಅದರ ಮುಖ್ಯ ವಾಹಿನಿ ಅಭಿವೃದ್ಧಿ ವ್ಯಾಪ್ತಿಯಿಂದ ಹೊರಬಂದು ತನ್ನದೇ ಛಾಪಿನಡಿಯಲ್ಲಿ ಬೆಳೆಯಬೇಕಾಗಿದೆ. ಇದಕ್ಕಾಗಿ ಮಹಿಳಾ ಅಧ್ಯಯನ ತಜ್ಞರು, ಮಹಿಳಾ ಗುಂಪುಗಳು, ಸ್ವಯಂಸೇವಾ ಸಂಸ್ಥೆಗಳು, ಮಹಿಳಾ ಚಳುವಳಿ, ಸರ್ಕಾರ ಹಾಗೂ ಧನ ಸಹಾಯ ನೀಡುವ ಸಂಸ್ಥೆಗಳು ಒಟ್ಟಿಗೆ ಸೇರಿ ಸಮಾನತೆಯನ್ನು ಸಾಧಿಸುವ ನಿಟ್ಟಿನಲ್ಲಿ ಗಂಭೀರ ಪ್ರಯತ್ನಗಳನ್ನು ಮಾಡಬೇಕಾಗಿದೆ.

೨.೪ ಗ್ರಾಮೀಣಾಭಿವೃದ್ಧಿ ಮತ್ತು ಮಹಿಳೆ

ಭಾರತವು ಹಳ್ಳಿಗಳ ರಾಷ್ಟ್ರ. ಬಡತನ ಮತ್ತು ಹಿಂದುಳಿದಿರುವಿಕೆ ಹಳ್ಳಿಗಳಲ್ಲೇ ಕಂಡು ಬರುತ್ತಿದೆ. ದೇಶದಲ್ಲಿ ಶೇ. ೭೦ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಭಾರತದ ಅಭಿವೃದ್ಧಿಯು ಅದರ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಲ್ಲಿ ಅಡಗಿದೆ. ಭಾರತದಲ್ಲಿ ಗ್ರಾಮೀಣ ವಲಯವು ಅಭಿವೃದ್ಧಿಯ ಆಶಾಕಿರಣ.

ದೇಶದ ಶೇ. ೭೦ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿರುವುದರಿಂದ ಅಭಿವೃದ್ಧಿಗೆ ಸಂಬಂಧಪಟ್ಟ ಯಾವುದೇ ಕಾರ್ಯನೀತಿ ಹಳ್ಳಿಗಳ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಕೇಂದ್ರವಾಗಿಸಬೇಕು. ಇಂದು ಗ್ರಾಮೀಣ ಅಭಿವೃದ್ಧಿ ಎಂಬುದು ಇಡೀ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಮರುಸಂಘಟನೆ ಮತ್ತು ಮರುಸ್ಥಾಪನೆಯನ್ನು ಹೊಂದಿರುವ ಬಹು ಆಯಾಮವುಳ್ಳ ಪ್ರಕ್ರಿಯೆಯನ್ನಾಗಿ ಬಿಂಬಿಸಲಾಗುತ್ತದೆ. ಗ್ರಾಮೀಣ ಅಭಿವೃದ್ಧಿ ಎಂಬ ಪರಿಕಲ್ಪನೆ ಗ್ರಾಮೀಣ ವಾಸಿಗಳ ಜೀವನ ಮಟ್ಟವನ್ನು ಉತ್ತಮಪಡಿಸುವುದು. ಅದರಲ್ಲೂ ಹಳ್ಳಿಗಳ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವುದರೊಂದಿಗೆ ಹಳ್ಳಿಗಳ ಸರ್ವತೋಮುಖ ಬೆಳವಣಿಗೆಯಾಗಿದೆ.

ಗ್ರಾಮೀಣಾಭಿವೃದ್ಧಿಯು ಗ್ರಾಮೀಣ ಜನರ ಜೀವನ ಮಟ್ಟದಲ್ಲಿ ಸಹ್ಯ ಅಭಿವೃದ್ಧಿಗೆ ದಾರಿ ಮಾಡಿಕೊಡುವ ಒಂದು ಪ್ರಕ್ರಿಯೆ. ಗ್ರಾಮೀಣ ಅಭಿವೃದ್ಧಿಯು ಒಟ್ಟು ಅಭಿವೃದ್ಧಿಯ ಪೂರ್ವಾವಶ್ಯಕತೆಯಾಗಿದ್ದು, ಹೆಚ್ಚಿನ ಆದ್ಯತೆಯ ಅವಶ್ಯಕತೆಯಿದೆ.

ಭಾರತದಲ್ಲಿ ಗ್ರಾಮೀಣ ಜೀವನವನ್ನು ಸುಧಾರಿಸುವ ಪ್ರಯತ್ನಗಳನ್ನು ಮೊದಲ ಬಾರಿಗೆ ೨೦ರ ಶತಮಾನದ ಎರಡರ ದಶಕದಲ್ಲಿ ಕೈಗೊಳ್ಳಲಾಯಿತು. ಕಳೆದ ಅರ್ಧ ಶತಮಾನದ ಅವಧಿಯಲ್ಲಿ ನೂರಾರು ಸಾಮಾಜಿಕ /ಆರ್ಥಿಕ ತಜ್ಞರು ಗ್ರಾಮೀಣ ಸಮಸ್ಯೆಗಳನ್ನು ವಿಶ್ಲೇಷಿಸಿದ್ದಾರೆ. ಗ್ರಾಮೀಣ ಮತ್ತು ನಗರದ ಮಹಿಳಾ ತಜ್ಞರ ನಡುವೆ ಅತಿ ಸೂಕ್ಷ್ಮ ಹಾಗೂ ಗಂಭೀರ ಸ್ವರೂಪದ ಬಿನ್ನಾಭಿಪ್ರಾಯ ಇರುವುದರ ಜೊತೆಗೆ ಪುರುಷ ಮತ್ತು ಮಹಿಳಾ ತಜ್ಞರ ನಡುವೆ ಅನಾರೋಗ್ಯಕರ ಪೈಪೋಟಿ, ಹೆಚ್ಚಿರುವಂತೆ ಕಾಣುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಜಾತಿ, ಲಿಂಗದ ತಾರತಮ್ಯವನ್ನು ತ್ಯಜಿಸಿ, ಗ್ರಾಮೀಣ ಮಹಿಳೆಯರ ಸಮಸ್ಯೆಗಳನ್ನು

ನಿಷ್ಪಕ್ಷಪಾತವಾದ ವಿಶ್ಲೇಷಣೆಗೆ ಗುರಿಪಡಿಸುವ ವ್ಯಕ್ತಿಗಳು ಅತಿ ವಿರಳವಾಗಿದ್ದಾರೆ.

ಭಾರತದ ಆರ್ಥಿಕತೆಯ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಗ್ರಾಮೀಣ ವಲಯ ಮತ್ತು ಗ್ರಾಮೀಣ ಮಹಿಳೆಯರು ಹಿಂದಿನಿಂದಲೂ ಒಂದು ಪ್ರಮುಖ ಭಾಗವಾಗಿದೆ. ಹಳ್ಳಿಗಳ ರಾಷ್ಟ್ರ ಎಂದು ಕರೆಸಿಕೊಂಡಿರುವ ಭಾರತದಲ್ಲಿ ಗ್ರಾಮೀಣ ಜನರು ಅಧಿಕ ಸಂಖ್ಯೆಯಲ್ಲಿದ್ದು ಬಹುಪಾಲು ಮಹಿಳೆಯರು ಹಳ್ಳಿಗಳಲ್ಲೇ ವಾಸಿಸುತ್ತಿದ್ದಾರೆ. ಗ್ರಾಮೀಣ ವಲಯವು ಭಾರತದ ಆರ್ಥಿಕ ಚಟುವಟಿಕೆಯ ಪ್ರಮುಖ ವಲಯವೆಂದು ಪರಿಗಣಿಸಲ್ಪಟ್ಟಿದೆ. ಹಾಗಾಗಿ ಗ್ರಾಮೀಣ ಮಹಿಳೆಯರು ಗ್ರಾಮೀಣಾಭಿವೃದ್ಧಿಯ ಕೇಂದ್ರ ಬಿಂದುವಾಗಿದ್ದಾರೆ. ಯಾವುದೇ ಸಮಾಜದಲ್ಲಾಗಲಿ ಅಲ್ಲಿನ ಅಭಿವೃದ್ಧಿಯ ಮುಖ್ಯ ಸೂಚಕವೆಂದರೆ ಮಹಿಳೆಯರ ಸ್ಥಾನಮಾನ. ಸಮಾಜದ ಸುವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರ ಹಿರಿದಾದುದಾಗಿದೆ. ಸ್ವಾತಂತ್ರ್ಯ ಬಂದು ದಶಕಗಳೇ ಕಳೆದರೂ ಮಹಿಳೆಯರು ಮಾತ್ರ ಇನ್ನೂ ಅತ್ಯಂತ ಹಿಂದುಳಿದ ಸ್ಥಿತಿಯಲ್ಲೇ ಇದ್ದಾರೆ.

ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿತ್ತು. ಜನಪರ ಮತ್ತು ಗ್ರಾಮೀಣ ಕಾರ್ಯಕ್ರಮಗಳನ್ನು ಕೈಗೊಂಡರೂ ಅವುಗಳಲ್ಲಿ ಮಹಿಳೆಯರಿಗೆ ವಿಶೇಷ ಗಮನ ನೀಡಿರಲಿಲ್ಲ. ಮಹಿಳೆಯರ ಅಗತ್ಯಗಳಿಗೆ ಆದ್ಯತೆ ಸಿಕ್ಕಿರಲಿಲ್ಲ. ಎಲ್ಲಾ ಕಾರ್ಯಕ್ರಮಗಳ ಗುರಿ ಕುಟುಂಬಗಳಾಗಿದ್ದು ಕುಟುಂಬಗಳಿಗೆ ಏನೇ ಕೊಟ್ಟರೂ ಅದು ಸಹಜವಾಗಿ ಮಹಿಳೆಯರು ಸೇರಿದಂತೆ ಕುಟುಂಬದ ಎಲ್ಲಾ ಸದಸ್ಯರಿಗೂ ಸೇರುತ್ತದೆ ಎಂದು ನಂಬಲಾಗಿತ್ತು. ಚಿಂತನೆಗಳಲ್ಲಿ ಮಹಿಳೆಯರ ಆರ್ಥಿಕ ಚಟುವಟಿಕೆಗಳು, ಕುಟುಂಬಕ್ಕೆ ಹಾಗೂ ಸಮಾಜಕ್ಕೆ ಅವರು ನೀಡುವ ಅತ್ಯಮೂಲ್ಯವಾದ ಕೊಡುಗೆಯ ಪ್ರಸ್ತಾವ ಹೆಚ್ಚು ಕಡಿಮೆ ಇರಲೇ ಇಲ್ಲ ಎಂದು ಹೇಳಬಹುದು. ಬಡಜನರಿಗೆಂದು ಹಮ್ಮಿಕೊಂಡ ಕೆಲವು ಕಲ್ಯಾಣ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಿದ್ದರೂ ಅವುಗಳಲ್ಲಿ ಮಹಿಳೆಯರನ್ನೂ, ತಾಯಿಯರನ್ನೂ ಹಾಗೂ ಗೃಹಿಣಿಯರನ್ನಾಗಿ ಮಾತ್ರ ನೋಡಲಾಗುತ್ತಿತ್ತು. ಮಕ್ಕಳು ಹಾಗೂ ಕುಟುಂಬದ ಎಲ್ಲಾ ಸದಸ್ಯರನ್ನು ಪೋಷಿಸುತ್ತ ಅವರ ಬೇಡಿಕೆಗಳನ್ನು ಈಡೇರಿಸುತ್ತಾ ಕುಟುಂಬದ ನಿರ್ವಹಣೆಯಲ್ಲಿ ಮಹಿಳೆಯರು ಪ್ರಮುಖ ಪಾತ್ರವಹಿಸುವುದರಿಂದ ಕುಟುಂಬ ಅಥವಾ ಸಮಾಜದ ಕಲ್ಯಾಣವಾಗಬೇಕಾದರೆ ಮಹಿಳೆಯರಿಗೆ ಹೆಚ್ಚಿನ ಗಮನ ನೀಡಬೇಕೆಂಬ ಅಂಶಕ್ಕೆ ಹೆಚ್ಚು ಒತ್ತನ್ನು ನೀಡಲಾಗಿತ್ತು. ಮಹಿಳೆಯರ ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕತೆಯನ್ನು ಹೆಚ್ಚಿನ ಅವರು ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಮಾಡುವಂತಹ ಕಾರ್ಯಕ್ರಮಗಳು ಹೊರಬಂದವು.

೧೯೭೦ರ ದಶಕದಲ್ಲಿ ಮುಖ್ಯವಾಹಿನಿ ಅಭಿವೃದ್ಧಿಯು ಬಡತನ ನಿರ್ಮೂಲನವನ್ನು ಮುಖ್ಯ ಗುರಿಯನ್ನಾಗಿಸಿಕೊಂಡು ಮೂಲಭೂತ ಅಗತ್ಯತೆಗಳ ಪೂರೈಕೆಗೆ ಹೆಚ್ಚಿನ ಆದ್ಯತೆ ನೀಡಿತು.ಈ ಒಂದು ಬದಲಾವಣೆ ಅಭಿವೃದ್ಧಿಯಲ್ಲಿ ಮಹಿಳೆಯ ಕುರಿತು ಹೆಚ್ಚಿನ ಚಿಂತನೆಗೆ ಅವಕಾಶ ಮಾಡಿಕೊಟ್ಟಿತು.

ಶೇಕಡಾ ೩೦ರಷ್ಟು ಬಡ ಕುಟುಂಬಗಳನ್ನು ನಡೆಸುವವರು ಮಹಿಳೆಯರೇ ಅದ್ದರಿಂದ ಬಡತನ ನಿರ್ಮೂಲನ ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಆದ್ಯತೆ ನೀಡಬೇಕೆಂಬ ಆಲೋಚನೆ ಪ್ರಾರಂಭವಾಯಿತು. ಬಡ ಕುಟುಂಬದ ಮಹಿಳೆಯರ ಕೆಲಸದ ಹೊರೆಯನ್ನು ಕಡಿಮೆಮಾಡಿ ಅವರ ಜೀವನ ಮಟ್ಟವನ್ನು ಉತ್ತಮ ಪಡಿಸಲು ಮಾಡಿದ ಪ್ರಯತ್ನ ಮಹಿಳೆ ಮತ್ತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪ್ರಮುಖವಾಗಿದೆ. ಆದರೂ ಈ ಪ್ರಯತ್ನ ಮಹಿಳೆಯರ ಬಗೆಗಿನ ಅಭಿವೃದ್ಧಿ ನೀತಿಯಲ್ಲಿ ತೀವ್ರವಾದ ಬದಲಾವಣೆಗಳನ್ನು ತರಲಿಲ್ಲ. ಮಹಿಳೆಯರನ್ನು ಸಂತಾನೋತ್ಪಾದಕರು, ಮಕ್ಕಳು ಮತ್ತು ಮನೆಯವರನ್ನು ಪೋಷಿಸುವವರು ಎಂದು ಪ್ರಮುಖವಾಗಿ ಗುರುತಿಸಿ ಅವರ ಉತ್ಪಾದನಾ ಚಟುವಟಿಕೆಗಳಿಗೆ ಎರಡನೇ ಆದ್ಯತೆ ನೀಡಲಾಯಿತು. ಈ ಅವಧಿಯಲ್ಲಿ ಕುಟುಂಬದ ನಿರ್ವಹಣೆಯನ್ನು ಹೊತ್ತಿರುವ ಮಹಿಳೆಯರ ಆರ್ಥಿಕ ಪರಿಸ್ಥಿತಿಯನ್ನು ಬಲಗೊಳಿಸಲು ಕಡಿಮೆ ಆದಾಯವನ್ನು ತರುವಂತಹ ಸ್ವಯಂ ಉದ್ಯೋಗ ಚಟುವಟಿಕೆಗಳನ್ನು ಉತ್ತೇಜಿಸುವಂತಹ ಕೌಶಲ್ಯ, ಬುದ್ಧಿಮಟ್ಟ, ಸಾಮರ್ಥ್ಯ ಹಾಗೂ ಸಮಯದ ಅವಕಾಶ ಇವು ಮಹಿಳೆಯರನ್ನು ಔಪಚಾರಿಕ ಉದ್ಯೋಗದಲ್ಲಿ ತೊಡಗಿಸುವುದಕ್ಕಿಂತ ಸ್ವ ಉದ್ಯೋಗದಲ್ಲಿ ತೊಡಗಿಸಲು ಹೆಚ್ಚು ಸಹಾಯಕವಾಗಿವೆ ಎಂಬ ನಂಬಿಕೆಯಿಂದ ಮಹಿಳೆಯರ ಸ್ವ ಉದ್ಯೋಗಕ್ಕೆ ಹೆಚ್ಚು ಒತ್ತು ನೀಡಲಾಯಿತು. ಅವರ ಕೌಶಲ್ಯವನ್ನೇ ಉತ್ತಮಗೊಳಿಸುವುದು, ಹಣಕಾಸಿನ ನೆರವು ನೀಡುವುದು ಹಾಗೂ ಉದ್ಯೋಗಶೀಲತೆಯನ್ನು ಚುರುಕುಗಳಿಸುವುದು ಮಹಿಳಾ ಅಭಿವೃದ್ಧಿ ಕಾರ್ಯಗಳ ಗುರಿಯದವು.

ಎಲ್ಲಾ ವಿಧದ ಅಭಿವೃದ್ಧಿಗಳಿಗೆ ಆರ್ಥಿಕ ಅಭಿವೃದ್ಧಿಯು ಮೂಲ ಮತ್ತು ಅತೀ ಅಗತ್ಯ. ಮಹಿಳೆಯರಿಗೆ ಸಂಬಂಧಿಸಿದಂತೆ ಇದು ಹೆಚ್ಚು ಸತ್ಯ. ಆದ್ದರಿಂದ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಕೌಶಲ್ಯ ವೃದ್ಧಿ, ಆದಾಯ ತರುವಂತಹ ಚಟುವಟಿಕೆಗಳು ಮತ್ತು ಹಣಕಾಸಿನ ಲಭ್ಯತೆ ಅತ್ಯಗತ್ಯ. ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದರ ಮೂಲಕ ಮತ್ತು ಹೊಸ ಕೌಶಲ್ಯಗಳನ್ನು ನೀಡುವುದರ ಮೂಲಕ ಮಹಿಳೆಯರ ಉನ್ನತಿ ಸಾಧ್ಯ.

೨.೫ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ

೨೦೦೧ ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆ ೧೦೨೭ ಮಿಲಿಯ. ಮಹಿಳೆಯರ ಸಂಖ್ಯೆ ೪೯೫.೭ ಮಿಲಿಯ. ಇವರಲ್ಲಿ ೩೫೬.೧೭ ಮಿಲಿಯ ಮಹಿಳೆಯರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವವರು ಮತ್ತು ತೀವ್ರವಾದ ಬಡತನದಿಂದ ಬಳಲುತ್ತಿದ್ದಾರೆ. ಮಹಿಳೆಯರಿಗಿಂತ ಪುರುಷರ ಸಂಖ್ಯೆ ಜಾಸ್ತಿಯಾಗಿರುವ ಕೆಲವೇ ಕೆಲವು ರಾಷ್ಟ್ರಗಳಲ್ಲಿ ಭಾರತ ಕೂಡ ಒಂದು ಮತ್ತು ಈ ರೀತಿಯ ಅಸಮತೋಲನ ಕಳೆದ ಹಲವಾರು ವರ್ಷಗಳಲ್ಲಿ ಹೆಚ್ಚುತ್ತಲೇ ಇದೆ. ಆಹಾರ, ನೀರು, ಉರುವಲು, ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳ ಕೊರತೆ ಗ್ರಾಮೀಣ ಮಹಿಳೆಯರು ಎದುರಿಸುತ್ತಿರುವ ಪ್ರಮುಖ

ಸಮಸ್ಯೆಯಾಗಿದೆ. ಇದಲ್ಲದೆ ನೈಸರ್ಗಿಕ ಪರಿಸರದ ಅವನತಿಯಿಂದಾಗಿ ಮತ್ತು ಜಾಗತೀಕರಣದ ಹೊಡೆತದಿಂದಾಗಿ ಹಲವಾರು ಸಾಂಪ್ರದಾಯಿಕ ವೃತ್ತಿಗಳು ನಶಿಸುತ್ತಿರುವುದರಿಂದ ಮಹಿಳೆಯರಿಗೆ ತಮ್ಮ ಕುಟುಂಬವನ್ನು ಸಲಹುವುದು ಪ್ರಸ್ತುತ ಕಷ್ಟಸಾಧ್ಯವಾದ ಮಾತಾಗಿದೆ. ಜೊತೆಗೆ ಪೌಷ್ಟಿಕಾಂಶಕ್ಕೆ ಸಂಬಂಧಿಸಿದ ಲಿಂಗಭೇಧವನ್ನು ಬಾಲ್ಯದಿಂದಲೇ ಕಾಣಬಹುದು. ಇದು ಮಹಿಳೆಯರ ಮೇಲೆ ೨ ರೀತಿಯ ಪರಿಣಾಮವನ್ನು ಉಂಟುಮಾಡುತ್ತದೆ. ೧) ಅವರಿಗೆ ಪೂರ್ಣಪ್ರಮಾಣದ ಬೆಳವಣಿಗೆಯನ್ನು ತಲುಪಲು ಸಾಧ್ಯವಾಗದಿರುವುದು ಮತ್ತು ೨) ರಕ್ತಹೀನತೆ. ದೈನಂದಿನ ಚಟುವಟಿಕೆಗಳಿಗೆ ಅಗತ್ಯವಾದ ಶಕ್ತಿ ಅವರಲ್ಲಿರುವುದಿಲ್ಲ. ಆರೋಗ್ಯದ ವಿಷಯದಲ್ಲೂ ಅವರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಜಗತ್ತಿನ ಇಂದಿನ ಆರ್ಥಿಕ ಹಿನ್ನಡಗೆ ಹಾಗೂ ಭಾರತ ಅನುಭವಿಸುತ್ತಿರುವ ಭಯದ ವಾತವರಣಕ್ಕೆ ನಾವು ಅಂದು ಮತ್ತು ಇಂದಿಗೂ ಸಹ ಮಹಿಳೆಯರನ್ನು ಮುಖ್ಯವಾಹಿನಿಗೆ ತರದೇ ಮೂಲೆಗುಂಪಾಗಿಸುವುದೇ ಕಾರಣ. ಮೂಲತಃ ಪುರುಷನಿಗಿಂತಲೂ ಬಹು ಕೌಶಲ್ಯ ಮತ್ತು ಅತುಲ ಬಲ ಹೊಂದಿರುವ ಮಹಿಲೆ ರಾಷ್ಟ್ರ ನಿರ್ಮಾನದ ಕಾರ್ಯದಲ್ಲಿ ಬಹುಮುಖ ಪ್ರತಿಭೆ ತೋರಬಲ್ಲವಳಾಗಿದ್ದಾಳೆ. ವಿಶ್ವ ಮಾನ್ಯ ಮಹಾತ್ಮ ಗಾಂಧೀಜಿ ಹೇಳುತ್ತಾರೆ– "ನಾವು ನಮ್ಮ ಹೆಣ್ಣು ಮಕ್ಕಳನ್ನು ಗಂಡು ಮಕ್ಕಳಂತೇ ಸಹಜವಾಗಿ ಸ್ವೀಕರಿಸಬೇಕು, ಬೆಳೆಸಬೇಕು ಇದನ್ನು ನಾವು ಮಾಡುವವರೆಗೆ ನಮ್ಮ ದೇಶಕ್ಕೆ ಕರಾಳ ಗ್ರಹಣ ತಪ್ಪಿದ್ದಲ್ಲ" ಈ ಮಾತು ಇಡೀ ಜಗತ್ತಿಗೆ ಅನ್ವಯ ಶೌರ್ಯ, ಸಾಹಸಗಳು ಗಂಡಸರ ಗುತ್ತಿಗೆಯಲ್ಲ ಎಂದು ಹೇಳಿದ ಬಾಪೂಜಿಯ ಮಾತನ್ನು ಮನನ ಮಾಡಿಕೊಂಡು ಹೆಣ್ಣು–ಗಂಡು ಸಮನಾಗಿ ಹೆಜ್ಜೆ ಹಾಕಿದಾಗ ಮಾತ್ರ ಸಶಕ್ತ ರಾಷ್ಟ್ರ ಅಸ್ತಿತ್ವಕ್ಕೆ ಬರಲು ಸಾಧ್ಯ.

ಮಹಿಳೆಯರ ಅಭಿವೃದ್ಧಿಯ ವಿವಿಧ ಆಯಾಮಗಳನ್ನು ಪರಿಶೀಲಿಸಬೇಕಿದೆ. ಮಹಿಳೆಯರ ಸಹಜ ಹಕ್ಕುಗಳನ್ನು ರಕ್ಷಿಸುತ್ತಾ ಅವರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ಕರೆ ತರಬೇಕು ಮತ್ತು ಅಂತಹ ಅಭಿವೃದ್ಧಿಯಲ್ಲಿ ಸಾಂಸ್ಕೃತಿಕ ಮೌಲ್ಯಗಳಿಗೆ, ಹೆಣ್ಣಿನ ಗೌರವಕ್ಕೆ ಧಕ್ಕೆಯಾಗಬಾರದು. ರಾಷ್ಟ್ರದ ಕುಟುಂಬದ ಅಭಿವೃದ್ಧಿಗೆ ಮಹಿಳೆಯರ ಕೊಡುಗೆಯನ್ನು ಎಂದೂ ಕಡೆಗಣಿಸಲು ಸಾಧ್ಯವಿಲ್ಲವೆಂಬುದನ್ನು ಎಲ್ಲರೂ ಮನಗಾಣುವಂತಾಗಬೇಕು. ದುಡಿಮೆಯ ವಿಷಯಕ್ಕೆ ಬಂದಾಗ ಜೀವನೋಪಾಯಕ್ಕಾಗಿ ಬೇಸಾಯವಾಗಿರಲಿ ಇಲ್ಲವೆ ವಾಣಿಜ್ಯ ಆಧಾರಿತ ಬೇಸಾಯವೆ ಆಗಿರಲಿ, ಕೃಷಿಯಲ್ಲಿ ಮಹಿಳೆಯರ ಕೊಡುಗೆ ಅಪಾರವಾದುದು. ಕೃಷಿ ಕೆಲಸದಲ್ಲಿ ವ್ಯಯಿಸಿದ ಸಮಯ ಮತ್ತು ಶ್ರಮದ ಬಗ್ಗೆ ನಡೆಸಿದ ಒಂದು ಅಧ್ಯಯನ ಪ್ರಕಾರ ಪ್ರತಿ ಕುಟುಂಬದಲ್ಲಿ ಒಟ್ಟು ಮಾನವ ಗಂಟೆಗಳಲ್ಲಿ ಮಹಿಳೆಯರ ಪಾಲು ೫೩ ಪ್ರತಿಶತವಾಗಿದ್ದರೆ ಪುರುಷರ ಪಾಲು ೩೧ ಪ್ರತಿಶತ ಉಳಿದ ಕೊಡುಗೆ ಮಕ್ಕಳದ್ದು (ಬಾಟ್ಲೀವಾಲ ೧೯೮೨) ಪುರುಷರ ಹೆಚ್ಚಿನ ಕೃಷಿಕೆಲಸಗಳು ಯಾಂತ್ರಿಕ ಅಥವಾ ವಿದ್ಯುತ್ ಶಕ್ತಿಯನ್ನು ಉಪಯೋಗಿಸುವುಂಥದಾಗಿದ್ದರೆ, ಮಹಿಳೆಯರ

ಕೆಲಸಗಳು ಯಾವುದೇ ಸಲಕರಣೆಗಳನ್ನು ಉಪಯೋಗಿಸುವುದಿಲ್ಲವಾದ್ದರಿಂದ ಮತ್ತು ಹೆಚ್ಚಾಗಿ ದೈಹಿಕ ಶ್ರಮವನ್ನು ಆಧರಿಸುವುದರಿಂದ ಅವರ ಕೆಲಸವನ್ನು ಕೌಶಲ್ಯರಹಿತ ಮತ್ತು ಕಡಿಮೆ ಉತ್ಪಾದಕ ಎಂದು ಪರಿಗಣಿಸಲಾಗುತ್ತದೆ. ಹಾಗಾಗಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಸಮಯ ಕಠಿಣ ದುಡಿಮೆ ಮಾಡಿದರೂ ಅವರಿಗೆ ಕಡಿಮೆ ಸಂಬಳ ನೀಡಲಾಗುತ್ತದೆ.

ಗ್ರಾಮೀಣ ಪ್ರದೇಶದ ಮಹಿಳೆಯರು ಅನಕ್ಷರತೆ, ಅಜ್ಞಾನ ಅನಾರೋಗ್ಯ, ಅಧಿಕ ಸಂತಾನ ದಾರಿದ್ರ್ಯ ಕಾರ್ಯದ ಒತ್ತಡ, ಕಾನೂನುಜ್ಞಾನ/ ರಾಜಕೀಯ ಪ್ರಜ್ಞೆಯ ಅಭಾವ, ಶುದ್ಧ ಕುಡಿಯುವ ನೀರು ಮತ್ತು ಇಂಧನ ಶಕ್ತಿಯ ಕೊರತೆ, ದಿನಗೂಲಿ ವೇತನ ತಾರತಮ್ಯ, ಕುಟುಂಬ/ಸಮಾಜ ಕಲ್ಯಾಣ ಯೋಜನೆಗಳ ಬಗೆಗಿನ ಅಜ್ಞಾನ, ಪರಿಸರ ಮಾಲಿನ್ಯದ ದುಷ್ಪರಿಣಾಮ, ಅಸಂಘಟನೆ ಇತ್ಯಾದಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಂತಹ ಸಮಸ್ಯೆಗಳ ಅಧ್ಯಯನ ಮತ್ತು ಸಂಶೋಧನೆಯು ಆಧುನಿಕ ಜಗತ್ತಿನಲ್ಲಿ ಹೆಚ್ಚು ಸಮರ್ಪಕವಾಗಿದೆ. ಮಹಿಳೆಯ ಅಭಿವೃದ್ಧಿಯಲ್ಲಿ ಆರ್ಥಿಕ ಸ್ವಾವಲಂಬನೆ ಮತ್ತು ಆರ್ಥಿಕತೆಯ ನಿರ್ವಹಣೆಯು ನಿರ್ಣಾಯಕ ಪಾತ್ರ ವಹಿಸಬಲ್ಲುದು. ಮಹಿಳೆಯರ ಅಧಿಕಾರವನ್ನು, ಹಕ್ಕುಗಳನ್ನು ವಿಸ್ತರಿಸುವ ಮೂಲಕ ವಿಶ್ವದಲ್ಲಿ ಹೆಚ್ಚಿನಮಟ್ಟದ ಶಾಂತಿ ಸಂಯಮವನ್ನು ತರಲು ಸಾಧ್ಯ. ಈ ಜಗತ್ತಿಗೆ ಬೆಳಕು ನೀಡುವುದು ಪುರುಷರ ವಿಶೇಷಾಧಿಕಾರವಲ್ಲ.

ಅಭಿವೃದ್ಧಿಯಲ್ಲಿ ಮಹಿಳೆ ದೃಷ್ಟಿಕೋನವನ್ನು ಅಳವಡಿಸಿಕೊಂಡ ಅನೇಕ ಕಾರ್ಯಕ್ರಮಗಳಲ್ಲಿ ಪ್ರಮುಖವಾದುದೆಂದರೆ ೧೯೭೫ರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ. ಮೆಕ್ಸಿಕೊ ಸಮಾವೇಶ ಇಲ್ಲಿ ಕೈಗೊಂಡ ನಿರ್ಧಾರದ ಪ್ರಕಾರ ೧೯೭೫-೧೯೮೫ ರ ಅವಧಿಯನ್ನು ಮಹಿಳಾ ದಶಕವಾಗಿ ಘೋಷಿಸಲಾಯಿತು. ೧೯೭೫ ರ ಆಗಸ್ಟ್‌ನಲ್ಲಿ ನಡೆದ ಅಲಿಪ್ತ ರಾಷ್ಟಗಳ ಸಚಿವಾಂಗಗಳ ಸಮಾವೇಶದಲ್ಲಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸ್ತ್ರೀ ಪುರುಷರಿಬ್ಬರ ಸಾಮಾಜಿಕ, ರಾಜಕೀಯ, ಆರ್ಥಿಕ ಸಹಭಾಗಿತ್ವ ಯೋಜನೆಯನ್ನು ಅಳವಡಿಸಿಕೊಳ್ಳುವುದಾಗಿ ತೀರ್ಮಾನಿಸಲಾಯಿತು. ವಿಮೆನ್ಸ್ ಇಂಟರ್ ನೇಶನಲ್ ಡೆಮಾಕ್ರಾಟಿಕ್ ಫೆಡರೇಶನ್ ಸಂಘಟನೆಯು ವಿಶ್ವ ಸಂಸ್ಥೆಯ ಸ್ತ್ರೀಯರ ಸ್ಥಾನಮಾನ ಕುರಿತ ಸಮಿತಿಗೆ ನೀಡಿದ ಸಲಹೆಯ ಅನುಸಾರವಾಗಿ ೧೯೭೮ ನೇ ವರ್ಷವನ್ನು ಅಂತರಾಷ್ಟ್ರೀಯ ಮಹಿಳಾ ದಿನ ಎಂದು ವಿಶ್ವಸಂಸ್ಥೆ ಘೋಷಿಸಿದೆ. ಸಮಾನತೆ, ಅಭಿವೃದ್ಧಿ ಮತ್ತು ಶಾಂತಿಯು ಇದರ ಮುಖ್ಯ ಉದ್ದೇಶಗಳು.

ಆರ್ಥಿಕ ಯೋಜನೆಯ ಆರಂಭದ ದಶಕಗಳಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರಿಗೆ ಅಷ್ಟೊಂದು ಪ್ರಾಮುಖ್ಯತೆ ನೀಡಿರಲಿಲ್ಲ. ದೇಶದ ಐದನೆ ಪಂಚವಾರ್ಷಿಕ ಯೋಜನೆವರೆಗೂ (೧೯೭೪-೭೮) ಸರಕಾರವು ಮಹಿಳೆಯನ್ನು ಅಭಿವೃದ್ಧಿ ಚರ್ಚೆಯಲ್ಲಿ ಹಾಗೂ ಕಾರ್ಯಕ್ರಮಗಳ ಯೋಜನೆಗಳಲ್ಲಿ ಅಳವಡಿಸಿಕೊಂಡಿರಲಿಲ್ಲ. ಆದರೆ ಆರನೇ ಪಂಚವಾರ್ಷಿಕ ಯೋಜನೆಯ ಕರಡು ಮಹಿಳಾ ಉದ್ಯಮಶೀಲತೆಗೆ

ಸಂಬಂಧಪಟ್ಟಂತೆ ವಿಶೇಷ ಪ್ರಾಶಸ್ತ್ಯವನ್ನು ನೀಡಿ, ಈ ದಿಕ್ಕಿನಲ್ಲಿ ಕ್ರಮಗಳನ್ನು ಕೈಗೊಂಡಿತು. ಎಂಟನೇ ಪಂಚವಾರ್ಷಿಕ ಯೋಜನೆ (೧೯೯೨-೧೯೯೭) ಅಭಿವೃದ್ಧಿಯ ಫಲ ಮಹಿಳೆಯರಿಗೆ ಸಿಗುವಂತಾಗಲು ಪಣ ತೊಟ್ಟಿತು.

೧೯೯೨ ರ ಕಾರ್ಯಯೋಜನೆ

ಸ್ತ್ರೀಯರಲ್ಲಿ ಸ್ವಾವಲಂಬನೆ ಮತ್ತು ಆತ್ಮವಿಶ್ವಾಸವನ್ನು ವೃದ್ಧಿಸಲು ಕೈಗೊಂಡ ಕ್ರಮಗಳು.

೧. ಮಹಿಳೆಯರಿಗೆ ಶಿಕ್ಷಣ, ಉದ್ಯೋಗ, ಆರೋಗ್ಯ ಇತ್ಯಾದಿ ಕ್ಷೇತ್ರಗಳ ಆಯ್ಕೆಗೆ ಅವಕಾಶ.

೨. ಆರ್ಥಿಕ ಸ್ವಾಯತ್ತತೆಗೆ ಹಲವಾರು ಮಾಹಿತಿ ಮತ್ತು ಜ್ಞಾನ ಒದಗಿಸುವುದು.

೩. ಶಿಕ್ಷಕರಿಗೆ ಮಹಿಳಾ ಶಿಕ್ಷಣವನ್ನು ಪ್ರೋತ್ಸಾಹಿಸಲು ತರಬೇತಿ ಮಹಿಳಾ ಶಿಕ್ಷಕಿಯರನ್ನು ನೇಮಿಸಲು ಹೊಸ ಯೋಜನೆ ಹಾಕಿಕೊಳ್ಳಲು ಪ್ರಯತ್ನ.

೧೯೯೩ರಲ್ಲಿ ರಾಷ್ಟ್ರೀಯ ಮಹಿಳಾ ಕೋಶ ಮಹಿಳೆಯರ ಮತ್ತು ಬಡ ಮಹಿಳೆಯರ ಸಾಲದ ಅಗತ್ಯತೆಯನ್ನು ಈಡೇರಿಸಲು ಸ್ಥಾಪಿಸಲ್ಪಟ್ಟಿತು. ಒಂಬತ್ತನೇ ಪಂಚವಾರ್ಷಿಕ ಯೋಜನೆ(೧೯೯೭-೨೦೦೨) ಮಹಿಳೆಯರಿಗಾಗಿನ ಯೋಜನೆ ಕಾರ್ಯ ತಂತ್ರದಲ್ಲಿ ಎರಡು ಮಹತ್ವದ ಬದಲಾವಣೆಗಳನ್ನು ತಂದಿತು. ಮಹಿಳಾ ಸಬಲೀಕರಣ ಪ್ರಾಥಮಿಕ ಉದ್ದೇಶವಾಯಿತು. ಮತ್ತು ಎರಡನೆಯದಾಗಿ ಯೋಜನೆಯು ಮಹಿಳಾ ನಿರ್ದಿಷ್ಟ ಮತ್ತು ಮಹಿಳಾ ಸಂಬಂಧ ರಂಗದಲ್ಲಿ ಲಭ್ಯವಿರುವ ಸೇವಾ ಸೌಲಭ್ಯಗಳು ದೊರಕುವಂತೆ ಪ್ರಯತ್ನ ಪಟ್ಟಿತು. ಹತ್ತನೇ ಪಂಚವಾರ್ಷಿಕ ಯೋಜನೆ ಸಮಾಜೋ- ಆರ್ಥಿಕ ಬದಲಾವಣೆ ಮತ್ತು ಅಭಿವೃದ್ಧಿಗಾಗಿ ಮಹಿಳೆಯರನ್ನು ಸಶಕ್ತರನ್ನಾಗಿ ಮಾಡುವತ್ತ ತನ್ನ ನಿಲುವನ್ನು ಹೊಂದಿತ್ತು.

ಸ್ವರ್ಣಜಯಂತಿ ಗ್ರಾಮ ಸ್ವ ಉದ್ಯೋಗ ಯೋಜನೆ, ಇಂದಿರಾ ಆವಾಸ್ ಯೊಜನೆ, ರಾಷ್ಟ್ರೀಯ ಸಾಮಾಜಿಕ ನೆರವಿನ ಕಾರ್ಯಕ್ರಮ, ಪುನರಚಿತ ಗ್ರಾಮೀಣ ಸ್ವಚ್ಛತಾ ಕಾರ್ಯಕ್ರಮ, ಗ್ರಾಮೀಣ ನೀರು ಸರಬರಾಜು ಯೋಜನೆ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ಗ್ರಾಮೀಣ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ ಹಾಗೂ ಜವಾಹರ್ ರೋಜಗಾರ್ ಯೋಜನೆಗಳಲ್ಲಿ ವಿಶೇಷವಾಗಿ ಮಹಿಳಾ ಘಟಕಗಳನ್ನು ಅಡಕಗೊಳಿಸಲಾಗಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ಮಹಿಳಾ ಸ್ವಸಹಾಯ ಗುಂಪುಗಳು, ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ, ಜವಾಹರ್ ರೋಜಗಾರ್ ಯೋಜನೆ, ಸ್ವರ್ಣ ಜಯಂತಿ ರೋಜಗಾರ್ ಯೋಜನೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗಾವಕಾಶಗಳ ಯೋಜನೆ, ಗ್ರಾಮೀಣ ಯುವ ಜನಾಂಗದ ಸ್ವಯಂ ಉದ್ಯೋಗ ತರಬೇತಿ ಯೋಜನೆ, ಇತ್ಯಾದಿ ಕಾರ್ಯಕ್ರಮಗಳು ಗ್ರಾಮೀಣ ಮಹಿಳೆಯರು ಮತ್ತು ಯುವತಿಯರ ಸಾಮಾಜಿಕ ಆರ್ಥಿಕ ಸಶಕ್ತೀಕರಣದಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತವೆ. ಈ ಎಲ್ಲಾ ಯೋಜನೆಗಳಲ್ಲೂ ಬಡತನ ನಿರ್ಮೂಲನೆ ಮತ್ತು ಮಹಿಳೆಯರಿಗೆ

ಉದ್ಯೋಗ ಸೃಷ್ಟಿಯತ್ತ ಗಮನ ನೀಡಲಾಗಿದೆ. ಸ್ತ್ರೀ ಸ್ವಸಹಾಯ ಗುಂಪುಗಳನ್ನು ಸಂಘಟಿಸಿ ಕೌಶಲ್ಯಗಳನ್ನು ಕಲ್ಪಿಸಲು ಹಾಗೂ ಚಿಕ್ಕ ಪುಟ್ಟ ಸಾಲಗಳನ್ನು ಪಡೆದು ವ್ಯವಹಾರ ನಡೆಸುವ ತರಭೇತಿ ನೀಡಲಾಗಿದೆ. ಮಹಿಳೆಯರಿಗೆ ತಮ್ಮ ವರಮಾನ ವೃದ್ಧಿ ಮತ್ತು ಹಣಕಾಸು ನಿರ್ವಹಣೆಯಲ್ಲಿ ತರಭೇತಿ ನೀಡಿ ಅವರು ತಮ್ಮ ಗಳಿಕೆಯ ಲೆಕ್ಕವನ್ನು ತಾವೇ ಇಡುವಂತೆ ಮಾಡಲಾಗಿದೆ. ಗ್ರಾಮೀಣ ಮಹಿಳಾ ಅಭಿವೃದ್ಧಿ ಯೋಜನೆಗಳಿಂದಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ, ಆದಳಿತಾತ್ಮಕವಾಗಿ ಜಾಗೃತಗೊಳ್ಳುತ್ತಿರುವುದು ಸತ್ಯದ ಸಂಗತಿಯಾಗಿದೆ. ಇದಕ್ಕೆ ಕರ್ನಾಟಕದ ಗ್ರಾಮೀಣ ಮಹಿಳೆ ಒಂದು ಜ್ವಲಂತ ಉದಾಹರಣೆ. ಕರ್ನಾಟಕದಲ್ಲಿ ಗ್ರಾಮೀಣ ಮಹಿಳೆಯರಿಗೆ ಸ್ವ ಉದ್ಯೋಗಿಗಳಾಗಲು ಸ್ವಯಂ ಉದ್ದಿಮೆ ಹೊಂದಲು ಸಾಕಷ್ಟು ಪ್ರೋತ್ಸಾಹ ನೀಡುತ್ತಿರುವುದರಿಂದ ಹೆಚ್ಚು ಹೆಚ್ಚು ಮಹಿಳೆಯರು ಆರ್ಥಿಕವಾಗಿ ಸಬಲರಾಗಿದ್ದಾರೆ.

೨೦೦೧ರಲ್ಲಿ ಅಳವಡಿಸಿಕೊಂಡ ಮಹಿಳಾ ಸಬಲೀಕರಣದ ರಾಷ್ಟ್ರೀಯ ನೀತಿ ಮಹಿಳೆಯರನ್ನು ಸಾಮಾಜಿಕ ಆರ್ಥಿಕ ಬದಲಾವಣೆ ಮತ್ತು ಬದಲಾವಣೆಯ ಅಸ್ತ್ರವನ್ನಾಗಿಸುವುದರ ಮೂಲಕ ಸಮಾಜದಲ್ಲಿ ಮಹಿಳೆಯರಿಗೆ ಸಿಗಬೇಕಾದ ಸ್ಥಾನ ದೊರಕುವಂತೆ ಮಾಡುವ ಉದ್ದೇಶವನ್ನು ಹೊಂದಿದೆ.

ರಾಷ್ಟ್ರೀಯ ಮಹಿಳಾ ಸಬಲೀಕರಣ ನೀತಿ ೨೦೦೧

ಮಾರ್ಚ್ ೨೦, ೨೦೦೧ರಲ್ಲಿ ಈ ನೀತಿಯನ್ನು ಪ್ರಕಟಿಸಲಾಯಿತು. ಆದರೆ ಇದನ್ನು ಈ ಮೊದಲು ೧೯೯೫ರಲ್ಲಿ ಬೀಜಿಂಗ್‌ನಲ್ಲಿ ನಡೆದ ೪ನೇ ಮಹಿಳಾ ಜಾಗತಿಕ ಸಮ್ಮೇಳನದಲ್ಲಿ ಅನುಮೋದಿಸಲಾಗಿತ್ತು. ಇದರ ಮುಖ್ಯಾಂಶಗಳು ಈ ಕೆಳಗಿನಂತಿವೆ.

೧. ಸಾಮಾಜಿಕ ದೃಷ್ಟಿಕೋನದ ಬದಲಾವಣೆಯಿಂದ ಮಹಿಳಾ ಸಬಲೀಕರಣ.

೨. ಮಹಿಳೆಯರಿಗೆ ಸಂಬಂಧಿಸಿದಂತೆ ಎಲ್ಲಾ ತಾರತಮ್ಯಗಳನ್ನು ತೆಗೆದುಹಾಕುವುದು.

೩. ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಅವಕಾಶ.

೪. ಮಾನವಿಕ ಅಭಿವೃದ್ಧಿಯಲ್ಲಿ ಮಹಿಳಾ ಅಭಿವೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯ.

ಮಹಿಳಾ ಸಬಲೀಕರಣದ ರಾಷ್ಟ್ರೀಯ ನೀತಿಯ ಶಿಫಾರಸ್ಸಿನ ಅಧಾರದ ಮೇಲೆ ಪಂಚವಾರ್ಷಿಕ ಯೋಜನೆ ಮಹಿಳೆಯರನ್ನು ಸಶಕ್ತರನ್ನಾಗಿ ಮಾಡಲು ಮೂರು ವಿಧದ ಕಾರ್ಯ ನೀತಿಯನ್ನು ಶಿಫಾರಸು ಮಾಡಿತು. ಅವೆಂದರೆ ಸಾಮಾಜಿಕ ಸಬಲೀಕರಣ, ಆರ್ಥಿಕ ಸಬಲೀಕರಣ ಮತ್ತು ಲಿಂಗ ನ್ಯಾಯ. ಆರ್ಥಿಕ ಸಬಲೀಕರಣವು ಮಹಿಳೆಯರಿಗೆ ತಮ್ಮಲ್ಲಿನ ಜ್ಞಾನ ಕೌಶಲ್ಯ ಮತ್ತು ವ್ಯವಹಾರದಲ್ಲಿನ ತಮ್ಮ ಸಾಮರ್ಥ್ಯವನ್ನು ತೋರ್ಪಡಿಸಲು ಒಂದು ಮುಖ್ಯ ಸಾಧನವಾಗಿದೆ. ಇದಕ್ಕೆ ಹಲವಾರು ಜ್ವಲಂತ ಉದಾಹರಣೆಗಳಿವೆ. ಸಶಕ್ತ ಮಹಿಳೆಯರು ರಾಷ್ಟ್ರದ ಆರ್ಥಿಕ ಮತ್ತು ಸಾಮಾಜಿಕ ಗುರಿಯನ್ನು ಸಾಧಿಸಲು

ಮತ್ತು ದೇಶವನ್ನು ಮುನ್ನಡೆಸುವಲ್ಲಿ ಉತ್ತಮ ಕೊಡುಗೆ ನೀಡಬಲ್ಲರು.

ಮಹಿಳಾ ಸಮಸ್ಯೆಯು ಕೇವಲ ಮಹಿಳೆಯರು ಮಾತ್ರ ನಿವಾರಿಸಿಕೊಳ್ಳುವಂತಹ ಸಮಸ್ಯೆಯಲ್ಲ, ಪುರುಷ ಪ್ರಧಾನ ಸಮಾಜವು ಕೂಡ ಈ ನಿಟ್ಟಿನಲ್ಲಿ ಕೆಲಸ ಮಾಡಬೇಕೆಂದು ತೀರ್ಮಾನಿಸಲಾಯಿತು. ೧೯೯೬ ಮಾರ್ಚ್ ೮ರಂದು ವಿಶ್ವ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಭಾರತದಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ಸುಧಾರಿಸಲು ಒಂದು ಸ್ಥಾಯೀ ಸಮಿತಿಯನ್ನು ನೇಮಿಸುವ ನಿರ್ಣಯ ಕೈಗೊಂಡು ೧೯೯೭ರ ಏಪ್ರಿಲ್‌ನಲ್ಲಿ ರಾಜಕೀಯ ಸಂಸ್ಥೆಗಳಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಅವಕಾಶ ಕೇವಲ ಲಿಂಗ ತಾರತಮ್ಯದ ಮೇಲೆ ಬೆಳಕು ಚೆಲ್ಲಿತು.

ಕಳೆದ ಶತಮಾನದ ೭೦ ರ ದಶಕದಲ್ಲಿ ಗ್ರಾಮೀಣ ಮಹಿಳೆಯರ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಪಂಚವಾರ್ಷಿಕ ಯೋಜನೆಗಳ ಮೂಲಕ (ವಿಶಿಷ್ಟವಾಗಿ ೪, ೬ ಮತ್ತು ೮ನೆ ಯೋಜನೆಗಳು) ಗ್ರಾಮೀಣ ಮಹಿಳೆಯರ ಸಮಗ್ರ ಪ್ರಗತಿಗಾಗಿ ಹಲವಾರು ಕಾರ್ಯಕ್ರಮಗಳು ಜಾರಿಗೊಂಡಿದೆ.

ಎರಡನೆಯ ಅಭಿವೃದ್ಧಿಯೋಜನಾ ದಶಕ (೧೯೭೦-೮೦) ದ ಕಾರ್ಯಯೋಜನೆಯಲ್ಲಿ ಮಹಿಳೆ ಮತ್ತು ಅಭಿವೃದ್ಧಿ ವಿಷಯ ಸ್ಥಾನ ಪಡೆಯಿತು. ಭಾರತದಲ್ಲಿ ಸರ್ಕಾರವೇ ಸ್ತ್ರೀಯರಿಗಾಗಿ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿತು. ಉದಾ: ದೇವದಾಸಿ ಪುನರ್ವಸತೀಕರಣ, ಕೊಳಗೇರಿ ನಿವಾಸಿಗಳ ಅಭಿವೃದ್ಧಿ, ಸ್ತ್ರೀಯರ ಸ್ವಯಂ ಉದ್ಯೋಗ ತರಬೇತಿ ಯೋಜನೆ ಇತ್ಯಾದಿ. ಇದರಂತೆಯೇ ಸರಕಾರೇತರ ಸಂಸ್ಥೆಗಳೂ ಕೂಡ ಮಹಿಳೆಯ ಸಬಲೀಕರಣ ಯೋಜನೆಗಳನ್ನು ಹಮ್ಮಿಕೊಂಡಿವೆ.

ವಿಶ್ವ ಸಂಸ್ಥೆ ಮಾಜಿ ಪ್ರಧಾನ ಕಾರ್ಯದರ್ಶಿ ಕೋಫಿ ಅನ್ನಾನ್ ಹೇಳಿರುವಂತೆ ಲಿಂಗ ಸಮಾನತೆ ಕೇವಲ ಒಂದು ಗುರಿ ಮಾತ್ರವಲ್ಲ ಅದಕ್ಕಿಂತ ಮಿಗಿಲಾಗಿ ಬಡತನವನ್ನು ತಗ್ಗಿಸುವ, ನಿರಂತರ ಅಭಿವೃದ್ಧಿಯನ್ನು ಉತ್ತೇಜಿಸುವ ಮತ್ತು ಉತ್ತಮ ಆಡಳಿತವನ್ನು ಸ್ಥಾಪಿಸುವ ಗುರಿಗಳನ್ನು ಈಡೇರಿಸಲು ಒಂದು ಪೂರ್ವಾವಶ್ಯಕತೆಯಾಗಿದೆ. ಮಹಿಳೆಯರ ಬಗ್ಗೆ ಪ್ರಸ್ತುತ ಇರುವ ಸಾಮಾಜಿಕ ತಾರತಮ್ಯವನ್ನು ಹೋಗಲಾಡಿಸುವುದು ಪ್ರಮುಖ ಆದ್ಯತೆಯಾಗಬೇಕು ಮತ್ತು ಅದರ ಜೊತೆಗೆ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ಶೀಘ್ರವಾಗಿ ಸುಧಾರಿಸುವ ಪ್ರಾಮಾಣಿಕ ಪ್ರಯತ್ನ ನಡೆಯಬೇಕು.

ಹೆಚ್ಚಿನೆಲ್ಲಾ ಗ್ರಾಮೀಣ ಮಹಿಳೆಯರು ಬಡವರು, ಮುಗ್ಧರೂ, ಅನಕ್ಷರಸ್ಥರೂ ಮತ್ತು ತುಳಿತಕ್ಕೊಳಗಾದವರಾಗಿದ್ದಾರೆ. ಗ್ರಾಮೀಣ ಮಹಿಳೆಯರು ಅಸಂಘಟಿತರಾಗಿದ್ದು ಸೂಕ್ತ ಪ್ರಾತಿನಿಧ್ಯವನ್ನು ಹೊಂದಿಲ್ಲ. ಗ್ರಾಮೀಣ ಮಹಿಳೆಯರಿಗೆ ತರಬೇತಿ ನೀಡುವುದರ ಮೂಲಕ ಅವರನ್ನು ಹೆಚ್ಚು ಸಶಕ್ತರನ್ನಾಗಿಸಬಹುದು.

೨೦೦೧ರಲ್ಲಿ ಅಳವಡಿಸಿಕೊಂಡ ಮಹಿಳಾ ಸಬಲೀಕರಣದ ರಾಷ್ಟ್ರೀಯ ನೀತಿ ಮಹಿಳೆಯರನ್ನು ಸಾಮಾಜಿಕ ಆರ್ಥಿಕ ಬದಲಾವಣೆ ಮತ್ತು ಬದಲಾವಣೆಯ ಅಸ್ತ್ರವನ್ನಾಗಿಸುವುದರ ಮೂಲಕ ಸಮಾಜದಲ್ಲಿ ಮಹಿಳೆಯರಿಗೆ ಸಿಗಬೇಕಾದ ಸ್ಥಾನ ದೊರಕುವಂತೆ ಮಾಡುವ ಉದ್ದೇಶವನ್ನು ಹೊಂದಿದೆ.

ಅಧ್ಯಾಯ – ೩ : ಉದ್ಯಮಶೀಲತೆ ಮತ್ತು ಸಬಲೀಕರಣ

- ಪ್ರವೇಶ
- ಉದ್ಯಮ ಮತ್ತು ಉದ್ಯಮಶೀಲತೆ
- ಉದ್ಯಮಶೀಲತೆ ಮತ್ತು ಗ್ರಾಮೀಣಾಭಿವೃದ್ಧಿ
- ಮಹಿಳೆ, ಉದ್ಯಮಶೀಲತೆ ಮತ್ತು ಗ್ರಾಮೀಣಾಭಿವೃದ್ಧಿ

ಅಧ್ಯಾಯ-೩: ಉದ್ಯಮಶೀಲತೆ ಮತ್ತು ಸಬಲೀಕರಣ

೩.೧ ಪ್ರವೇಶ

ಆರ್ಥಿಕಾಭಿವೃದ್ಧಿಯಲ್ಲಿ ಉದ್ಯಮಸಾಹಸದ ಮಹತ್ವವನ್ನು ಅತ್ಯಂತ ಖಚಿತವಾಗಿ ಗುರುತಿಸಿದ ಕೀರ್ತಿ ಶುಂಪೀಟರ್ ಅವರಿಗೆ ಸಲ್ಲುತ್ತದೆ. ಆರ್ಥಿಕಾಭಿವೃದ್ಧಿಗೆ ಅವಿಷ್ಕಾರವೇ ಕಾರಣ ಮತ್ತು ಅವಿಷ್ಕಾರವೇ ಉದ್ಯಮಸಾಹಸ ಎಂದು ಹೇಳುವ ಮೂಲಕ ಶುಂಪೀಟರ್ ೧೯೧೧ರಲ್ಲೇ ಉದ್ಯಮ ಸಾಹಸದ ಪ್ರಾಮುಖ್ಯತೆಯನ್ನು ಗುರುತಿಸಿದ್ದಾನೆ. ಹಳ್ಳಿಗಳಲ್ಲಿ ಬಡತನವನ್ನು ನಿರ್ಮೂಲನೆ ಮಾಡುವಲ್ಲಿ ಉದ್ಯಮದ ಅಭಿವೃದ್ಧಿಯು ಒಂದು ಪರಿಣಾಮಕಾರಿ ಸಾಧನವನ್ನಾಗಿ ಪರಿಗಣಿಸಲಾಗಿದೆ. ಇತರರ ಕೈಕೆಳಗೆ ಕೆಲಸ ಮಾಡುವ ಬದಲು ಬೇರೆಯವರಿಗೆ ಉದ್ಯೋಗ ನೀಡುವ ಸಾಮರ್ಥ್ಯವು ಉದ್ಯಮಶೀಲತೆಯಿಂದ ಬೆಳೆಯುತ್ತದೆ (ಎ.ಪಿ.ಜೆ ಅಬ್ದುಲ್ ಕಲಾಮ್).

೩.೨ ಉದ್ಯಮ ಮತ್ತು ಉದ್ಯಮಶೀಲತೆ

ಉದ್ಯಮ ಎಂದರೆ ಒಂದು ಸಂಘಟಿತ ಘಟಕ, ಉತ್ಪಾದನಾ ಘಟಕ. ಇಲ್ಲಿ ವಸ್ತುಗಳನ್ನು ಉತ್ಪಾದಿಸಿ ಮಾರಾಟ ಮಾಡಲಾಗುತ್ತದೆ. ಕೇವಲ ವಸ್ತುಗಳನ್ನು ಉತ್ಪಾದಿಸಬೇಕೆಂದಿಲ್ಲ. ಕಚ್ಚಾ ಸಾಮಗ್ರಿಗಳನ್ನು ಪೂರೈಸುವ, ಬಿಡಿಭಾಗಗಳನ್ನು ತಯಾರಿಸುವ, ತಯಾರಾದ ವಸ್ತುಗಳನ್ನು ಕೊಂಡು ಮಾರಾಟ ಮಾಡುವ, ವ್ಯಾಪಾರ ವಹಿವಾಟು ನಡೆಸುವ ಘಟಕಗಳು ಉದ್ಯಮವೆನಿಸಿಕೊಳ್ಳುತ್ತವೆ.

ಉದ್ಯಮವು ನಾಲ್ಕು ಪ್ರಾಥಮಿಕ ಜವಾಬ್ದಾರಿಯನ್ನು ಹೊಂದಿವೆ.

೧. ಬಡತನ ನಿರ್ಮೂಲನೆ

೨. ಉದ್ಯೋಗ ಸೃಷ್ಟಿ

೩. ಉದ್ಯಮ ಅಭಿವೃದ್ಧಿ

೪. ಮಹಿಳಾ ಸಬಲೀಕರಣ

ಸಾಮಾಜಿಕ ಪರಿವರ್ತನೆಯ ಪ್ರೇರಕ ಶಕ್ತಿಯಾಗಿರುವ ಉದ್ಯಮಿಗಳಿಗೆ ಬೇಕಾಗಿರುವ ಪ್ರಮುಖ ಲಕ್ಷಣಗಳೆಂದರೆ:

೧. ದೂರ ದೃಷ್ಟಿತ್ವ

೨. ಹೊಸ ಅವಕಾಶ ಮತ್ತು ಸವಾಲುಗಳನ್ನು ಹುಡುಕುವ ಮನೋಭಾವ

೩. ಸೃಜನಶೀಲತೆ

೪. ಉತ್ತಮವಾದುದನ್ನೇ ಮಾಡಬೇಕೆಂಬ ತುಡಿತ

೫. ಅನಿಶ್ಚಿತತೆಯನ್ನು ಎದುರಿಸುವ ವಿಶ್ವಾಸ

೬. ಭವಿಷ್ಯದ ಬಗೆಗಿನ ಸಕಾರಾತ್ಮಕ ನಿಲುವು

೭. ಉತ್ತಮ ಜ್ಞಾನ ಮತ್ತು ಕೌಶಲ್ಯ.

ಕೈಗಾರಿಕಾ ಕ್ರಾಂತಿಯ ನಂತರ ಗೃಹ ಕೈಗಾರಿಕೆಗಳು ಮುಚ್ಚಿ ಹೋದವು ಅನೇಕ ಕೈಗಾರಿಕೆಗಳು ಹುಟ್ಟಿಕೊಂಡವು. ಇವುಗಳಲ್ಲಿ ಮೂರು ಪ್ರಕಾರಗಳ ಕೈಗಾರಿಕೆಗಳನ್ನು ನೋಡುತ್ತೇವೆ.

೧. ದೊಡ್ಡ ಕೈಗಾರಿಕೆ

೨. ಮಧ್ಯಮ ಕೈಗಾರಿಕೆ

೩. ಸಣ್ಣ ಕೈಗಾರಿಕೆ

ಸಣ್ಣ ಕೈಗಾರಿಕೆಗಳನ್ನು ಉದ್ಯಮಗಳೆಂದು ಕರೆಯಲಾಗುತ್ತದೆ. ಇಲ್ಲಿ ಸ್ಥಳೀಯ ಕಚ್ಚಾ ಸಾಮಗ್ರಿ, ತಂತ್ರಜ್ಞಾನ ಮತ್ತು ಸ್ಥಳೀಯ ಜನರನ್ನು ನೇಮಿಸಿಕೊಂಡು ಉತ್ಪಾದನಾ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ಉದ್ಯಮಗಳು ಅಪಾರ ಲಾಭಗಳಿಸುವ, ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವ ಕ್ಷೇತ್ರಗಳಾಗಿವೆ. ದೇಶದ ಆರ್ಥಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸ್ಥಳೀಯ ಭೌತಿಕ ಮತ್ತು ಮಾನವ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಮೂಲಕ ಉದ್ಯೋಗಗಳನ್ನು ಸೃಷ್ಟಿಸುತ್ತದೆ. ಉತ್ಪಾದನೆ, ಆದಾಯ ಹೆಚ್ಚಿಸುವುದರ ಮೂಲಕ ದೇಶದ ಆರ್ಥಿಕತೆಗೆ ಅಪಾರ ಕೊಡುಗೆಯನ್ನು ಸಲ್ಲಿಸುತ್ತವೆ. ಅಧಿಕ ಜನಸಂಖ್ಯೆಯಿರುವ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಈ ಸಣ್ಣ ಉದ್ಯಮಗಳು ಹೆಚ್ಚು ಸೂಕ್ತವಾಗಿದೆ. ಯಾವುದೇ ಒಂದು ಉತ್ಪದನಾ ಘಟಕವು ಉದ್ಯಮವೆನಿಸಿಕೊಳ್ಳಬೇಕಾದರೆ ಅದು ಕೆಲವು ಲಕ್ಷಣಗಳನ್ನು ಹೊಂದಿರಬೇಕು.

೧) ಉದ್ಯಮವು ನವೀನ ಚಟುವಟಿಕೆಗಳನ್ನು ಕೈಗೊಳ್ಳಬೇಕು. ಉದಾಹರಣೆಗೆ ಎರಡು ಹೊಸ ವಸ್ತುಗಳ, ಸಂಯೋಜನೆ, ಹೊಸ ವಸ್ತುವಿನ ಆವಿಷ್ಕಾರ, ಹೊಸ ಉತ್ಪಾದನಾ ವಿಧಾನ, ಹೊಸ ಮಾರುಕಟ್ಟೆಯನ್ನು ಹುಡುಕುವುದು ಅಥವಾ ಮಾರುಕಟ್ಟೆಯನ್ನು ವಿಸ್ತರಿಸುವುದು, ಹೊಸ ಸಂಘಟನಾ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು. ಇವೆಲ್ಲವೂ ಉತ್ಪಾದನಾ ಮತ್ತು ಆದಾಯವನ್ನು ಹೆಚ್ಚಿಸುತ್ತವೆ.

೨) ಇದು ಬದಲಾವಣೆಗೆ ಹೊಂದಿಕೊಳ್ಳುವಂತಿರಬೇಕು. ಅಂದರೆ ಆಯ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗೆ ಸ್ಪಂದಿಸುವಂತಿರಬೇಕು. ತನ್ನ ಉಳಿವಿಗಾಗಿ ಹಾಗೂ ದೇಶದ ಆರ್ಥಿಕ ಬೆಳವಣಿಗೆಗೆ ಹೆಚ್ಚಿನ ಕೊಡುಗೆ ಸಲ್ಲಿಸಲು ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳುತ್ತದೆ.

೩) ಉದ್ಯಮವು ಕಡಿಮೆ ಬಂಡವಾಳವನ್ನು ಹೂಡಿ ಹೆಚ್ಚು ಕಾರ್ಮಿಕರನ್ನು ಕೆಲಸಕ್ಕೆ

ನೇಮಿಸಿಕೊಳ್ಳುತ್ತದೆ. ಹೆಚ್ಚು ಯಾಂತ್ರೀಕರಣವನ್ನು ಅಳವಡಿಸಿಕೊಳ್ಳುವುದಿಲ್ಲ.

೪) ಈ ಉದ್ಯಮಗಳು ಒಂದೇ ಸ್ಥಳದಲ್ಲಿ ಕೇಂದ್ರೀಕೃತವಾಗಿರುವುದಿಲ್ಲ. ನಗರ, ಗ್ರಾಮೀಣ ಹಾಗೂ ದೇಶದ ವಿವಿಧ ಭಾಗಗಳಲ್ಲಿ ಹರಡಿರುತ್ತದೆ.

೫) ದೊಡ್ಡ ಕೈಗಾರಿಕೆಗಳು ಬಹಳ ರೀತಿಯಲ್ಲಿ ಈ ಸಣ್ಣ ಉದ್ಯಮಗಳನ್ನೇ ಅವಲಂಬಿಸಿರುತ್ತವೆ.ಕಚ್ಚಾ ಸಾಮಗ್ರಿಗಳ ಪೂರೈಕೆಗಾಗಿ, ವಸ್ತುವಿನ ಬಿಡಿಭಾಗಗಳಿಗೆ, ಮಾರುಕಟ್ಟೆಗೆ, ಜಾಹೀರಾತಿಗೆ ಹಾಗೂ ಇತರ ವಹಿವಾಟಿಗೆ ಇವೆರಡು ಒಂದನ್ನೊಂದು ಅವಲಂಬಿಸಿರುತ್ತವೆ.

೬) ಸಣ್ಣ ಉದ್ಯಮಗಳು ಸ್ಥಳೀಯ ಸಂಪನ್ಮೂಲ ಮತ್ತು ತಂತ್ರಜ್ಞಾನವನ್ನು ಬಳಸಿಕೊಂಡು ಅಂತಿಮ ಅಥವಾ ಮಧ್ಯಮ ವಸ್ತುಗಳನ್ನು ಉತ್ಪಾದನೆ ಮಾಡುವ ಮೂಲಕ ರಾಷ್ಟ್ರದ ಕ್ಷಿಪ್ರ ಆರ್ಥಿಕ ಬೆಳವಣಿಗೆಗೆ ಕೊಡುಗೆಯನ್ನು ಸಲ್ಲಿಸುತ್ತವೆ.

೭) ಉದ್ಯಮವನ್ನು ಪ್ರಾರಂಭಿಸುವ ವ್ಯಕ್ತಿಗಳು ಉತ್ಪಾದನೆ ಮತ್ತು ಲಾಭ ಗಳಿಸುವ ಉದ್ದೇಶವನ್ನು ಹೊಂದಿರುವುದರ ಜೊತೆಗೆ ಸಾಮಾಜಿಕ ಕಾಳಜಿಯನ್ನು ಹೊಂದಿರಬೇಕು. ಇತರ ಜನರಲ್ಲಿ ಉದ್ಯಮಶೀಲತೆಯನ್ನು ಬೆಳಸಬೇಕು.

ಸ್ವಾತಂತ್ರ್ಯದ ನಂತರ ನಮ್ಮ ದೇಶದ ಕೈಗಾರಿಕೆಗಳ ಬೆಳವಣಿಗೆಗೆ ಹಾಗೂ ಆರ್ಥಿಕ ಅಭಿವೃದ್ಧಿಗೆ ಈ ಸಣ್ಣ ಉದ್ಯಮಗಳು ಮಹತ್ವದ ಕೊಡುಗೆಯನ್ನು ಸಲ್ಲಿಸುತ್ತಿವೆ. ಇವು ಸುಮಾರು ೭೫೦೦ ವಸ್ತುಗಳ ಉತ್ಪಾದನೆಯಲ್ಲಿ ತೊಡಗಿವೆ. ದೇಶದ ಒಟ್ಟು ಉತ್ಪಾದನೆಯಲ್ಲಿ ಶೇ.೪೦ ರಷ್ಟು ವಸ್ತುಗಳನ್ನು ಈ ಉದ್ಯಮಗಳು ಉತ್ಪಾದಿಸುತ್ತವೆ. ನಮ್ಮ ರಾಷ್ಟ್ರದಿಂದ ರಫ್ತಾಗುವ ಒಟ್ಟು ವಸ್ತುಗಳಲ್ಲಿ ಶೇ.೩೫ ರಷ್ಟು ವಸ್ತುಗಳು ಇವುಗಳ ಕೊಡುಗೆಯಾಗಿದೆ. ಸಣ್ಣ ಉದ್ಯಮಗಳು ಭಾರತದಂತಹ ದೇಶಗಳಿಗೆ ಹೆಚ್ಚು ಸೂಕ್ತವಾಗಿವೆ. ವಿಪುಲ ಕಾರ್ಮಿಕರ ಪೂರೈಕೆ, ದೇಶೀಯ ಕಚ್ಚಾ ಸಾಮಗ್ರಿ, ಕಡಿಮೆ ಕೌಶಲ್ಯ, ಕಡಿಮೆ ಬಂಡವಾಳ, ಕಡಿಮೆ ತಂತ್ರಜ್ಞಾನ ಹೊಂದಿರುವ ನಮ್ಮ ದೇಶದಲ್ಲಿ ಸ್ಥಳೀಯ ಜನರ ಬೇಡಿಕೆಗಳನ್ನು ಅವಶ್ಯಕತೆಗಳನ್ನು ಪೂರೈಸಲು ಸಣ್ಣ ಉದ್ಯಮವು ಹೆಚ್ಚು ಉಪಯುಕ್ತವಾಗಿದೆ.

೩.೩ ಉದ್ಯಮಶೀಲತೆ ಮತ್ತು ಗ್ರಾಮೀಣಾಭಿವೃದ್ಧಿ

ಉದ್ಯಮಶೀಲತೆ ಮತ್ತು ಗ್ರಾಮೀಣಾಭಿವೃದ್ಧಿ ಒಂದಕ್ಕೊಂದು ಪೂರಕವಾಗಿದೆ. ಆರ್ಥಿಕ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವ ದೃಷ್ಟಿಯಿಂದ ಲಭ್ಯವಿರುವ ದುಡಿಯುವ ವರ್ಗವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವ ಅವಶ್ಯಕತೆ ಇದೆ.

ಮಾನವ ಸಂಪನ್ಮೂಲದ ಪೂರ್ಣ ಪ್ರಮಾಣದ ಬಳಕೆಯು ಇಂದಿನ ಅಭಿವೃದ್ಧಿಗೆ ಅವಶ್ಯಕವಾಗಿದ್ದು

ಉದ್ಯಮಶೀಲತೆಯು ಇದಕ್ಕೆ ನೆರವಾಗುತ್ತದೆ.

ಉದ್ಯಮಶೀಲತೆಯು ಹಳ್ಳಿಗಳಲ್ಲಿ ಸಣ್ಣ ಕೈಗಾರಿಕೆಗಳ ರೂಪದಲ್ಲಿ ಸಣ್ಣ ಪ್ರಮಾಣದಲ್ಲಿ ಸಂಘಟಿಸಲ್ಪಟ್ಟಿರುತ್ತವೆ. ಇದರಿಂದ ಸ್ಥಳೀಯ ಸಂಪನ್ಮೂಲಗಳ ಬಳಕೆ ಸಾಧ್ಯವಾಗುತ್ತದೆ. ಸ್ಥಳೀಯವಾಗಿ ಲಭ್ಯವಿರುವ ಕಚ್ಚಾ ವಸ್ತುಗಳು, ಶ್ರಮ ಬಲ, ಹಾಗೂ ಇತರೆ ಸಂಪನ್ಮೂಲಗಳನ್ನು ಬಳಸಿಕೊಳ್ಳಬಹುದು. ಬಡತನ ಮತ್ತು ನಿರುದ್ಯೋಗ, ಬಂಡವಾಳದ ಕೊರತೆ ಮುಂತಾದ ಸಂಸ್ಯೆಗಳು ಹಳ್ಳಿಗಳಲ್ಲಿ ತೀವ್ರ ಪ್ರಮಾಣದಲ್ಲಿ ಕಂಡು ಬರುವುದರಿಂದ ಉದ್ಯೋಗ ಸೃಷ್ಟಿಗೆ ಹೆಚ್ಚು ಒತ್ತನ್ನು ನೀಡಬೇಕಾಗಿರುವ ಪರಿಸ್ಥಿತಿಯಲ್ಲಿ ಜನರು ಉದ್ಯಮದಂತಹ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಬೇಕಾದ ಅನಿವಾರ್ಯತೆ ಇದೆ.

ಹಳ್ಳಿಗಳಲ್ಲಿರುವ ಮಾನವ ಸಂಪನ್ಮೂಲವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡಲ್ಲಿ ಉದ್ಯಮದ ಅಭಿವೃದ್ಧಿಯೊಂದಿಗೆ ಕುಟುಂಬದ ಆದಾಯ ಹೆಚ್ಚುವುದಲ್ಲದೆ ಸಾಮಾಜಿಕ ಅಭಿವೃದ್ಧಿಯು ಸಾಧ್ಯವಾಗುತ್ತದೆ. ಉದ್ಯಮಶೀಲತೆಯು ಜನರನ್ನು ಸ್ವಾವಲಂಬಿಗಳಾಗಲು ಪ್ರೇರೇಪಿಸುತ್ತದೆ. ಹೀಗೆ ಅಹಿವೃದ್ಧಿಯ ಪರಿಣಾಮಕಾರಿ ಸಾಧನವೆಂದೇ ಪರಿಗನಿಸಲ್ಪಟ್ಟಿರುವ ಉದ್ಯಮಶೀಲತೆಯು ಗ್ರಾಮೀಣಾಭಿವೃದ್ಧಿ ಹಿರಿದಾದ ಪಾತ್ರವನ್ನು ವಹಿಸುತ್ತದೆ.

೩.೪ ಮಹಿಳೆ, ಉದ್ಯಮಶೀಲತೆ ಮತ್ತು ಗ್ರಾಮಾಭಿವೃದ್ಧಿ

ಲಿಂಗ ಸಮಾನತೆಯನ್ನು ತರುವ ಹಲವಾರು ವಿಚಾರಗಳಲ್ಲಿ ಮಹಿಳೆಯರು ಉದ್ಯಮಶೀಲತೆಯನ್ನು ಅಭಿವೃದ್ಧಿ ಪಡಿಸುವುದೂ ಒಂದು. ಉದ್ದಿಮೆಗಳು ಮಹಿಳಾ ಸಬಲೀಕರಣದಲ್ಲಿ ಹೆಚ್ಚು ಪ್ರಸ್ತುತತೆಯನ್ನು ಹೊಂದಿದೆ. ಮಹಿಳೆಯರ ಆರ್ಥಿಕ ಸ್ಥಾನಮಾನವನ್ನು ಉತ್ತಮಪಡಿಸದ ಹೊರತು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು ಫಲ ನೀಡಲು ಸಾಧ್ಯವಿಲ್ಲ. ಆದರೆ ಉದ್ಯಮಶೀಲತೆಯು ವಿಷಯಕ್ಕೆ ಬಂದಾಗ ಮಹಿಳೆಯರು ಇನ್ನೂ ಅಲ್ಪಸಂಖ್ಯಾತರು.

ಮಹಿಳಾ ಉದ್ಯಮಸಾಹಸಿಗಳು, ಆರ್ಥಿಕ ವ್ಯವಸ್ಥೆಯಲ್ಲಿ ವಿಶಿಷ್ಟವಾದ ಸ್ಥಾನ ಹೊಂದಿದ್ದಾರೆ. ಅವರು ಆರ್ಥಿಕಾಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮಹತ್ವದ ಪ್ರತಿನಿಧಿಗಳೆಂಬ ಮನ್ನಣೆಗೆ ಪಾತ್ರರಾಗಿದ್ದಾರೆ.

ಇಂದು ಮಹಿಳೆಯರು ವ್ಯವಹಾರ ಮತ್ತು ಕೈಗಾರಿಕಾ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ತಯಾರಾಗಿದ್ದಾರೆ. ಸ್ವ ಉದ್ಯೋಗಿಗಳಾಗಿ, ಉದ್ಯಮಗಳನ್ನು ನಡೆಸುವವರಿಗಾಗಿ ಮಹಿಳೆಯರು ಆರ್ಥಿಕ ಚಟುವಟಿಕೆಗಳಲ್ಲಿ ಪ್ರಮುಖ ಪಾಲುದಾರರಾಗಿರುವುದರಿಂದ ಉದ್ಯಮಿಗಳಾಗಿ ಮಹಿಳೆಯರನ್ನು ವಿಶೇಷವಾಗಿ ಅಧ್ಯಯನ ಮಾಡುವುದು ಅವಶ್ಯಕ. ಅಲ್ಲದೆ ಪುರುಷಾಧಿಪತ್ಯ ಎನಿಸಿಕೊಂಡಿರುವ ಉದ್ಯಮ ಲೋಕದಲ್ಲಿ ಮಹಿಳಾ ಉದ್ಯಮಿಗಳ ಪ್ರಮಾಣ ಎಷ್ಟು, ಅವರು ಯಾವ ಯಾವ ಉದ್ದಿಮೆಗಳನ್ನು ನಡೆಸುತ್ತಿದ್ದಾರೆ,

ಅವರಿಗಿರುವ ಅಡ್ಡಿ, ಅಂತಕಗಳೇನು, ಸಮಸ್ಯೆಗಳೇನು, ಪ್ರೇರಕ ಅಂಶಗಳು ಯಾವುವು? ಎಂಬುದನ್ನು ತಿಳಿಯುವುದಕ್ಕೂ ನಾವು ಮಹಿಳಾ ಉದ್ಯಮಿಗಳ ಕುರಿತು ವಿಶೇಷವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಬಹು ಹಿಂದಿನಿಂದಲೂ ಮಹಿಳೆಯರು ಗೃಹ ಕೃತ್ಯಗಳನ್ನು ಮಾಡುತ್ತಾ ಬಂದಿರುವುದನ್ನು ಕಾಣುತ್ತೇವೆ. ಅವರು ಕೇವಲ ಗೃಹಿಣಿಯರಷ್ಟೇ ಅಲ್ಲ, ಮನೆಯ ನಿರ್ವಾಹಕರೂ ಆಗಿದ್ದಾರೆ. ಸ್ತ್ರೀ ವಾದಿಗಳು ಮಹಿಳೆಯರನ್ನು ಹೋಮ್ ಮೇಕರ್ಸ್ ಅಥವಾ ಹೌಸ್ ಮ್ಯಾನೇಜರ್ಸ್ ಎಂದು ಕರೆಯಬೇಕೆಂದು ಪ್ರತಿಪಾದಿಸುತ್ತಾರೆ ಮನೆಯನ್ನು ಒಂದು ಉತ್ಪಾದನಾ ಘಟಕ ಅಥವಾ ಉದ್ಯಮವೆಂದು ಪರಿಗಣಿಸಿದರೆ ಮಹಿಳೆಯರು ನಿರ್ವಾಹಕರೆನಿಸಿಕೊಳ್ಳುತ್ತಾರೆ. ಗ್ಯಾರಿ ಬೇಕರ್ ಅವರ "ಗೃಹ ಅರ್ಥಶಾಸ್ತ್ರ" ಈ ದಿಕ್ಕಿನಲ್ಲಿ ಒಂದು ವಿನೂತನ ಹೆಜ್ಜೆ. ಇಲ್ಲಿ ಸ್ತ್ರೀಯರು ಮನೆಯ ಸದಸ್ಯರಿಗೆ ಬೇಕಾಗುವ ವಸ್ತುಗಳನ್ನು ತಯಾರಿಸುತ್ತಾರೆ ಕೆಲವೊಮ್ಮೆ ಮಾರುಕಟ್ಟೆಗೂ ಉತ್ಪಾದಿಸುತ್ತಾರೆ. ವಸ್ತುಗಳ ತಯಾರಿಕೆಗೆ ಬೇಕಾದ ಮೂಲ ಸಾಮಗ್ರಿಗಳನ್ನು ಹೊಂದಿಸಿಕೊಂಡು ಸದಸ್ಯರ ಬೇಡಿಕೆ ಅವಶ್ಯಕತೆಗೆ ತಕ್ಕಂತೆ ವಸ್ತುಗಳನ್ನು ತಯಾರಿಸುತ್ತಾರೆ. ಅವುಗಳನ್ನು ಸರಿಯಾದ ಸಮಯಕ್ಕೆ ಸರಬರಾಜು ಮಾಡಿ ಅನುಭೋಗಕ್ಕೆ ಲಭ್ಯವಾಗುವಂತೆ ಮಾಡುತ್ತಾರೆ. ಒಬ್ಬ ಸ್ತ್ರೀ ಮೂಲ ಸಾಮಾಗ್ರಿಗಳನ್ನು ಖರೀದಿಸುವವಳಾಗಿ ಹಣಕಾಸುಗಾರಳಾಗಿ ನಿರ್ವಾಹಕಳಾಗಿ ಸಂಘಟನಾಗಾರಳಾಗಿ ಮಾರಾಟಗಾರಳಾಗಿ ಕಾರ್ಯ ನಿರ್ವಹಿಸುತ್ತಾಳೆ. ಒಟ್ಟಿನಲ್ಲಿ ಒಂದು ಕಚೇರಿಯಲ್ಲಿ ನಿರ್ವಾಹಕ ಮಾಡುವ ಕೆಲಸಗಳನ್ನು ಅಥವಾ ಉದ್ಯಮಿಯು ಉದ್ಯಮ ವಲಯದಲ್ಲಿ ಮಾಡುವ ಕೆಲಸಗಳನ್ನು ಒಬ್ಬ ಮಹಿಳೆ ಕುಟುಂಬದೊಳಗೆ ಮಾಡುವುದನ್ನು ಕಾಣುತ್ತೇವೆ. ಆದುದರಿಂದ ಸ್ತ್ರೀಗೆ ಉದ್ಯಮಶೀಲತೆ ಹೊಸದೇನಲ್ಲ. ಅವಳಲ್ಲಿ ಈಗಾಗಲೇ ಇದೇ ಅದನ್ನು ಗುರುತಿಸಿ ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕಷ್ಟೇ. ಮನೆಯ ಮೂಲ ಕೆಲಸಗಳಾದ ಅಡುಗೆ ಮಾಡುವುದು, ಮನೆ ಸ್ವಚ್ಛ ಮಾಡುವುದು ಪಾತ್ರೆ ತೊಳೆಯುವುದು,ಬಟ್ಟೆ ಒಗೆಯುವುದರ ಜೊತೆಗೆ ಮಿತವಾದ ಆದಾಯದಲ್ಲಿ ಮನೆ ಖರ್ಚನ್ನು ನಿರ್ವಹಿಸುವುದು ಅತಿಥಿಗಳನ್ನು ನೋಡಿಕೊಳ್ಳುವುದು. ಮನೆಗೆ ಬೇಕಾದ ಸಾಮಾನುಗಳನ್ನು ಖರೀದಿಸುವುದನ್ನು ಮಾಡುತ್ತಾರೆ. ಇಷ್ಟಲ್ಲದೆ ಹಪ್ಪಳ, ಉಪ್ಪಿನಕಾಯಿ, ಸಾಂಬಾರ್ ಪುಡಿ ತಯಾರಿಸುವುದು, ಬಟ್ಟೆ ಹೊಲಿಯುವುದು, ಕಸೂತಿ ಹಾಕುವುದು, ಮಕ್ಕಳಿಗೆ ಪಾಠ ಹೇಳಿ ಕೊಡುವುದು, ಚಾಪೆ ಬುಟ್ಟಿ ಹೆಣೆದು ಮಾರಾಟ ಮಾಡಿ ಆದಾಯಗಳಿಸುತ್ತಾರೆ ಮಹಿಳೆಯರಲ್ಲಿರುವ ಈ ಎಲ್ಲಾ ಸಾಮರ್ಥ್ಯಗಳನ್ನು ಕಂಡೆ ಸರಕಾರವು ಅವರನ್ನು ಉದ್ಯಮಶೀಲರಾಗಿ ಬೆಳೆಯಲು ಪ್ರೋತ್ಸಾಹ ನೀಡುತ್ತಿದೆ. ಸ್ತ್ರೀಯರಲ್ಲಿ ಹುದುಗಿದ್ದ ಉದ್ಯಮಶೀಲತೆಯು ಇತ್ತೀಚಿನ ದಿನಗಳಲ್ಲಿ ಬೆಳಕಿಗೆ ಬರುತ್ತಿದೆ.

ಸ್ವಾತಂತ್ರ್ಯಕ್ಕೆ ಮೊದಲು ಭಾರತೀಯ ಮಹಿಳೆಯರನ್ನು ಉದ್ಯಮಶೀಲತಾ ಜಗತ್ತಿಗೆ ಪ್ರವೇಶವನ್ನು ಪ್ರೋತ್ಸಾಹಿಸುತ್ತಿರಲಿಲ್ಲ. ಆದರೆ ಸ್ವಾತಂತ್ರ್ಯ ನಂತರ ಇಡೀ ಪರಿಸ್ಥಿತಿಯೇ ಬದಲಾಗಿದೆ. ೫೦ ರ ದಶಕದಲ್ಲಿ

ಕುಟುಂಬದ ಪುರುಷರು ದುಡಿಯದಿದ್ದಾಗ, ೬೦ರ ದಶಕದಲ್ಲಿ ಶಾಲಾ ಕಾಲೇಜು ಕಲಿತ ಮಹಿಳೆಯರು ಮನೆಯಲ್ಲಿ ಮತ್ತು ಮನೆಯಲ್ಲೇ ಇದ್ದು ಮಾಡುವ ಉದ್ಯಮ ಪ್ರಾರಂಭಿಸಿದರು. ೭೦ ರ ದಶಕದಲ್ಲಿ ಶಿಕ್ಷಣವನ್ನು ಪೂರ್ಣಗೊಳಿಸಿದ ಮಹಿಳೆಯರು ವೃತ್ತಿಯನ್ನು ಪ್ರಾರಂಭಿಸಿ ದುಡಿಯುವ ವರ್ಗ ಎನಿಸಿಕೊಂಡರು. ೮೦ರ ದಶಕದಿಂದೀಚೆಗೆ ಸ್ವಂತ ಆಸಕ್ತಿಯಿಂದ ಉದ್ಯಮವನ್ನು ವೃತ್ತಿಯಾಗಿ ಸ್ವೀಕರಿಸಿದರು.

ಮಹಿಳಾ ಉದ್ಯಮಿಗಳ ಗುಣಲಕ್ಷಣಗಳು:- ಉತ್ಪಾದನಾ ಘಟಕವನ್ನು ನಡೆಸುವ, ವ್ಯಾಪಾರ ವಹಿವಾಟನ್ನು ಹೊಂದಿರುವ, ಸಣ್ಣ ಅಥವಾ ದೊಡ್ಡ ಉದ್ಯಮವನ್ನು ನಡೆಸುವ ಮಹಿಳೆಯು ಮಹಿಳಾ ಉದ್ಯಮಿ ಎನಿಸಿಕೊಳ್ಳುತ್ತಾಳೆ. ಮೊದಲೇ ಹೆಸರಿಸಿದ ಸಾಮಾನ್ಯ ಉದ್ಯಮಿಯು ಹೊಂದಿರಬೇಕಾದ ಎಲ್ಲಾ ಗುಣ ಲಕ್ಷಣಗಳನ್ನು ಮಹಿಳೆಯರು ಅವಶ್ಯವಾಗಿಹೊಂದಿರಬೇಕು. ಜೊತೆಗೆ ಮಹಿಳೆ ಅನ್ನುವ ಕಾರಣಕ್ಕಾಗಿ ಮತ್ತು ಸಮಾಜದಲ್ಲಿರುವ ಲಿಂಗ ವ್ಯವಸ್ಥೆ ಸಂಬಂಧಗಳಿಂದ ಅವರು ವಿಶಿಷ್ಟ ಪರಿಸ್ಥಿತಿ ಹಾಗೂ ಸಮಸ್ಯೆಗಳನ್ನು ಎದುರಿಸಬೇಕಾಗುವುದರಿಂದ ಇನ್ನು ಹೆಚ್ಚುವರಿ ಗುಣಗಳನ್ನು ಬೆಳೆಸಿಕೊಳ್ಳಬೇಕಾಗುತ್ತದೆ.

ಪುರುಷಾಧಿಪತ್ಯ ಮತ್ತು ತೀವ್ರ ಸ್ಪರ್ಧೆಯಿಂದ ಕೂಡಿರುವ ಉದ್ಯಮ ಜಗತ್ತನ್ನು ಮಹಿಳೆಯರು ಪ್ರವೇಶಿಸುವುದೆ ದೊಡ್ಡ ಸಾಹಸ. ಹೀಗಿರುವಾಗ ಮಹಿಳೆಯರು ಪೂರ್ವ ಯೋಜನೆ, ಸಿದ್ಧತೆ ಮಾಡಿಕೊಂಡು ದೂರಾಲೋಚನೆ ಮಾಡುವ ಪ್ರವೃತ್ತಿಯುಳ್ಳವರಾಗಿರಬೇಕು. ಪುರುಷರಿಗಿಂತ ಹೆಚ್ಚಿನ ಆತ್ಮ ವಿಶ್ವಾಸ ಹಾಗೂ ಮಾನಸಿಕ ಸದೃಢತೆಯಿಂದ ಮುನ್ನುಗ್ಗುವ ಗುಣವಿರಬೇಕು. ಅವರಿಗಿಂತ ಹೆಚ್ಚು ಕಷ್ಟಪಟ್ಟು ಕೆಲಸ ಮಾಡುವ ಮನಸ್ಸಿರಬೇಕು.

ಪುರುಷರಿಗಲ್ಲದಿರುವ ತ್ರಿಗುಣ ಹೊರೆ ಸ್ತ್ರೀಯರ ಮೇಲಿರುವುದರಿಂದ ಸಂತಾನೋತ್ಪತ್ತಿ, ಉತ್ಪಾದನಾ ಕೆಲಸ ಮತ್ತು ಮನೆ ಕೆಲಸ ಅವುಗಳನ್ನು ಸರಿದೂಗಿಸಿಕೊಂಡು ಉದ್ಯಮವನ್ನು ನಡೆಸುವುದು ದೊಡ್ಡ ಸವಾಲೆ. ಅದನ್ನು ನಿರ್ವಹಿಸುವ ಸಾಮರ್ಥ್ಯವಿರಬೇಕು.

ಪುರುಷ ಪ್ರಧಾನ ಮೌಲ್ಯ ಆಚರಣೆಗಳು ಎಲ್ಲಾ ಕಡೆ ಬೇರೂರಿರುತ್ತದೆ. ವ್ಯಾಪಕವಾಗಿ ಹರಡಿಕೊಂಡಿರುತ್ತವೆ. ಮಹಿಳೆಯು ಉದ್ಯಮಿಯಗಿ ಕಾರ್ಯ ನಿರ್ವಹಿಸುವಾಗ ವಿಶಿಷ್ಟ ಪರಿಸ್ಥಿತಿ ಸಮಸ್ಯೆಗಳು ಎದುರಾಗುತ್ತವೆ. ಚಲನೆಯ ಮೇಲಿರುವ ನಿರ್ಬಂಧ, ಸಮಾಜದ ದೃಷ್ಟಿಕೋನ ಮತ್ತು ನಿರೀಕ್ಷೆಗಳು ಅನೇಕ ರೀತಿಯ ಅಡ್ಡಿಗಳನ್ನು ಉಂಟುಮಾಡುತ್ತವೆ. ಪುರುಷ ಸಹೋದ್ಯೋಗಿಗಳೊಂದಿಗೆ, ಇತರ ಸ್ತ್ರೀಯರೊಂದಿಗೆ ವಿವಿಧ ಜಾತಿ ವರ್ಗದ ಜನರೊಂದಿಗೆ ಕೆಲಸ ಮಾಡಬೇಕಾಗುತ್ತದೆ. ಕೆಲವೊಮ್ಮೆ ಪುರುಷರು ಮಹಿಳಾ ಬಾಸ್ ಅಧೀನದಲ್ಲಿ ಕೆಲಸ ಮಾಡಲು ಇಷ್ಟಪಡುವುದಿಲ್ಲ ಅನಿವಾರ್ಯವಾಗಿ ಮಾಡುತ್ತಿರಬಹುದು. ಅಂತಹ ಸಮಯದಲ್ಲಿ ಅತ್ಯಂತ ಸಂಯಮ ಜಾಣ್ಮೆ ಹಾಗೂ ವ್ಯೂಹಾತ್ಮಕವಾಗಿ

ಆಗಿ ಕಾರ್ಯನಿರ್ವಹಿಸುವ ಗುಣವಿರಬೇಕು.

ಸರ್ಕಾರಿ ವಲಯದಲ್ಲಿ ಹಣಕಾಸಿನ ಸಂಸ್ಥೆಗಳೊಂದಿಗೆ ವ್ಯವಹಾರ ಮಾಡುವಾಗ, ಮಾರುಕಟ್ಟೆ ಕ್ಷೇತ್ರದಲ್ಲಿ ಸ್ತ್ರೀಯರೆಂಬ ಕಾರಣದಿಂದ ತಾರತಮ್ಯ, ನಿರ್ಲಕ್ಷ್ಯ ಅತಿಯಾದ ಔದಾರ್ಯ ಮತ್ತು ಲಿಂಗ ಆಧಾರಿತ ಆರೋಪ ನಿಷೇಧಗಳನ್ನು ಎದುರಿಸಬೇಕಾಗಬಹುದು. ಅವುಗಳನ್ನು ನಿಭಾಯಿಸಿಕೊಂಡು ಯಶಸ್ವಿ ಉದ್ಯಮಿಯಾಗುವ ಛಲ ಹೊತ್ತು ಮುನ್ನಡೆಯಬೇಕು.

ನವೀನ ವಿಚಾರ ಹೊಸ ತಂತ್ರಜ್ಞಾನ ಮಾಹಿತಿಯೊಂದಿಗೆ ಯಾವಾಗಲೂ ಸನ್ನದ್ಧರಾಗಿದ್ದುಕೊಂಡು ಸ್ಪರ್ಧಾಲೋಕದಲ್ಲಿ ಅವಕಾಶಗಳ ಸದುಪಯೋಗ ಮಾಡಿಕೊಳ್ಳುವ ಚತುರತೆಯಿರಬೇಕು.

ಮಹಿಳೆಯರು ಸ್ವ ಉದ್ಯೋಗದಲ್ಲಿ ಹೆಚ್ಚು ತೊಡಗಿರುವುದರಿಂದ ಅವರನ್ನು ಉದ್ಯಮಿಗಳೆಂದು ಗುರುತಿಸುವುದು ಅಪರೂಪ. ಅಧಿಕ ಬಂಡವಾಳ ಹೂಡಿ ಆಧುನಿಕ ತಂತ್ರಜ್ಞಾನ ಬಳಸಿ ದೊಡ್ಡ ಉತ್ಪಾದನಾ ಘಟಕವನ್ನು ನಡೆಸುವ ಅಪಾರ ಹಣದ ವಹಿವಾಟಿರುವ ರಫ್ತು ವಸ್ತುಗಳನ್ನು ಉತ್ಪಾದಿಸುವವರನ್ನೇ ಉದ್ಯಮಿಗಳೆಂದು ಗುರುತಿಸುವುದು ಕಂಡುಬರುತ್ತದೆ. ಕಡಿಮೆ ಬಂಡವಾಳ ದೇಶೀಯ ತಂತ್ರಜ್ಞಾನ ಮತ್ತು ಸ್ಥಳೀಯ ಬೇಡಿಕೆಗೆ ತಕ್ಕಂತೆ ಕಡಿಮೆ ಉತ್ಪಾದನಾ ಕಾರ್ಯಗಳಲ್ಲಿ ಕೈಗೊಳ್ಳುವವರನ್ನು ಸ್ವ ಉದ್ಯೋಗಿಗಳೆಂದು ಕರೆಯಲಾಗುತ್ತದೆ. ಇಲ್ಲಿ ವ್ಯಕ್ತಿಯು ಪ್ರಧಾನ ದುಡಿಮೆಗಾರಳಾಗಿದ್ದು ಇತರರನ್ನು ನೇಮಿಸಿಕೊಳ್ಳಬಹುದು ಅಥವಾ ನೇಮಿಸಿಕೊಳ್ಳದಿರಬಹುದು. ಸ್ವ ಉದ್ಯೋಗವು ಜೀವನದ ಉಳಿವಿಗಾಗಿ ಅಥವಾ ಜೀವನ ಮಟ್ಟವನ್ನು ಉತ್ತಮಪಡಿಸಿಕೊಳ್ಳುವ ಸಾಧನವಾಗಿದ್ದರೆ ಉದ್ಯಮವು ವ್ಯಕ್ತಿಯ ನವೀನತೆ, ಕಲ್ಪನಾ ಶಕ್ತಿ, ಪ್ರತಿಭೆಯನ್ನು ಬಳಸಿಕೊಳ್ಳುವ, ಹೊಸದನ್ನೇನಾದರು ಸಾಧನೆ ಮಾಡುವ, ಹೊಸ ವಸ್ತುಗಳನ್ನು ಪರಿಚಯಿಸುವ ಲಾಭಗಳಿಸುವ ಸಾಧನವಾಗಿದೆ. ಆದರೂ ಸ್ವ ಉದ್ಯೋಗವು ವಿಶಾಲಾರ್ಥದಲ್ಲಿ ಉದ್ಯಮವೆನಿಸಿಕೊಳ್ಳುತ್ತವೆ.

ಮಹಿಳಾ ಉದ್ಯಮಿಗಳು ವಿವಿಧ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿದ್ದರೂ ಸಾಂಪ್ರದಾಯಿಕ ಚಟುವಟಿಕೆಗಳಲ್ಲಿ ಹೆಚ್ಚು ನಿರತರಾಗಿರುವುದು ಕಂಡು ಬರುತ್ತದೆ. ಸಿದ್ಧ ಉಡುಪು ಕಾರ್ಖಾನೆ, ಪ್ಲಾಸ್ಟಿಕ್ ವಸ್ತುಗಳ ತಯಾರಿಕೆ, ದೇಶೀಯ ಕರಕುಶಲ ವಸ್ತುಗಳ ತಯಾರಿಕೆ ಹಾಗು ರಫ್ತು, ಸಣ್ಣ ವ್ಯಾಪಾರ ಆಹಾರ ಸಂಸ್ಕರಣೆ ಆಹಾರ ಪದಾರ್ಥಗಳ ತಯಾರಿಕೆ, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರೋನಿಕ್ಸ್ ವಸ್ತುಗಳ ತಯಾರಿಕೆ ಮುಂತಾದುವುಗಳಲ್ಲಿ ತೊಡಗಿದ್ದಾರೆ. ಇವುಗಳಲ್ಲದೆ ಇತ್ತೀಚೆಗೆ ಮಹಿಳೆಯರು ವಿವಿಧ ವಿಷಯಗಳಲ್ಲಿ ಸಲಹೆಗಾರರಾಗಿ, ಪ್ರಕಾಶಕರಾಗಿ, ಯಂತ್ರ ಬಿಡಿಭಾಗಗಳ ರಫ್ತುದಾರರಾಗಿ, ವಿನ್ಯಾಸಗಾರರಾಗಿ, ವಾಸ್ತುಶಿಲ್ಪಿಗಳಾಗಿ, ಹೋಟೆಲ್ ಉದ್ಯಮವನ್ನು ನಡೆಸುವವರಾಗಿ ಹೊರಹೊಮ್ಮುತ್ತಿದ್ದಾರೆ.

ಭಾರತದಲ್ಲಿ ಶೇಕಡಾ ೭೦ ರಷ್ಟು ಮಹಿಳಾ ಉದ್ಯಮಿಗಳು ಉಡುಪು, ಆಹಾರ ಸಾಮಗ್ರಿ ತಯಾರಿಕೆ, ವಸ್ತ್ರ ವಿನ್ಯಾಸ ಒಳಾಂಗಣ ಅಲಂಕಾರ, ಕರಕುಶಲ ವಸ್ತುಗಳ ಉತ್ಪಾದನೆ, ವಾಸ್ತು ಶಿಲ್ಪ ಚರ್ಮೋದ್ಯಮ, ಸೌಂದರ್ಯ ವರ್ಧನೆ, ಸೊಗಸುಗಾರಿಕೆ, ವಿನೂತನ ವಿನ್ಯಾಸಗಳ ಆಭರಣ ತಯಾರಿಕೆ, ಫ್ಯಾಷನ್ ಇತ್ಯಾದಿ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿದ್ದಾರೆ. ಸಾಂಪ್ರದಾಯಿಕ ಉತ್ಪಾದನಾ ಕ್ಷೇತ್ರಗಳಾದಂತಹ ಉಪ್ಪಿನಕಾಯಿ, ಹಪ್ಪಳ ಮತ್ತು ಮೆಣಸು ಮಸಾಲೆ ಪುಡಿ ತಯಾರಿಕೆಯಲ್ಲಿ ನಿರತರಾಗಿರುವುದರ ಜೊತೆಗೆ ಇಂಧನ ಶಕ್ತಿ, ವಿದ್ಯುತ್ ಮತ್ತು ವಿದ್ಯುನ್ಮಾನದಂತಹ ಹೊಸ ಕ್ಷೇತ್ರಗಳಲ್ಲಿಯೂ ಸಹ ಪ್ರವೇಶ ಪಡೆದಿದ್ದಾರೆ.

ಕೌಶಲ್ಯ ಜ್ಞಾನವನ್ನು ಪಡೆದುಕೊಂಡು ಪ್ರತಿಭೆಯನ್ನು ಮೈಗೂಡಿಸಿಕೊಂಡು, ವ್ಯಾಪಾರದಲ್ಲೂ ಅರ್ಹತೆಯನ್ನು ಬೆಳೆಸಿಕೊಂಡು, ಜೀವನದಲ್ಲಿ ಏನನ್ನಾದರೂ ಹೊಸದನ್ನು ವಿಶೇಷವಾದುದನ್ನು ಸಾಧಿಸಬೇಕೆಂಬ ಒತ್ತಾಸೆಯಿಂದ ಉದ್ಯಮಿಗಳಾಗಿ ಹೊರಬರುತ್ತಿದ್ದಾರೆ. ಮಹಿಳೆಯರಲ್ಲಿರುವ ಸುಪ್ತ ಪ್ರತಿಭೆಯನ್ನು ಕಂಡು ಅಮೇರಿಕಾದ ಮಾಜಿ ಅಧ್ಯಕ್ಷ ರೊನಾಲ್ಡ್ ರೇಗನ್‌ರ ಪತ್ನಿ ನ್ಯಾನ್ಸಿ ರೇಗನ್ ಅವರು ಈ ರೀತಿ ಹೇಳುತ್ತಾರೆ : "ಒಬ್ಬ ಸ್ತ್ರೀಯು ಟೀಬ್ಯಾಗ್ ಇದ್ದಂತೆ. ಅವಳನ್ನು ಬಿಸಿನೀರಿನೊಳಗೆ ಹಾಕುವ ತನಕ ಅವಳು ಎಷ್ಟು ಬಲಾಢ್ಯಳು ಎಂದು ಹೇಳಲಾಗುವುದಿಲ್ಲ." ಅದೇ ರೀತಿ ಉದ್ಯಮ ಲೋಕದಲ್ಲಿ ಸ್ತ್ರೀಯರನ್ನು ಉದ್ಯಮಿಗಳನ್ನಾಗಿ ಮಾಡದ ಹೊರತು ಅವರ ಅರ್ಹತೆ ಮತ್ತು ಶಕ್ತಿಯನ್ನು ಗುರುತಿಸಲು ಸಾಧ್ಯವಿಲ್ಲ.

ಮಹಿಳಾ ಸಶಕ್ತೀಕರಣ ಪ್ರಕ್ರಿಯೆಯಲ್ಲಿ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವುದು ಒಂದು ಪರಿಕ್ರಮವಾಗಿದೆ. ಆರ್ಥಿಕ ಸಶಕ್ತೀಕರಣಕ್ಕೆ ಅವರನ್ನು ಸ್ವ-ಉದ್ಯೋಗದಲ್ಲಿ ತೊಡಗಿಸುವುದು ಅಥವಾ ಉದ್ಯಮಿಗಳಾಗಿ ಬೆಳೆಯಲು ಪ್ರೋತ್ಸಾಹ ನೀಡುವುದು ಪ್ರಮುಖ ವಿಧಾನವಾಗಿದೆ. ಮಹಿಳೆಯರಲ್ಲಿ ಉದ್ಯಮಶೀಲತೆಯು ಮೂರು ಪ್ರಕಾರಗಳಲ್ಲಿ ಬೆಳೆದು ಬರಬಹುದು:

೧. ಅನುವಂಶಿಕವಾಗಿ ತಂದೆ ತಾಯಿಯಿಂದ ಬರಬಹುದು

೨. ಸ್ವ ಪ್ರತಿಭೆ ಸಾಮರ್ಥ್ಯದಿಂದ ಜೀವನದ ಉಳಿವಿಗಾಗಿ ಆಧಾರಕ್ಕಾಗಿ ಉದ್ಯಮ ಶೀಲತೆಯನ್ನು ವೃತ್ತಿಯನ್ನಾಗಿ ಬೆಳೆಸಿಕೊಳ್ಳಬಹುದು.

೩. ಮಹಿಳೆಯರನ್ನು ಆರ್ಥಿಕವಾಗಿ ಸಶಕ್ತಗೊಳಿಸುವ ನಿಟ್ಟಿನಲ್ಲಿ ಹೊರಗಿನ ಪ್ರಯತ್ನಗಳಿಂದ ತರಬೇತಿಯ ಮೂಲಕ ಅವರಲ್ಲಿ ಉದ್ಯಮಶೀಲತೆಯನ್ನು ಬೆಳೆಸಬಹುದು. ಒಟ್ಟಿನಲ್ಲಿ ಮಹಿಳೆಯರು ಉದ್ಯಮಿಗಳಾಗಲು ಎರಡು ಪ್ರಕಾರದ ಪ್ರೋತ್ಸಾಹದಾಯಕ ಅಂಶಗಳು ಅವಶ್ಯಕ.

೧. ಆಂತರಿಕ ಪ್ರೋತ್ಸಾಹದಾಯಕ ಅಂಶಗಳು

೨. ಬಾಹ್ಯ ಪ್ರೋತ್ಸಾಹದಾಯಕ ಅಂಶಗಳು

೧. **ಆಂತರಿಕ ಪ್ರೋತ್ಸಾಹದಾಯಕ ಅಂಶಗಳು** : ಮಹಿಳೆಯರಲ್ಲೆ ಉದ್ಭವವಾಗುವಂತದ್ದು. ನಮ್ಮಲ್ಲಿರುವ ಪ್ರತಿಭೆ, ಸಾಮರ್ಥ್ಯ ಹಾಗು ಕೌಶಲ್ಯವನ್ನು ಗುರುತಿಸಿಕೊಂಡು ಅವುಗಳನ್ನು ಗರಿಷ್ಟ ಮಟ್ಟದಲ್ಲಿ ಬಳಸಿಕೊಳ್ಳುವುದು. ಆತ್ಮ ವಿಶ್ವಾಸವನ್ನು ಬೆಳೆಸಿಕೊಂಡು ನಮ್ಮನ್ನು ನಾವೆ ಬೆಂಬಲಿಸಿಕೊಳ್ಳುವ ತಿಳುವಳಿಕೆ ಮೂಡಿಸಿಕೊಳ್ಳಬೇಕು. ಆರ್ಥಿಕವಾಗಿ ಸಬಲರಾಗಬೇಕೆಂಬ ಖಚಿತ ನಿಲುವಿರಬೇಕು. ಜೀವನದಲ್ಲಿ ಏನನ್ನಾದರೂ ಸಾಧಿಸಬೆಕು, ಸಮಾಜಕ್ಕೆ ಕೊಡುಗೆ ನೀಡ ಬೇಕೆಂಬ ಹಂಬಲ ಬೆಳೆಸಿಕೊಳ್ಳಬೇಕು. ಗಂಡಾಂತರವನ್ನು ಎದುರಿಸುವ, ಕ್ರಿಯಾತ್ಮಕವಾಗಿ ಹೊಸ ಕಾರ್ಯಗಳಲ್ಲಿ ತೊಡಗುವ ಗುಣ ಉದ್ಯಮವಾಗಿ ಬೆಳೆಯಲು ತುಂಬ ಅಗತ್ಯ.

ಈ ಆಂತರಿಕ ಗುಣಗಳನ್ನು ಹೊರಗಿನಿಂದ ತುಂಬಲು ಸಾಧ್ಯವಿರುವುದಾದರೂ ಅವುಗಳನ್ನು ಹೊಂದುವ ಬೆಳೆಸಿಕೊಳ್ಳುವ ಆಸಕ್ತಿ, ಉತ್ಸಾಹ, ಒತ್ತಾಸೆ ಮಹಿಳೆಯರಿಂದಲೇ ಬರಬೇಕು. ಉದ್ಯಮ ಕಾರ್ಯವು ಉದ್ಯಮಿಯಿಂದ ನಿರೀಕ್ಷಿಸುವ ಎಲ್ಲಾ ಗುಣ ಲಕ್ಷಣಗಳನ್ನು ಬೆಳೆಸಿಕೊಳ್ಳಲು ಮಹಿಳೆಯರು ಉದ್ದೇಶಪೂರ್ವಕ ಪ್ರಯುತ್ನ ಮಾಡಬೇಕು. ಜ್ಞಾನ, ಮಾಹಿತಿ ಕೌಶಲ್ಯಗಳಿಂದ ತಮ್ಮನ್ನು ತಾವು ಸನ್ನದ್ಧರಾಗಿಸಿಕೊಳ್ಳಲು ನಿರಂತರ ಪ್ರಯತ್ನ ಮಾಡುತ್ತಿರಬೇಕು.

೨. **ಬಾಹ್ಯ ಪ್ರೋತ್ಸಾಹದಾಂಯುಕ ಅಂಶಗಳು:** ಮಹಿಳೆಯರಲ್ಲಿರುವ ನಿರ್ವಹಣ ಕೌಶಲ್ಯ ಸಾಮರ್ಥ್ಯಗಳೆಲ್ಲವೂ ಕೇವಲ ಕುಟುಂಬ ನಡೆಸುವುದಕ್ಕೆ ಸೀಮಿತಗೊಂಡಿದೆ. ಅದನ್ನು ಅವರ ಆರ್ಥಿಕ ಸ್ವಾವಲಂಬನೆಗೆ ಹಾಗೂ ದೇಶದ ಪ್ರಗತಿಗೆ ಬಳಸಿಕೊಳ್ಳಬೇಕೆಂದರೆ ಅವರಲ್ಲಿ ಅಡಗಿರುವ ಪ್ರತಿಭೆ ಸಾಮರ್ಥ್ಯವನ್ನು ಹೊರತರಲು ಹೊರಗಿನಿಂದ ಪ್ರಯತ್ನಗಳು, ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳ ಮಧ್ಯ ಪ್ರವೇಶಿಕೆ ಅವಶ್ಯಕ. ಕುಟುಂಬದ ನೈತಿಕ ಬೆಂಬಲ, ಸರ್ಕಾರದ ಸಹಾಯ ಹಾಗು ಪುರುಷರ ಸಹಕಾರ ಉತ್ತೇಜನ ನೀಡುವ ಅಂಶಗಳಾಗಿ ಬರಬೇಕು.

ಸಾಮಾನ್ಯವಾಗಿ ಮಹಿಳೆಯರು ವೇತನ ಸಿಗುವ ಉದ್ಯೋಗಕ್ಕೆ ಹೋಗಲು ಇಚ್ಛಿಸುತ್ತಾರೆ. ಅವರು ಗಂಡಾಂತರವನ್ನು ಎದುರಿಸಲು ಅಥವಾ ಹೆಚ್ಚು ಕ್ರಿಯಾತ್ಮಕವಾಗಿರಲು ಹಿಂಜರಿಯುತ್ತಾರೆ. ಅದರರ್ಥ ಅವರಲ್ಲಿ ಸಾಮರ್ಥ್ಯವಿಲ್ಲ ಎಂದಲ್ಲ. ಸೂಕ್ತ ಪರಿಸರವನ್ನು ಸೃಷ್ಟಿಸುವುದು ಅಗತ್ಯ. ಮಹಿಳೆಯರು ಉದ್ಯಮ ನಡೆಸುವುದನ್ನು ಒಂದು ಪರ್ಯಾಯ ಮತ್ತು ಉತ್ತಮ ವೃತ್ತಿಯನ್ನಾಗಿ ಆಯ್ಕೆ ಮಾಡಿಕೊಳ್ಳುವಂತೆ ಪ್ರೇರೇಪಿಸಬೇಕು. ಆಗ ಅವರಲ್ಲಿ ಹುದುಗಿರುವ ಉದ್ಯಮಶೀಲ ಮತ್ತು ನಿರ್ವಹಣಾ ಸಾಮರ್ಥ್ಯಗಳನ್ನು ಬಳಸಿಕೊಳ್ಳಬಹುದು. ಮಹಿಳೆಯರ ಶಿಕ್ಷಣ ಮಟ್ಟವನ್ನು ಉತ್ತಮಪಡಿಸಬೇಕು.

ಒಳ್ಳೆ ಶಿಕ್ಷಣದ ಹಿನ್ನೆಲೆಯಿರುವ ಮಹಿಳೆಯರು ಉದ್ಯಮದಲ್ಲಿ ಏನೇ ಸಮಸ್ಯೆ ಬಂದರೂ ಆತ್ಮ ವಿಶ್ವಾಸದಿಂದ ಎದುರಿಸುತ್ತಾರೆ. ಶಿಕ್ಷಣವು ತಾತ್ವಿಕ ನೆಲೆಯನ್ನು ನೀಡುವುದರಿಂದ ವ್ಯಾಪಾರ ವಹಿವಾಟುಗಳನ್ನು ನಡೆಸುವುದು, ಅಧಿಕಾರಿ ಹಾಗು ಸಾರ್ವಜನಿಕರೊಂದಿಗೆ ಉತ್ತಮ ಸಂಪರ್ಕ ಹೊಂದುವುದು, ಸರಿಯಾದ

ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವುದು ಮುಂತಾದ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಸಾಧ್ಯವಾಗುತ್ತದೆ.

ಮಹಿಳಾ ಉದ್ಯಮಿಗಳ ಕುರಿತು ಸಮಾಜದ ಮನೋಭಾವ ಹಾಗು ದೃಷ್ಟಿಕೋನದಲ್ಲಿನ ಬದಲಾವಣೆ, ಮಹಿಳೆಯರಿಗೆ ಸಾಮಾಜಿಕ ಮುಕ್ತ ವಾತಾವರಣವನ್ನು ಒದಗಿಸುವುದು, ಇವು ಅವರ ಉದ್ಯಮಶೀಲ ಅಭಿವೃದ್ಧಿಗೆ ದಾರಿ ಮಾಡಿಕೊಡುತ್ತವೆ.

ಮಹಿಳೆಯರ ದ್ವಿಗುಣ ಕೆಲಸದ ಹೊರೆಯನ್ನು ಕಡಿಮೆ ಮಾಡಬೇಕು. ಕುಟುಂಬದಲ್ಲಿ ಉದ್ಯಮಶೀಲ ಮೌಲ್ಯಗಳನ್ನು ಬೆಳೆಸಬೇಕು.

ಮಹಿಳೆಯರು ಉದ್ಯಮಕ್ಷೇತ್ರವನ್ನು ಪ್ರವೇಶಿಸುವ ಮೊದಲು ಔಪಚಾರಿಕ ತರಭೇತಿ ಪಡೆಯುವುದು ಅವಶ್ಯಕ. ಉದ್ಯಮಿಗಳಾದ ನಂತರವೂ ತಮ್ಮ ಕೌಶಲ್ಯ ಮತ್ತು ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಆಗಾಗ್ಗೆ ತರಭೇತಿ ಶಿಬಿರಗಳಲ್ಲಿ ಭಾಗವಹಿಸುತ್ತಿರಬೇಕು.

ಯಶಸ್ವಿ ಮಹಿಳಾ ಉದ್ಯಮಿಗಳನ್ನು ಗುರುತಿಸಿ, ಪ್ರಶಂಸಿಸಿ ಅವರ ಬಗ್ಗೆ ಪ್ರಚಾರ ಮಾಡಬೇಕು. ಹಣಕಾಸು ಸಂಸ್ಥೆಗಳಿಂದ ಸಹಾಯ ಪಡೆಯಲು ಇರುವ ನೀತಿ ನಿಯಮಾವಳಿಗಳು ಸರಳಗೊಂಡು ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಗುವಂತಾಗಬೇಕು.

ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಉದ್ಯಮ ಕ್ಷೇತ್ರವನ್ನು ಪ್ರವೇಶಿಸಬೇಕು. ಮಹಿಳೆಯರು ಉದ್ಯಮವನ್ನು ಒಂದು ವೃತ್ತಿಯನ್ನಾಗಿ ಸ್ವೀಕರಿಸಬಹುದು ಎಂಬ ಅರಿವನ್ನು ಒಂದು ಜನಾಂದೋಲನವಾಗಿ ಮೂಡಿಸಬೇಕು

ಬಡ ಮಹಿಳೆಯರಿಗೆ ಉಚಿತ ತರಭೇತಿ ನೀಡಲು ಉದ್ಯಮ ತರಭೇತಿ ಕೇಂದ್ರಗಳು ಸ್ಥಾಪನೆಯಾಗಬೇಕು. ಆಕರ್ಷಕವಾದಂತಹ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವುಗಳ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಮಹಿಳೆಯರು ತಮ್ಮ ಸೃಜನಶೀಲತೆ, ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಅವಕಾಶವಿರಬೇಕು.

ಕೊನೆಯದಾಗಿ ಮಹಿಳಾ ಉದ್ಯಮಿಗಳು ಸಂಘಟಿತರಾಗಬೇಕು. ಅವರ ನಡುವೆ ಸಂಪರ್ಕ ಜಾಲ ಏರ್ಪಟ್ಟು ಅವರು ಯಶಸ್ವಿ ಉದ್ಯಮಿಗಳಾಗಿ ಇತರ ಮಹಿಳೆಯರನ್ನು ಉದ್ಯಮಿಗಳನ್ನಾಗಿ ರೂಪಿಸಬೇಕು.

ಸವಾಲುಗಳು: ಮಹಿಳಾ ಉದ್ಯಮಿಗಳು ಹಲವಾರು ಸವಾಲುಗಳನ್ನು ಎದುರಿಸಬೇಕಿದೆ. ಹಣಕಾಸು ಮಾರುಕಟ್ಟೆ, ಉತ್ಪಾದನೆ ವೈಯಕ್ತಿಕ ಮತ್ತು ಸಾಮಾಜಿಕ ಸಮಸ್ಯೆಗಳು.

ಸಾಮಾಜಿಕ ವಿಚಾರದಲ್ಲಿ ಎದುರಿಸುವ ಬಲು ದೊಡ್ಡ ಸವಾಲು ಅವರು ಸಾಮಾಜಿಕ ಕಟ್ಟುಪಾಡುಗಳು, ನಿಯಂತ್ರಣಗಳು ಮತ್ತು ಸಂಪ್ರದಾಯವು ಮಹಿಳೆಯರಲ್ಲಿ ಕೀಳರಿಮೆಯ ಪ್ರಜ್ಞೆ ಬೆಳಸಿ ಅವರ ಉದ್ಯಮಶೀಲತೆ

ಕೌಶಲ್ಯಕ್ಕೆ ಬಹು ದೊಡ್ಡ ತೊಡಕಾಗಿದೆ. ಇದರ ಪರಿಣಾಮವಾಗಿ ಅವರಿಗೆ ಪ್ರಾಯೋಗಿಕ ಜ್ಞಾನವಿಲ್ಲ ಮತ್ತು ಅದಕ್ಕೆ ಸಂಬಂಧಿಸಿದ ವಿಷಯದಲ್ಲಿ ವಿದ್ಯಾವಂತ ಮಹಿಳೆಯರ ವಿಚಾರದಲ್ಲಿ ಇದು ಹೊರತಾಗಿಲ್ಲ. ಹೆಚ್ಚಿನ ಮಹಿಳೆಯರು ವಿಶ್ವಾಸದ ಕೊರತೆ ಮತ್ತು ತಮ್ಮ ಸಾಮರ್ಥ್ಯದಲ್ಲಿ ನಂಬಿಕೆ ಇಲ್ಲದಿರುವುದು. ಒಟ್ಟಿನಲ್ಲಿ ಮಹಿಳೆಯರ ಬಗೆಗಿನ ಸಮಾಜದ ಪ್ರವೃತ್ತಿ ಆಶಾದಾಯಕವಾಗಿಲ್ಲ. ಭಾರತದಲ್ಲಿ ಹೆಚ್ಚಿನ ಮಹಿಳೆಯ ಉದ್ಯಮಿಗಳು ಕುಟುಂಬದ ಸಹಕಾರವನ್ನು ಪಡೆಯುತ್ತಿಲ್ಲ. ಅವರನ್ನು ಸಂಶಯದ ದೃಷ್ಟಿಯಿಂದ ನೋಡುವವರು ಹೆಚ್ಚಾಗಿದ್ದಾರೆ. ದ್ವಿಪಾತ್ರದಲ್ಲಿ ಕಾಣಿಸಿಕೊಳ್ಳುವ ಅವರು ಕುಟುಂಬ ಮತ್ತು ತಮ್ಮ ಉದ್ಯೋಗವನ್ನು ಸರಿದೂಗಿಸಿಕೊಂಡು ಹೋಗಬೇಕಾದ ಕಠಿಣ ಕೆಲಸ ಅವರ ಮುಂದಿದೆ.

ಆರ್ಥಿಕ ವಿಚಾರದಲ್ಲಿ ಬೇಕಾದ ಹಣಕಾಸಿನ ನೆರವನ್ನು ಪಡೆಯುವುದು ದೊಡ್ಡ ಸಮಸ್ಯೆಯಾಗಿದೆ. ಹಣಕಾಸಿನ ಸಂಸ್ಥೆಗಳು, ಅಧಿಕಾರಿಗಳು ಅವರನ್ನು ಲಘುವಾಗಿ ಪರಿಗಣಿಸಿರುವುದು.

ಐ ಎಲ್ ಒ ಪ್ರಕಾರ ಜಗತ್ತಿನ ಜನಸಂಖ್ಯೆಯ ೫೦ರಷ್ಟು ಮಹಿಳೆಯರಿದ್ದು ಜಗತ್ತಿನ ಆಸ್ತಿಯಲ್ಲಿ ಶೇ. ೧ಕ್ಕಿಂತಲೂ ಕಡಿಮೆ ಪಾಲು ಹೊಂದಿದ್ದಾರೆ. ಆದ್ದರಿಂದ ಹಣಕಾಸಿನ ವಿಚಾರದಲ್ಲಿ ಮಹಿಳೆಯರು ಬಹು ದೊಡ್ಡ ಸಮಸ್ಯೆ ಎದುರಿಸುತ್ತಿದ್ದಾರೆ.

ಮಾರುಕಟ್ಟೆ ಇನ್ನೊಂದು ಸಮಸ್ಯೆ. ಹೆಚ್ಚಿನವರು ಸಣ್ಣ ಪ್ರಮಾಣದ ಉದ್ಯಮ ಘಟಕವನ್ನು ಹೊಂದಿರುವುದರಿಂದ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ತಮ್ಮ ಉತ್ಪನ್ನಗಳನ್ನು ಮಾರಾಟಮಾಡಲು ಅವರು ಹರಸಾಹಸ ಪಡುತ್ತಿದ್ದಾರೆ. ಅಲ್ಲದೆ ಮಾರುಕಟ್ಟೆ ಜ್ಞಾನ ಮತ್ತು ಕೌಶಲ್ಯ ಮಹಿಳೆಯರಲ್ಲಿ ಕಡಿಮೆ ಇದೆ ಎಂದು ಹೇಳಲಾಗಿದೆ.

ಸರಕಾರದ ಬೆಂಬಲ ಸರಿಯಾಗಿಲ್ಲ ಅಲ್ಲದೆ ಸರಕಾರವು ಮಹಿಳಾ ಉದ್ಯಮಿಗಳಿಗಾಗಿಯೆ ಯಾವುದೇ ಯೋಜನೆಗಳನ್ನು ರೂಪಿಸಿಲ್ಲ. ಸರಕಾರದ ಸಮರ್ಪಕ ಬೆಂಬಲ ಇಲ್ಲದಿರುವುದರಿಂದ ಭಾರತದಂತಹ ಸಾಂಪ್ರದಾಯಿಕ ಸಮಾಜದಲ್ಲಿ ಮಹಿಳಾ ಉದ್ಯಮಿಗಳು ತೀವ್ರ ತರವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಮಹಿಳಾ ಉದ್ಯಮಿಗಳು ಎದುರಿಸುತ್ತಿರುವ ಸಮಸ್ಯೆಗಳು

ಭಾರತದಂತಹ ಹಿಂದುಳಿದ ದೇಶದಲ್ಲಿ ಮಹಿಳಾ ಉದ್ಯಮಿಗಳ ಸಂಖ್ಯೆ ತುಂಬಾ ಕಡಿಮೆಯಿದೆ. ಉದ್ಯಮ ಜಗತ್ತಿನಲ್ಲಿ ಮಹಿಳೆಯರು ಅನುಭವಿಸುವ ತೊಂದರೆ, ಉದ್ಯಮ ಜಗತ್ತನ್ನು ಪ್ರವೇಶಿಸಲು ಅವರಿಗೆ ಅಡ್ಡಿಯಾಗಿದೆ. ಕೆಲವು ಸಮಸ್ಯೆಗಳು ಈ ಕೆಳಗಿನಂತಿವೆ.

೧. ಪುರುಷ ಪ್ರಧಾನ ಸಮಾಜ: ಭಾರತವು ಪ್ರಮುಖವಾಗಿ ಪುರುಷ ಪ್ರಧಾನ ಸಮಾಜವಾಗಿರುವುದರಿಂದ, ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯದ ಕೊರತೆಯಿದೆ.

೨. ಉದ್ಯಮ ಕೌಶಲ್ಯದ ಕೊರತೆ- ಹಲವು ಮಹಿಳೆಯರು ಉದ್ಯಮದಲ್ಲಿ ತೊಡಗಿಕೊಂಡರೂ, ಅದನ್ನು ಸಮರ್ಥವಾಗಿ ನಿಭಾಯಿಸುವ, ಮುನ್ನಡೆಸುವ ಕೌಶಲ್ಯ ಇಲ್ಲದೆ ವಿಫಲರಾಗುತ್ತಾರೆ.

೩. ಶಿಕ್ಷಣದ ಕೊರತೆ- ಹೆಣ್ಣು ಮಕ್ಕಳ ಶಿಕ್ಷಣದ ಕುರಿತು ನಿರ್ಲಕ್ಷ, ವೃತ್ತಿಪರ ಕೋರ್ಸ್ ಗಳ ಆಯ್ಕೆಗೆ ಅವಕಾಶ ಇಲ್ಲದಿರುವುದು, ಶಿಕ್ಷಣ ಪಡೆಯಲು ಮೂಲಭೂತ ಸೌಕರ್ಯಗಳ ಕೊರತೆ ಇತ್ಯಾದಿಗಳು ಹೆಣ್ಣು ಮಕ್ಕಳು ಉದ್ಯಮಿಗಳಾಗಿ ರೂಪುಗೊಳ್ಳುವಂತಾಗಲು ಶಿಕ್ಷಣವನ್ನು ಸಾಧನವನ್ನಾಗಿ ಮಾಡಿಕೊಳ್ಳಲು ಇರುವ ಅಡ್ಡಿಗಳು.

೪. ವೃತ್ತಿ ಚಲನೆಯ ಕೊರತೆ- ಸ್ಥಿರತೆ, ಭದ್ರತೆಗೆ ಆದ್ಯತೆ ನೀಡುವ ಮಹಿಳಾ ಉದ್ಯಮಿಗಳು ಗಂಡಾಂತರವನ್ನು ಎದುರಿಸಲು ಸಿದ್ಧರಿರುವುದಿಲ್ಲ. ಜೊತೆಗೆ ಸಂಪನ್ಮೂಲದ ಕೊರತೆ, ಆತ್ಮ ವಿಶ್ವಾಸದ ಕೊರತೆ, ಚಲನಶೀಲತೆಯ ಕೊರತೆ ಹಾಗೂ ದ್ವಿಗುಣ ಕೆಲಸದ ಹೊರೆ ಮಹಿಳಾ ಉದ್ಯಮಿಗಳ ವೃತ್ತಿ ಚಲನೆಗೆ ಅಡ್ಡಿಯಾಗಿವೆ.

೫. ಬಂಡವಾಳದ ಕೊರತೆ: ಕುಟುಂಬದಲ್ಲಾಗಲಿ ಕುಟುಂಬದ ಹೊರಗಾಗಲಿ ಮಹಿಳೆಯರಿಗೆ ಹಣ ಅಥವಾ ಆರ್ಥಿಕ ಸಂಪನ್ಮೂಲಗಳ ಲಭ್ಯತೆಯಿರುವುದಿಲ್ಲ. ಸಾಮಾಜಿಕ ರಚನೆ, ಪುರುಷ ಪ್ರಧಾನತೆ ಹಾಗೂ ಆರ್ಥಿಕ ವ್ಯವಸ್ಥೆ ಮಹಿಳೆಯರನ್ನು ಪರಾವಲಂಬಿಗಳನ್ನಾಗಿ ಮಾಡಿರುತ್ತವೆ. ಹಣಕಾಸಿನ ಸಂಸ್ಥೆ, ಬ್ಯಾಂಕ್ ಹಾಗು ಸರ್ಕಾರಗಳು ಮಹಿಳೆಯರಿಗೆ ಹಣಕಾಸಿನ ಸಹಾಯ ನೀಡುವಲ್ಲಿ ಸಾಲ ಮಂಜೂರಾತಿ ಮಾಡುವಲ್ಲಿ ನಿರ್ಲಕ್ಷವನ್ನು ತೋರುತ್ತವೆ. ಅಲ್ಲದೆ ಹಣಕಾಸಿನ ಸಂಸ್ಥೆಗಳು ಅವಿವಾಹಿತ ಮಹಿಳೆಯರಿಗೆ ಸಾಲ ನೀಡಲು ಸಂಶಯಿಸುತ್ತವೆ. ಸಾಮಾಜಿಕ ಕಟ್ಟು ಪಾಡುಗಳು ಪುರುಷ ಪ್ರಧಾನ ಸಮಾಜ ಹಾಗೂ ಆರ್ಥಿಕ ವ್ಯವಸ್ಥೆ ಮಹಿಳೆಯರನ್ನು ಪರಾವಲಂಬಿಗಳನ್ನಾಗಿ ಮಾಡಿದೆ. ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಮಹಿಳಾ ಉದ್ಯಮಿಗಳಿಗೆ ಹಣಕಾಸಿನ ನೆರವು ನೀಡಲು ಹಿಂಜರಿಯುತ್ತವೆ. ತೆಗೆದುಕೊಳ್ಳುವ ಸಾಲಕ್ಕೆ ಪ್ರತಿಯಾಗಿ ಭದ್ರತೆ ಒದಗಿಸುವ ಸಾಮರ್ಥ್ಯ ಹೆಚ್ಚಿನ ಮಹಿಳೆಯರಲ್ಲಿಲ್ಲ. ಬಂಡವಾಳ ಕೊರತೆಯಿಂದಾಗಿ, ಮಹಿಳೆಯರು ಉದ್ಯಮವನ್ನು ಸ್ಥಾಪಿಸಲು ಹಿಂದೇಟು ಹಾಕುತ್ತಾರೆ.

೬. ಮೂಲಭೂತ ಅವಶ್ಯಕತೆಗಳ ಕೊರತೆ- ನವೀನ ತಂತ್ರಜ್ಞಾನದ ಕೊರತೆ, ಸರ್ಕಾರ, ಕೈಗಾರಿಕೆ ಹಾಗೂ ಹಣಕಾಸು ಸಂಸ್ಥೆಗಳಿಂದ ಬೆಂಬಲ ಹಾಗೂ ಮಾರ್ಗದರ್ಶನ ಕೊರತೆ, ಕಚ್ಚಾ ಸಾಮಗ್ರಿಗಳ ಕೊರತೆ ಮಹಿಳಾ ಉದ್ಯಮಿಗಳಿಗಿರುವ ಸಮಸ್ಯೆಗಳಾಗಿವೆ.

೭. ವಸ್ತುಗಳ ಉತ್ಪಾದನೆಗೆ ಸಂಬಂಧಿಸಿದಂತೆಯೂ ಸಮಸ್ಯೆಗಳು ಎದುರಾಗುತ್ತವೆ. ಒಂದು ವಸ್ತುವಿನ ಉತ್ಪಾದನೆ ವಿವಿಧ ಚಟುವಟಿಕೆಗಳ ಸಂಯೋಗದಿಂದ ಕೂಡಿರುತ್ತದೆ. ಮಹಿಳಾ ಉದ್ಯಮಿಗಳಿಗೆ ಕೆಲವು ಚಟುವಟಿಕೆಗಳ ಮೇಲೆ ನಿಯಂತ್ರಣವಿರುತ್ತದೆ. ಇನ್ನು ಕೆಲವು ಚಟುವಟಿಕೆಗಳ ಮೇಲೆ ಇರುವುದಿಲ್ಲ.

೮. ಒಂದು ಉದ್ಯಮವನ್ನು ಯಶಸ್ವಿಯಾಗಿ ನಡೆಸಲು ಉತ್ತಮ ಸಿಬ್ಬಂದಿ ಹಾಗೂ ಸಮರ್ಥ ನಿರ್ವಹಣ

ವ್ಯವಸ್ಥೆ ತುಂಬ ಅವಶ್ಯಕ. ಅಲ್ಲದೆ ಕೌಶಲ್ಯ ಹಾಗು ಅನುಭವಿ ಕೆಲಸಗಾರರ ದೊಡ್ಡ ಸಮಸ್ಯೆಯಾಗುತ್ತದೆ. ಸಂಘಟಿತಗೊಂಡ ಪುರುಷ ಕಾರ್ಮಿಕರು ಮಹಿಳಾ ಉದ್ಯಮಿಗೆ ದೊಡ್ಡ ಸವಾಲಾಗಿರುತ್ತಾರೆ.

೯. ಮಹಿಳಾ ಉದ್ಯಮಿಗಳು ಎದುರಿಸುವ ಅತಿ ದೊಡ್ಡ ಸಮಸ್ಯೆ ಮಾರುಕಟ್ಟೆ ಸೃಷ್ಟಿಸಿಕೊಂಡು ವಸ್ತುಗಳನ್ನು ಮಾರಾಟ ಮಾಡುವುದು. ಮಾರುಕಟ್ಟೆಗೆ ಸಂಬಂಧಿಸಿದಂತೆ ತೀವ್ರ ಪೈಪೋಟಿ, ಸ್ಪರ್ಧೆ, ಅಲ್ಲಿ ಆಗುತ್ತಿರುವ ಬದಲಾವಣೆ ಕುರಿತು ಮಾಹಿತಿ ಕೊರತೆ, ಮಹಿಳಾ ಉದ್ಯಮಿಗಳ ಬಗ್ಗೆ ಗ್ರಾಹಕರ ಉದಾಸೀನ ಧೋರಣೆ, ವಸ್ತುಗಳ ವಿತರಣೆಗೆ ಮೂಲ ಸೌಕರ್ಯಗಳ ಕೊರತೆ, ವಸ್ತು ಕೊಂಡು ಕೊಂಡವರ ಕಡೆಯಿಂದ ಹಣ ಪಾವತಿಯಲ್ಲಿ ನಿಧಾನವಾಗುವುದು, ಸಾಕಷ್ಟು ಪ್ರಚಾರ ಮಾಡದಿರುವುದು, ಜಾಹೀರಾತಿನ ಕೊರತೆ ಮುಂತಾದ ಸಮಸ್ಯೆಗಳು ಎದುರಾಗುತ್ತವೆ.

೧೦. ಕಳೆದ ಒಂದೂವರೆ ದಶಕದಿಂದ ಚಾಲ್ತಿಯಲ್ಲಿರುವ ಜಾಗತೀಕರಣವು ಮಹಿಳಾ ಉದ್ಯಮಿಗಳಿಗೆ ದೊಡ್ಡ ಸವಾಲಾಗಿದೆ. ಬಹುರಾಷ್ಟ್ರೀಯ ಕಂಪನಿಗಳು ಒಡ್ಡುವ ಸ್ಪರ್ಧೆ, ಗುಣಮಟ್ಟ, ಬೆಲೆ, ಸರಬರಾಜಿನಲ್ಲಿ ವಿಳಂಬ ಇತ್ಯಾದಿಗಳನ್ನೂ ಎದುರಿಸಲು ಮಹಿಳಾ ಉದ್ಯಮಿಗಳು ಇನ್ನು ಸನ್ನದ್ಧರಾಗಬೇಕಾಗಿದೆ. ಅನೇಕ ಸಣ್ಣ ಪ್ರಮಾಣದ ಕೈಗಾರಿಕೆ, ಗೃಹ ಹಾಗು ಗುಡಿ ಕೈಗಾರಿಕೆಗಳು ಮುಚ್ಚಿ ಹೋಗಿರುವ ಸಂದರ್ಭದಲ್ಲಿ ಮಹಿಳೆಯರು ಉದ್ಯೋಗಿಗಳಾಗಿ ಅವಕಾಶಗಳನ್ನು ಕಳೆದು ಕೊಂಡಿದ್ದಾರೆ. ಅವರನ್ನು ಪುನಃ ಮುಖ್ಯವಾಹಿನಿಗೆ ತರಲು ಮಹಿಳಾ ಉದ್ಯಮಶೀಲತೆಯ ಅಭಿವೃದ್ಧಿ ಒಂದೇ ದಾರಿ.

ಹೊಸ ಆರ್ಥಿಕ ನೀತಿ ಮತ್ತು ಮಹಿಳಾ ಉದ್ಯಮಿಗಳು

೧೯೯೧ ರಲ್ಲಿ ಜಾರಿಗೊಂಡ ಹೊಸ ಆರ್ಥಿಕ ನೀತಿ ನಮ್ಮ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಜೀವನದ ಮೇಲೆ ಅಗಾಧವಾದ ಪ್ರಭಾವ ಬೀರಿದೆ, ಬೀರುತ್ತಿದೆ. ಆರ್ಥಿಕ ಕ್ಷೇತ್ರದಲ್ಲಿ ಹೆಚ್ಚು ಪರಿಣಾಮಕ್ಕೊಳಗಾದ ವಲಯಗಳೆಂದರೆ ಕೈಗಾರಿಕೋದ್ಯಮ ಹಾಗೂ ಸಮೂಹ ಮಾಧ್ಯಮ. ಕೈಗಾರಿಕೋದ್ಯಮದ ಮೇಲಾದ ಪರಿಣಾಮಗಳಿಂದ ಮಹಿಳಾ ಉದ್ಯಮಿಗಳು ಹೊರತಾಗಿಲ್ಲ. ಹೊಸ ಆರ್ಥಿಕ ನೀತಿಯಲ್ಲಿ ಅಳವಡಿಸಿಕೊಳ್ಳಲಾದ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣ ತತ್ವಗಳು ಆರ್ಥಿಕ ತಜ್ಞರ ಅಭಿಪ್ರಾಯದಂತೆ ಮಹಿಳಾ ಉದ್ಯಮಿಗಳ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದೆ ಎಂಬುದಾದರೆ ಸ್ತ್ರೀವಾದಿ ತಜ್ಞರ ದೃಷ್ಟಿಕೋನದಿಂದ ನಕಾರಾತ್ಮಕ ಪರಿಣಾಮ ಕಂಡುಬರುತ್ತಿದೆ ಎಂಬುದಾಗಿದೆ. ಮಾರುಕಟ್ಟೆ ವಿಸ್ತಾರಗೊಂಡು ತೀವ್ರ ಸ್ಪರ್ಧೆಯಿಂದ ವಸ್ತುಗಳ ಗುಣಮಟ್ಟ ಹೆಚ್ಚಾಗಿ, ಬೇಡಿಕೆ ಹೆಚ್ಚಾಗಿ ಮಹಿಳಾ ಉದ್ಯಮಿಗಳು ಲಾಭ ಗಳಿಸಲು ಅವಕಾಶವಾಗಿದೆ. ಬಹು ರಾಷ್ಟ್ರೀಯ ಕಂಪನಿಗಳೊಂದಿಗೆ ಸಂಯೋಜನೆಗೊಂಡು ಬಂಡವಾಳ, ನವೀನ ತಂತ್ರಜ್ಞಾನ, ಹೊಸ ಮಾರುಕಟ್ಟೆ ಸೃಷ್ಟಿಗೆ ಅವಕಾಶವಾಗಿದೆ.

ಮಹಿಳೆಯರ ಸೃಜನಶೀಲತೆ, ನವೀನ ಕಲ್ಪನೆಗೆ, ಪ್ರತಿಭೆಗಳ ಹೊರ ಹೊಮ್ಮುವಿಕೆಗೆ ವಾತಾವರಣ

ಸೃಷ್ಟಿಯಾಗಿದೆ ಎಂದೆಲ್ಲಾ ಹೇಳಲಾಗುತ್ತಿದೆ. ಇವೆಲ್ಲ ಸ್ವಲ್ಪ ಮಟ್ಟಿಗೆ ನಿಜವಾದರೂ ಎಷ್ಟು ಪ್ರಮಾಣ ಹಾಗೂ ಯಾವ ವರ್ಗದ ಮಹಿಳಾ ಉದ್ಯಮಿಗಳು ಈ ಲಾಭವನ್ನು ಪಡೆಯುತ್ತಿದ್ದಾರೆ ಎಂದು ತಿಳಿಯುವುದು ಮುಖ್ಯ. ಸೂಕ್ಷ್ಮ ಮಟ್ಟದಲ್ಲಿ ಸಣ್ಣ ಸಣ್ಣ ಉದ್ಯಮಗಳಲ್ಲಿ ತೊಡಗಿರುವ ಮಹಿಳೆಯರ ಪರಿಸ್ಥಿತಿ ಏನಾಗಿದೆ, ಅವರು ಯಾವ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದು ನೋಡುವುದು ಅವಶ್ಯಕ.

ಮಹಿಳಾ ಉದ್ಯಮಿಗಳು ಇಂದು ಬಹು ರಾಷ್ಟ್ರೀಯ ಕಂಪೆನಿಗಳೊಂದಿಗೆ ಸ್ಪರ್ಧಿಸಬೇಕಾಗಿದೆ. ವಿದೇಶಿ ಕಂಪನಿಗಳು ನವೀನ ತಂತ್ರಜ್ಞಾನದಿಂದ ಕಡಿಮೆ ಖರ್ಚಿನಲ್ಲಿ ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಿ ಕಡಿಮೆ ಬೆಲೆಗೆ ಮಾರುತ್ತವೆ. ಆದರೆ ಮಹಿಳಾ ಉದ್ಯಮಿಗಳು ಸ್ಥಳೀಯ ಕಚ್ಚಾ ಸಾಮಗ್ರಿ ತಂತ್ರಜ್ಞಾನದಿಂದ, ದೈಹಿಕ ಶ್ರಮ ಬಳಸಿ ಉತ್ಪಾದಿಸುವ ವಸ್ತುಗಳಲ್ಲಿ ಗುಣವನ್ನು ಹೆಚ್ಚಿಸುವುದಕ್ಕಾಗಲಿ ಕಡಿಮೆ ಖರ್ಚಿನಲ್ಲಿ ಉತ್ಪಾದಿಸಲು ಆಗದೆ ಬೆಲೆಯನ್ನು ಮೇಲ್ಮಟ್ಟದಲ್ಲೆ ಇಡಬೇಕಾಗುತ್ತದೆ. ಕಳೆದ ಒಂದೂವರೆ ದಶಕದಲ್ಲಿ ಸಹಸ್ರಾರು ಸಣ್ಣ ಉದ್ಯಮಗಳು ಮುಚ್ಚಿ ಹೋಗಿರುವುದು ಕಂಡು ಬಂದಿದೆ. ಇದರಿಂದ ಉದ್ಯಮಿಗಳಾಗಿ, ಕೆಲಸಗಾರರಾಗಿ ಹೆಚ್ಚು ತೊಂದರೆಗೊಳಗಾದವರು ಮಹಿಳೆಯರೆಂದು ತಿಳಿದುಬಂದಿದೆ.

ಭಾರತದಲ್ಲಿ ಮಹಿಳಾ ಉದ್ಯಮಶೀಲತೆ ಅಷ್ಟು ತೃಪ್ತಿದಾಯಕವಾಗಿಲ್ಲ. ಕಾರಣ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು:

೧. ಆತ್ಮ ವಿಶ್ವಾಸದ ಕೊರತೆ

೨. ಪುರುಷ ಪ್ರಧಾನ ಸಮಾಜ

೩. ಅನಿಶ್ಚಿತತೆ ಎದುರಿಸುವ ಸಾಮರ್ಥ್ಯ ಕಡಿಮೆ

೪. ಕುಟುಂಬದ ಅಸಹಕಾರ

೫. ಪಾತ್ರಗಳ ಸಂಘರ್ಷ

೬. ಕಡಿಮೆ ಚಲನಾ ಶಕ್ತಿ

೭. ಶಿಕ್ಷಣ ಕಡಿಮೆ ಇರುವುದು.

೮. ಕೌಟುಂಬಿಕ ಸಮಸ್ಯೆ

೯. ಹಣಕಾಸಿನ ತೊಂದರೆಗಳು

೧೦. ಸಾಧನೆಯ ಮಹತ್ವಾಕಾಂಕ್ಷೆ ಇಲ್ಲದಿರುವುದು

೧೧. ಸಾಮಾಜಿಕ ಮನೋಭಾವ

೧೨. ತರಬೇತಿಯ ಕೊರತೆ

೧೩. ಕುಟುಂಬದ ಅಸಹಕಾರ

೧೪. ಪ್ರಾಯೋಗಿಕ ಜ್ಞಾನ ಇಲ್ಲದಿರುವುದು.

೧೫. ಅಸಮರ್ಪಕ ಮಾರುಕಟ್ಟೆ ಸೌಲಭ್ಯ

೧೬ ಅಸಮರ್ಪಕ ನಿರ್ವಹಣಾ ಕೌಶಲ್ಯ

ಕೈಗೊಂಡ ಕ್ರಮಗಳು: ಸರಕಾರವು ಮಹಿಳಾ ಉದ್ಯಮಿಗಳಿಗಾಗಿ ಕೈಗೊಂಡ ಕ್ರಮಗಳು ತೃಪ್ತಿದಾಯಕವಾಗಿದೆ. ಆದರೆ ಅವು ಸಾಲದು ಕೆಳಗಿನವುಗಳು ಪ್ರಮುಖ ಕಾರ್ಯಕ್ರಮಗಳಾಗಿವೆ.

ಯೋಜನೆಯ ಮೊದಲ ದಶಕಗಳಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳಾ ಪಾತ್ರಕ್ಕೆ ಅಷ್ಟೊಂದು ಪ್ರಾಮುಖ್ಯತೆ ಕೊಟ್ಟಿರಲಿಲ್ಲ. ೬ನೇ ಪಂಚವಾರ್ಷಿಕ ಯೋಜನೆಯ ಕರಡು (೧೯೮೦-೧೯೮೫) ಮಹಿಳಾ ಉದ್ಯಮಶೀಲತೆ ವಿಷಯಕ್ಕೆ ಪ್ರಾಮುಖ್ಯತೆ ಕೊಟ್ಟಿತು ಮತ್ತು ಕ್ರಮಗಳನ್ನು ಕೈಗೊಂಡಿತು.

೧೯೮೫ ರಲ್ಲಿ ಭಾರತ ಸರ್ಕಾರ ಮಹಿಳಾ ಉದ್ಯಮಿಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ಸಮಿತಿಯನ್ನು ಸ್ಥಾಪಿಸಿತು. ದೇಶದಲ್ಲಿ ಉದ್ಯಮಿಗಳನ್ನು ಉತ್ತೇಜಿಸುವ ಸಲುವಾಗಿ ೧೯೯೧ರ ಕೈಗಾರಿಕಾ ನೀತಿ ಮಹಿಳೆಯರಿಗಾಗಿ ವಿಶೇಷ ತರಭೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮಹತ್ವ ನೀಡಿತು. ಉತ್ಪನ್ನ ಮತ್ತು ಪ್ರಕ್ರಿಯೆ ಆಧಾರಿತ ಕೋರ್ಸ್‌ಗಳು ಮಹಿಳೆಯರನ್ನು ಸಣ್ಣ ಕೈಗಾರಿಕೆ ನಡೆಸಲು ಅವಕಾಶ ಮಾಡಿಕೊಟ್ಟಿತು.

ಭಾರತದಲ್ಲಿ ಸರಕಾರದ ವಿವಿಧ ಕಾರ್ಯಕ್ರಮಗಳ ಮೂಲಕ ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಬೆಳೆಸಲು ಬ್ಯಾಂಕುಗಳು ಅತೀ ಮುಖ್ಯವಾದ ಪಾತ್ರ ವಹಿಸುತ್ತಿವೆ. ಮಹಿಳೆಯರ ರಾಷ್ಟ್ರೀಯ ನೀತಿ ಯು ಪ್ರಕಾರ ಮಹಿಳಾ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಲಾಗಿದೆ. ಮಹಿಳಾ ಸಮೃದ್ಧಿ ಯೋಜನೆ ಮತ್ತು ರಾಷ್ಟ್ರೀಯ ಮಹಿಳಾ ಕೋಶ್ ಮುಂತಾದ ಯೋಜನೆಗಳನ್ನು ಪರಿಚಯಿಸಿದೆ.

ಕೆಲವು ಸಂಘಟನೆಗಳನ್ನು ಸ್ಥಾಪಿಸಲಾಗಿದೆ. ೧೯೬೬ ರಲ್ಲಿ ಭಾರತೀಯ ಮಹಿಳಾ ಉದ್ಯಮಿಗಳ ಫೆಡರೇಶನ್ ಸ್ಥಾಪಿಸುವುದರ ಮೂಲಕ ಯಶಸ್ವಿ ಉದ್ಯಮಿಗಳಾಗಲು ಆರ್ಥಿಕ ಸಬಲೀಕರಣ ವನ್ನು ಹೊಂದಬೇಕು ಎನ್ನುವ ದೃಷ್ಟಿಯಿಂದ ಈ ಫೆಡರೇಶನ್ ನೀತಿ ನಿರೂಪಕರ ಜೊತೆಗೆ ಸಂಪರ್ಕವನ್ನು ಇಟ್ಟುಕೊಂಡು ಅವರಿಗಾಗಿ ನೆರವಾಗುತ್ತಿದೆ. ಅವರಿಗೆ ತರಭೇತಿ ಮತ್ತು ಬ್ಯಾಂಕುಗಳಿಂದ ಹಣಕಾಸಿನ ನೆರವು ದೊರಕಿಸಿಕೊಡುತ್ತಿದೆ. ಸ್ಥಾಪನೆಯಾದಂದಿನಿಂದ ಈ ದಿಶೆಯಲ್ಲಿ ಉತ್ತಮ ಕೆಲಸ ಮಾಡುತ್ತಿದೆ.

ಆಧುನಿಕ ವಿಜ್ಞಾನ ತಂತ್ರಜ್ಞಾನದಿಂದ ನಿರ್ಮಿತವಾದ ನೂತನ ಆರ್ಥಿಕ, ಸಾಮಾಜಿಕ ವ್ಯವಸ್ಥೆ ಮತ್ತು ಹೊಸ ವಿಚಾರಗಳು ನೂತನ ಮಹಿಳಾ ಉದ್ಯಮಿಗಳಿಗೆ ಹೆಚ್ಚಿನ ಪ್ರೇರಣೆ ನೀಡಿದೆ ಅವರ ಪ್ರೋತ್ಸಾಹಣೆಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹೊಸ ಕ್ರಮಗಳನ್ನು ಶೋಧಿಸುತ್ತವೆ. ಸರ್ಕಾರೇತರ ಸಂಘಟನೆಗಳು ಮಹಿಳಾ ಉದ್ಯಮಿಗಳಲ್ಲಿ ಉದ್ಯಮ ಸಾಹಸದ ಚೈತನ್ಯದ ತುಂಬುವ ಪ್ರಕ್ರಿಯೆಯಲ್ಲಿ

ನಿರತವಾಗಿವೆ.

ಮಹಿಳೆಯರ ವಿಷಯದಲ್ಲಿ ಸಬಲೀಕರಣ ಮತ್ತು ಉದ್ಯಮಶೀಲತೆಯು ಒಂದಕ್ಕೊಂದು ಪೂರಕವಾಗಿವೆ. ಯಶಸ್ವಿ ಉದ್ಯಮಶೀಲತೆಯು ಸಬಲೀಕರಣಕ್ಕೆ ದಾರಿ ಮಾಡಿಕೊಟ್ಟರೆ, ಸಬಲೀಕರಣವು ಉದ್ಯಮಿಗಳನ್ನು ತಮ್ಮ ಗುರಿ ತಲುಪಲು ಸ್ಫೂರ್ತಿ ನೀಡುತ್ತದೆ. ನಿರುದ್ಯೋಗಿಗಳಿಗೆ ನೇರವಾಗಿ ಭತ್ಯೆ ನೀಡುವ ಬದಲು ಅವರಿಗೆ ಕೌಶಲ್ಯ ಆಧಾರಿತ ತರಬೇತಿ ನೀಡುವುದು. ಮಹಿಳೆಯರಲ್ಲಿ ಉದ್ಯಮಶೀಲತೆ ಗುಣಗಳನ್ನು ಬೆಳೆಸುವುದು ಮಹಿಳಾ ಸಬಲೀಕರಣದ ದಿಕ್ಕಿನಲ್ಲಿ ಮಹತ್ವವಾದದ್ದು ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಆರ್ಥಿಕ ಅಭಿವೃದ್ಧಿಗೆ ಮಹಿಳಾ ಉದ್ಯಮಿಗಳ ಅಭಿವೃದ್ಧಿ ಅತೀ ಅಗತ್ಯವಾಗಿದೆ. ಸಶಕ್ತರಾಗಲು ಗ್ರಾಮೀಣ ಮಹಿಳೆಯರಿಗೆ ಬೆಂಬಲ, ಸಮಾಲೋಚನೆ ಮತ್ತು ತರಬೇತಿಯ ಅಗತ್ಯವಿದೆ. ಈ ನಿಟ್ಟಿನಲ್ಲಿ ಸರ್ಕಾರದ ಜೊತೆಗೆ ಹಲವಾರು ಸರಕಾರೇತರ ಸಂಘ ಸಂಸ್ಥೆಗಳು ಮಹಿಳೆಯರನ್ನು ಆರ್ಥಿಕವಾಗಿ ಸದೃಢರನ್ನಾಗಿಸಲು ಶ್ರಮಿಸಬೇಕಿವೆ.

ಅಧ್ಯಾಯ – ೪ : ಪ್ರಕರಣ ಅಧ್ಯಯನ

❖ ಪ್ರವೇಶ

❖ ಸಂಸ್ಥೆಯ ಧ್ಯೇಯೋದ್ದೇಶಗಳು ಮತ್ತು ಕಾರ್ಯಗಳು

❖ ಸಂಗ್ರಹಿಸಿದ ಮಾಹಿತಿ

ಅಧ್ಯಾಯ-೪: ಪ್ರಕರಣ ಅಧ್ಯಯನ

೪.೧ ಪ್ರವೇಶ

ಸರ್ಕಾರೇತರ ಸಂಘಟನೆಗಳು ಮಹಿಳಾ ಉದ್ಯಮಿಗಳಲ್ಲಿ ಉದ್ಯಮ ಸಾಹಸದ ಚೈತನ್ಯದ ತುಂಬುವ ಪ್ರಕ್ರಿಯೆಯಲ್ಲಿ ನಿರತವಾಗಿವೆ. ಹಳ್ಳಿಯ ಮಹಿಳೆಯರಿಗೆ ಉದ್ಯಮ ಕೌಶಲ್ಯವೆಂಬುದಿಲ್ಲ. ಏಕೆಂದರೆ ಅವರಿಗೆ ತರಭೇತಿ ವ್ಯವಸ್ಥೆ ಇಲ್ಲದಿರುವುದು. ಸಶಕ್ತರಾಗಲು ಗ್ರಾಮೀಣ ಮಹಿಳೆಯರಿಗೆ ಬೆಂಬಲ, ಸಮಾಲೊಚನೆ ಮತ್ತು ತರಭೇತಿಯು ಅಗತ್ಯವಿದೆ. ಈ ನಿಟ್ಟನಲ್ಲಿ ಸರ್ಕಾರದ ಜೊತೆಗೆ ಹಲವಾರು ಸರಕಾರೇತರ ಸಂಘ ಸಂಸ್ಥೆಗಳು ಮಹಿಳೆಯರನ್ನು ಆರ್ಥಿಕವಾಗಿ ಸದೃಢದನ್ನಾಗಿಸಲು ಶ್ರಮಿಸಬೇಕಿವೆ.

ತರಭೇತಿ:- ಮಹಿಳೆಯರಿಗೆ ಸ್ವ ಉದ್ಯೋಗವನ್ನು ಪ್ರಾರಂಭಿಸಲು ಬೇಕಾದ ಕೌಶಲ್ಯ ಇಲ್ಲ. ಹಾಗಾಗಿ ಉದ್ಯಮವನ್ನು ಕೈಗೊಳ್ಳಲು ಮಹಿಳೆಯರಿಗೆ ಅದರಲ್ಲೂ ಗ್ರಾಮೀಣ ಮಹಿಳೆಯರಿಗೆ ತರಭೇತಿಯ ಅವಶ್ಯಕತೆಯಿದೆ. ತರಭೇತಿಯನ್ನು ಈ ರೀತಿ ವ್ಯಾಖ್ಯಾನಿಸಬಹುದು.

ಹೊಸ ಕೌಶಲ್ಯಗಳಲ್ಲಿ, ಹೊಸ ಪ್ರವೃತ್ತಿಗಳಲ್ಲಿ ಎಲಾ ಮಟ್ಟದಲ್ಲೂ ಜನರಿಗೆ ವ್ಯವಸ್ಥಿತವಾದ ಸೂಚನೆಗಳನ್ನು ನೀಡುವುದು. ತರಭೇತಿಯ ಮುಖ್ಯ ಉದ್ದೇಶಗಳು ಈ ಕೆಳಗಿನಂತಿವೆ.

೧. ಮೂಲ ಜ್ಞಾನವನ್ನು ಒದಗಿಸುವುದು.

೨. ಅವಶ್ಯ ಕೌಶಲವನ್ನು ಒದಗಿಸುವುದು.

೩. ದೃಷ್ಟಿಕೋನವನ್ನು ಬದಲಾಯಿಸುವುದು.

೪. ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಲು ನೆರವಾಗುವುದು.

೫. ಮಾರಾಟ ಕೌಶಲವನ್ನು ತಿಳಿಸುವುದು.

ತರಭೇತಿಯು ಮಹಿಳೆಯರಿಗೆ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಲು ನೆರವಾಗುತ್ತದೆ. ಇದು ಮಹಿಳೆಯರು ಯೋಗ್ಯ ಚಟುವಟಿಕೆಗಳನ್ನು ಕೈಗೊಳ್ಳಲು ವಿಶ್ವಾಸ ಮತ್ತು ಅಧಿಕಾರವನ್ನು ಒದಗಿಸುತ್ತದೆ. ಮಾರುಕಟ್ಟೆ ಅಧ್ಯಯನ ಮಾಡುವ ಸ್ವಾಮರ್ಥ್ಯವನ್ನು ಹೆಚ್ಚಿಸುತ್ತದೆ, ನಿರ್ವಹಣಾ ಕೌಶಲ್ಯವನ್ನು ಬೆಳೆಸಲು ಸಹಾಯ ಮಾಡುತ್ತದೆ.

ದೇಶದ ಸಾರ್ವಜನಿಕ ರಂಗದ ಬ್ಯಾಂಕುಗಳಲ್ಲೊಂದಾದ ಸಿಂಡಿಕೇಟ್ ಬ್ಯಾಂಕ್, ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಒಂದು ಪ್ರತಿಷ್ಠಿತ ಬ್ಯಾಂಕ್. ಉಡುಪಿ ಜಿಲ್ಲೆಯ ಮಣಿಪಾಲ ನಗರದಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಈ ಬ್ಯಾಂಕ್, ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟದೆ. ಇದು ಕರಾವಳಿ ಭಾಗದ ಜನತೆಗೆ ಒಂದು ಹೆಮ್ಮೆಯ ವಿಚಾರ. ಕರಾವಳಿ ಪ್ರದೇಶದಲ್ಲಿ ಹುಟ್ಟಿ, ದೇಶದಾದ್ಯಂತ ಶಾಖೆಗಳನ್ನು ಹೊಂದಿ ಕಾರ್ಯ ನಿರ್ವಹಿಸುತ್ತಿರುವ ಬ್ಯಾಂಕ್ ದೇಶದಅಗ್ರಬ್ಯಾಂಕುಗಳಲ್ಲೊಂದಾಗಿದೆ. ಸಮರ್ಥ ಆಡಳಿತದೊಂದಿಗೆ ನಡೆಸಲ್ಪಡುತ್ತಿರುವ ಬ್ಯಾಂಕು ಇಂದು ತನ್ನ ಚಟುವಟಿಕೆಗಳನ್ನು ಬ್ಯಾಂಕೇತರ ವಿಷಯಗಳಿಗೂ ವಿಸ್ತರಿಸಿರುವುದು ಸಂತಸದ ಸಂಗತಿ. ಭಾರತದ ಅಭಿವೃದ್ಧಿಯು ಗ್ರಾಮಗಳ ಉದ್ಧಾರದಲ್ಲಿ ಅಡಗಿದೆ ಎಂಬುದು ಸಾರ್ವಕಾಲಿಕ ಸತ್ಯ. ಏಕೆಂದರೆ ಶೇ.೭೦ ಕ್ಕಿಂತಲೂ ಅಧಿಕ ಜನರು ಗ್ರಾಮೀನ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಹೀಗಿರುವಾಗ ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ಅರಿತ ಬ್ಯಾಂಕ್ ಗ್ರಾಮೀಣಾಭಿವೃದ್ಧಿಯ ಮಹತ್ಕಾರ್ಯಕ್ಕೆ ಕೈಹಾಕಿದೆ. ಈ ಮಹತ್ಕಾರ್ಯವನ್ನು ಸಾಧಿಸಲು ಬ್ಯಾಂಕ್ ತನ್ನದೇ ಆದ ಟ್ರಸ್ಟನ್ನು ಸ್ಥಾಪಿಸುವುದರ ಮೂಲಕ ಹಳ್ಳಿಗಳ ಏಳಿಗೆಗೆ ಪಣ ತೊಟ್ಟಿದೆ. ಸರಕಾರದ ಯೋಜನೆಗಳು ನಿರುದ್ಯೋಗ, ಬಡತನ ಮುಂತಾದ ಸಮಸ್ಯೆಗಳನ್ನು ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶದ ಸಮಸ್ಯೆಗಳನ್ನು ಪರಿಹರಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆಯಾದರೂ ಸರಕಾರೇತರ ಸಂಘ ಸಂಸ್ಥೆಗಳ ಕ್ರಿಯಾತ್ಮಕ ಭಾಗವಹಿಸುವಿಕೆ ಇಂದಿನ ದಿನಗಳಲ್ಲಿ ಅತೀ ಮುಖ್ಯವೆನಿಸಿದೆ. ಇಂದು ಸರಕಾರೇತರ ಸಂಘ ಸಂಸ್ಥೆಗಳು ಇಂತಹ ಸಮಸ್ಯೆಗಳನ್ನು ನಿವಾರಿಸುವಲ್ಲಿ, ತನ್ನ ಕಾರ್ಯಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಯಶಸ್ಸನ್ನು ಕಾಣುತ್ತಿವೆ.

೪.೨ ಸಂಸ್ಥೆಯ ಧ್ಯೇಯೋದ್ದೇಶಗಳು ಮತ್ತು ಕಾರ್ಯಗಳು

ಬಡತನ ಮತ್ತು ನಿರುದ್ಯೋಗವೆಂಬ ಅವಳಿ ಸಮಸ್ಯೆಗಳು ರಾಷ್ಟ್ರವೊಂದರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಮೇಲೆ ತೀವ್ರ ಪ್ರಭಾವವನ್ನು ಬೀರುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ಈ ಸಮಸ್ಯೆಗಳು ಗಾಢವಾಗಿ ಬೇರೂರಿವೆ. ಇದರಿಂದಾಗಿ ಗ್ರಾಮೀನ ಪ್ರದೇಶದ ಜನರು ನಗರಗಳಿಗೆ ವಲಸೆ ಹೋಗುವುದು ಸಾಮಾನ್ಯವಾಗಿಬಿಟ್ಟಿದೆ. ವಲಸೆಯ ಪರಿಣಾಮದಿಂದಾಗಿ ನಗರ ಪ್ರದೇಶಗಳಲ್ಲಿ ಮೂಲಸೌಕರ್ಯಗಳ ಬಳಕೆ ಹೆಚ್ಚಾಗುತ್ತಿದ್ದು, ಅವುಗಳ ಮೇಲಿನ ಒತ್ತಡ ಹೆಚ್ಚಿದೆ. ಇನ್ನೊಂದೆಡೆ ಗ್ರಾಮೀಣ ಪ್ರದೇಶಗಳಲ್ಲಿ ವಿಫುಲವಾಗಿ ದೊರಕುವ ಸಂಪನ್ಮೂಲಗಳು ವ್ಯರ್ಥವಾಗುತ್ತಿವೆ. ಸಮಸ್ಯೆಯ ಈ ಸಂಕೀರ್ಣತೆಯು ಖಾಸಗಿ ವಲಯದ ಭಾಗವಹಿಸುವಿಕೆಯೊಂದಿಗೆ ಬಹು ಆಯಾಮವನ್ನು ಹೊಂದಿರುವ ಅಭಿವೃದ್ಧಿ ಕಾರ್ಯ ತಂತ್ರಗಳ ಅಗತ್ಯತೆಯನ್ನು ಒತ್ತಿ ಹೇಳುತ್ತದೆ. ಸರ್ಕಾರ ಜಾರಿಗೊಳಿಸುವ ಕಾರ್ಯಕ್ರಮಗಳು ಮಾತ್ರವೇ ಈ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಸರಕಾರದೊಂದಿಗೆ ಖಾಸಗಿ ಅಥವಾ ಸರಕಾರೇತರ ಸಂಸ್ಥೆಗಳು

ಕೈಜೋಡಿಸಬೇಕಾದ ಅನಿವಾರ್ಯತೆ ಇದೆ. ಇಂತಹ ಪರಿಸ್ಥಿತಿಯಲ್ಲಿ ನಗರಗಳಿಗೆ ಗ್ರಾಮೀಣ ಜನತೆ ವಲಸೆ ಹೊಗುವುದನ್ನು ತಡೆಯಲು ಹಳ್ಳಿಗಳಲ್ಲಿ ಸಾಕಷ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿಸಬೇಕಿದೆ. ಉದ್ಯೋಗಾವಕಾಶಗಳ ಸೃಷ್ಟಿ ಹಳ್ಳಿಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ದಕ್ಷವಾಗಿ ಬಳಸಿಕೊಳ್ಳಲು ನೆರವಾಗುತ್ತದೆ.

ಇದರೊಂದಿಗೆ ಜನರ ಆರ್ಥಿಕ ಸ್ಥಿತಿಗತಿಯು ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ. ಇಂತಹ ವಾತವರಣವನ್ನು ನಿರ್ಮಾಣ ಮಾಡುವುದು ಇಂದಿನ ಅಗತ್ಯ. ಅಲ್ಲದೆ ಇದಕ್ಕಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಿದೆ. ಮೇಲಿನ ವಿಷಯವು ಬಹು ಮುಖ್ಯವಾಗಿ ನಿರುದ್ಯೋಗಿ ಯುವಜನರಲ್ಲಿ ಉದ್ಯಮಶೀಲತೆಯನ್ನು ಮತ್ತು ಸ್ವ ಉದ್ಯೋಗವನ್ನು ಪ್ರೋತ್ಸಾಹಿಸುವ ಅನಿವಾರ್ಯತೆಯನ್ನು ಸೂಚಿಸುತ್ತದೆ. ಇದಕ್ಕಾಗಿ ವಿಶೇಷವಾಗಿ ಸಮಾಜದ ದುರ್ಬಲ ವರ್ಗದವರು ಮತ್ತು ಮಹಿಳೆಯರಿಗೆ ಅಗತ್ಯ ತರಭೇತಿಯನ್ನು ನೀಡಿ, ಅವರನ್ನು ಬಲಪಡಿಸಬಹುದು ಎನ್ನುವುದು ಕಂಡುಕೊಂಡ ವಿಚಾರವಾಗಿದೆ. ಅವರಿಗೆ ಉತ್ತಮ ಮಾರ್ಗದರ್ಶನ ನೀಡಿದ್ದೇ ಆದಲ್ಲಿ ಅವರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಸಾಧ್ಯ. ಸಮರ್ಪಕ ತರಭೇತಿ ಅವರಲ್ಲಿ ಉತ್ತಮ ಮನೋಭಾವ, ಕೌಶಲ್ಯ ಮತ್ತು ಜ್ಞಾನದಲ್ಲಿ ಬದಲಾವಣೆ ತರುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಜನರ ಜೀವನಶೈಲಿಯಲ್ಲಿ ಬದಲಾವಣೆ ತರಲು ಮಾನಸಿಕ ಸ್ಥಿತಿಯನ್ನು ಬದಲಾಯಿಸದ ಹೊರತು ಹಣಕಾಸಿನ ನೆರವು ನೀಡುವ, ಸಹಾಯಧನದಂತಹ ಸರಕಾರದ ಯೋಜನೆಗಳು ಯಶಸ್ವಿಯಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ದೇಶದ ಪ್ರತಿಷ್ಠಿತ ಬ್ಯಾಂಕುಗಳಲ್ಲಿ ಒಂದಾದ ಸಿಂಡಿಕೇಟ್ ಬ್ಯಾಂಕ್ ತನ್ನ ೭೫ನೇ ವರ್ಷವನ್ನು ಆಚರಿಸುವ ಸಂದರ್ಭದಲ್ಲಿ ಅಕ್ಟೋಬರ್ ೨, ೨೦೦೦ ದಂದು ಸಿಂಡಿಕೇಟ್ ಗ್ರಾಮೀಣ ಅಭಿವೃದ್ಧಿ ಟ್ರಸ್ಟ್ ಅನ್ನು ಸ್ಥಾಪಿಸಿತು.

ಸಿಂಡಿಕೇಟ್ ಗ್ರಾಮೀಣ ಅಭಿವೃದ್ಧಿ ಟ್ರಸ್ಟ್ ಲಾಭದ ಅಪೇಕ್ಷೆಯಿಲ್ಲದ ಚ್ಯಾರಿಟೇಬಲ್ ಟ್ರಸ್ಟ್ ಒಂದು. ಸಣ್ಣ ಉದ್ದಿಮೆಗಳ ಅಭಿವೃದ್ಧಿ ಮುಂತಾದ ಹಲವಾರು ಉಪಕ್ರಮಗಳ ಮೂಲಕ ಗ್ರಾಮೀಣಾಭಿವೃದ್ಧಿ ಈ ಟ್ರಸ್ಟ್‌ನ ಪ್ರಮುಖ ಉದ್ದೇಶ.

ನಿರುದ್ಯೋಗ ಸಮಸ್ಯೆ ದೇಶದಲ್ಲಿಂದು ಏರುಗತಿಯಲ್ಲಿರುವಾಗ ಉದ್ಯಮಶೀಲತೆಯನ್ನು ಅಭಿವೃದ್ಧಿ ಪಡಿಸುವುದು ಭಾರೀ ಮಹತ್ವವನ್ನು ಪಡೆದಿದೆ. ಹೆಚ್ಚಿನ ಸಂಖ್ಯೆಯ ಅನಕ್ಷರಸ್ಥ ಮತ್ತು ವಿದ್ಯಾವಂತ ಯುವ ಜನರು ಸರಿಯಾದ ಮಾರ್ಗದರ್ಶನ, ಬೆಂಬಲ ಇಲ್ಲದೆ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಕಷ್ಟ ಪಡುತ್ತಿದ್ದಾರೆ. ಅಲ್ಲದೆ ದೇಶದ ಅಭಿವೃದ್ಧಿಯು ಮಾನವ ಸಂಪನ್ಮೂಲವನ್ನು ಅವಲಂಬಿಸಿರುವುದರಿಂದ ಮಾನವ ಸಂಪನ್ಮೂಲದ ಪೂರ್ಣ ಪ್ರಮಾಣದ ಮತ್ತು ದಕ್ಷ ಬಳಕೆ ಆಗಬೇಕಿದೆ. ಇಂತಹ ಪರಿಸ್ಥಿತಿಯಲ್ಲಿ

ನಿರುದ್ಯೋಗಿ ಯುವಜನತೆಗೆ ಬೇಕಾದ ಸರಿಯಾದ ಮಾರ್ಗದರ್ಶನದ ಅಗತ್ಯವಿದೆ. ಈ ನಿಟ್ಟಿನಲ್ಲಿ ಮಾರ್ಗದರ್ಶನವನ್ನು ನೀಡುವ ಸಂಘ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಅಸ್ತಿತ್ವಕ್ಕೆ ಬರಬೇಕಾದ ಅವಶ್ಯಕತೆಯಿದೆ.

ಸಿಂಡಿಕೇಟ್ ಗ್ರಾಮೀಣ ಅಭಿವೃದ್ಧಿ ಟ್ರಸ್ಟ್ (ಎಸ್.ಆರ್.ಡಿ.ಟಿ.) ನಿರುದ್ಯೋಗಿ ಯುವಜನರಿಗೆ ಸ್ವ ಉದ್ಯೋಗವನ್ನು ಕೈಗೊಳ್ಳಲು ಮತ್ತು ಉದ್ಯಮಶೀಲತೆಯನ್ನು ಅಭಿವೃದ್ಧಿ ಪಡಿಸಲು ಬೇಕಾಗುವ ಕೌಶಲ್ಯ ಮತ್ತು ಜ್ಞಾನವನ್ನು ಒದಗಿಸುವ ಪ್ರಮುಖ ಗುರಿಯನ್ನು ಹೊಂದಿದೆ. ಮಾತ್ರವಲ್ಲದೆ ನಿರುದ್ಯೋಗಿ ಯುವಜನತೆಯು ಸ್ವಂತ ಉದ್ದಿಮೆಗಳನ್ನು ಸ್ಥಾಪಿಸಿ ಆ ಮೂಲಕ ಸೂಕ್ತ ಮಾರ್ಗದರ್ಶನ ಮತ್ತು ಬೆಂಬಲವನ್ನು ನೀಡುವ ವ್ಯವಸ್ಥೆಯನ್ನು ಕಲ್ಪಿಸಿದೆ. ಉದ್ಯಮಶೀಲತೆ ಮತ್ತು ಆರ್ಥಿಕ ಬೆಳವಣಿಗೆಯ ನಡುವೆ ಸಂಬಂಧ ದೇಶದ ಪ್ರಗತಿಗೆ ಪೂರಕವಾಗಿದೆ. ಆದರೆ ಸಾಮಾಜಿಕ ಬಂಡವಾಳ ಉದ್ಯಮಶೀಲತೆಗೆ ಅತೀ ಮುಖ್ಯ. ಸಾಮಾಜಿಕ ಬಂಡವಾಳ ಅಂದರೆ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವುದು ಈ ಟ್ರಸ್ಟ್ ನ ಮೂಲ ಉದ್ದೇಶ.

ತನ್ನ ಉದ್ದೇಶಗಳನ್ನು ಕಾರ್ಯಗತಗೊಳಿಸುವುದರ ಜೊತೆಗೆ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನುಷ್ಠಾನ ಮಾಡಲ್ಪಟ್ಟಿರುವ ಸ್ವ ಉದ್ಯೋಗ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಜವಾಬ್ದಾರಿಯನ್ನೂ ಹೊಂದಿದೆ. ಇದರೊಂದಿಗೆ ಸ್ವ ಸಹಾಯ ಸಂಘಗಳ ಅಭಿವೃದ್ಧಿಗೆ ನೆರವಾಗುವ ಸಂಪನ್ಮೂಲ ಸಂಘವಾಗಿಯೂ ಕೆಲಸ ಮಾಡುತ್ತಿರುವುದು ಅಭಿವೃದ್ಧಿಯ ಬಗೆಗಿನ ವಿಶೇಷ ಕಾಳಜಿಯನ್ನು ತಿಳಿಸುತ್ತದೆ.

ಸಮಗ್ರ ಗ್ರಾಮೀಣಾಭಿವೃದ್ಧಿಗೆ ಬೇಕಾಗಿರುವ ಸಣ್ಣ ಉದ್ದಿಮೆಗಳು, ಅಸಾಂಪ್ರದಾಯಿಕ ಇಂಧನ ಮೂಲಗಳು ಸಮರ್ಪಕ ತಂತ್ರಜ್ಞಾನ ಮತ್ತು ಇನ್ನಿತರ ವಿಷಯಗಳಲ್ಲಿ ಸಂಶೋಧನೆಗಳನ್ನು ಕೈಗೊಂಡು ಮಹತ್ಕಾರ್ಯವನ್ನು ಈ ಟ್ರಸ್ಟ್ ಕೈಗೊಳ್ಳುತ್ತಿದೆ.

ತನ್ನ ಧ್ಯೇಯೋದ್ದೇಶಗಳನ್ನು ಈಡೇರಿಸಲು ಟ್ರಸ್ಟ್ ಭಾರತದಾದ್ಯಂತ ಬೇರೆ ಬೇರೆ ರಾಜ್ಯಗಳಲ್ಲಿ ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆಗಳನ್ನು ಸ್ಥಾಪಿಸಿದೆ. ಮೊದಲ ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ ಅಕ್ಟೋಬರ್ ೨, ೨೦೦೦ ದಂದು ತನ್ನ ಕಾರ್ಯವನ್ನು ಪ್ರಾರಂಭಿಸಿತು. ಪ್ರಸ್ತುತ ಕರ್ನಾಟಕದಲ್ಲಿ ನಾಲ್ಕು, ಆಂಧ್ರಪ್ರದೇಶದಲ್ಲಿ ಎರಡು, ಕೇರಳದಲ್ಲಿ ಒಂದು, ಉತ್ತರ ಪ್ರದೇಶದಲ್ಲಿ ಎರಡು, ಮತ್ತು ಹರಿಯಾಣದಲ್ಲಿ ಒಂದು, ಹೀಗೆ ಒಟ್ಟು ೧೦ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆಗಳು, ಉದ್ಯಮಶೀಲತೆ ತರಬೇತಿಯನ್ನು ನೀಡಲು ಶ್ರಮಿಸುತ್ತಿವೆ.

ಯಾವುದೇ ಉದ್ಯಮವನ್ನು ಪ್ರಾರಂಭಿಸಬೇಕಾದರೆ ಹಣವು ಮುಖ್ಯ. ಆದರೆ ಹಣವೊಂದೇ ಮುಖ್ಯ

ಅಂಶವಲ್ಲ. ಅದರೊಂದಿಗೆ ಸ್ವ ಉದ್ಯೋಗ ನಡೆಸಲು ಬೇಕಾಗುವ ಜ್ಞಾನ, ಉದ್ಯಮಶೀಲತಾ ಲಕ್ಷಣಗಳನ್ನು ಹೊಂದಬೇಕಾಗುತ್ತದೆ. ಈ ನಿಟ್ಟಿನಲ್ಲಿ ಈ ಸಂಸ್ಥೆಗಳು ಕಾರ್ಯಪ್ರವೃತವಾಗಿವೆ. ಅನುಪಚಾರಿಕ ಶಿಕ್ಷಣ, ಸಣ್ಣ ಉದ್ದಿಮೆಗಳ ಉತ್ತೇಜನ ಮತ್ತು ಸಂಶೋಧನೆಯ ಮೂಲಕ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ಜನರನ್ನು ಸಶಕ್ತರನ್ನಾಗಿ ಮಾಡುವುದು ಟ್ರಸ್ಟ್ ನ ಮಹದೊದ್ದೇಶವಾಗಿದೆ.

ಉದ್ದೇಶಗಳು

೧. ತರಭೇತಿ ಮತ್ತು ಸಮಾಲೋಚನೆಯ ಮೂಲಕ ಉದ್ಯಮಶೀಲತೆಯನ್ನು ಅಭಿವೃದ್ಧಿ ಪಡಿಸುವುದು.

೨. ಸಮಾಜದ ದುರ್ಬಲ ವರ್ಗದವರಿಗೆ ಮತ್ತು ಮಹಿಳೆಯರಿಗೆ ಕಿರು ಸಾಲವನ್ನು ಒದಗಿಸುವುದು.

೩. ಸ್ವ ಸಹಾಯ ಗುಂಪುಗಳ ಅಭಿವೃದ್ಧಿ.

೪. ಸರಕಾರದ ಮತ್ತು ಬ್ಯಾಂಕುಗಳ ಬಡತನ ನಿರ್ಮೂಲನ ಮತ್ತು ಸ್ವ ಉದ್ಯೋಗ ಯೋಜನೆಗಳ ಪರಿಣಾಮಾತ್ಮಕತೆಯನ್ನು ಹೆಚ್ಚಿಸುವುದು.

೫. ಸಣ್ಣ ಉದ್ದಿಮೆಗಳ ಅಭಿವೃದ್ಧಿಯಲ್ಲಿ ಸಂಶೋಧನೆಯನ್ನು ಕೈಗೊಳ್ಳುವುದು.

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತೆ ಅಭಿವೃದ್ಧಿ ಸಂಸ್ಥೆಗಳು ಕಾರ್ಯಗಳನ್ನು ಎಸ್.ಆರ್.ಡಿ.ಟಿಯು ರೂಪಿಸಿದ ನೀತಿ ನಿಯಮಗಳಂತೆ ನಡೆಯುತ್ತದೆ. ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವ ಜನತೆ ಈ ಟ್ರಸ್ಟ್ ನ ಮುಖ್ಯ ಲಕ್ಷ್ಯ.

ಸಾಂಸ್ಥಿಕ ಸಂರಚನೆ

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಟ್ರಸ್ಟ್ ರೂಪಿಸಿರುವ ಸ್ಥೂಲವಾದ ಧೋರಣೆಯ ಚೌಕಟ್ಟಿನೊಳಗೆ ಎಸ್.ಐ.ಆರ್.ಡಿ ಕಾರ್ಯವೆಸಗುತ್ತದೆ. ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷರು ಹಾಗೂ ನಿರ್ವಾಹಕ ನಿರ್ದೇಶಕರು ಎಸ್.ಆರ್.ಡಿ.ಟಿಯ ಮೊಕ್ತೇಸರ ಮಂಡಳಿಯ ಮುಖ್ಯಸ್ಥರಾಗಿರುತ್ತಾರೆ ಅಲ್ಲದೆ ಪ್ರಸ್ತುತ ಧರ್ಮದರ್ಶಿ ಮಂಡಳಿಯಲ್ಲಿ ಪ್ರಸಿದ್ಧ ಬ್ಯಾಂಕರುಗಳು ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ಅನುಭವ ಸಂಪನ್ನರಾದ ವ್ಯಕ್ತಿಗಳಿರುತ್ತಾರೆ. ಪ್ರತಿಯೊಂದು ಎಸ್.ಆರ್.ಡಿ.ಟಿ ಮಾರ್ಗದರ್ಶನ ನೀಡಲು ಒಂದು ಸ್ಥಳೀಯ ಸಲಹಾ ಸಮಿತಿ(ಎಲ್ ಎ ಸಿ) ಇರುತ್ತದೆ. ಮೇಲೆ ಕಾಣಿಸಿರುವ ಗುರಿಗಳಿಗೆ ಸಂಗತವಾದ, ಸ್ಥಳೀಯ ಅವಶ್ಯಕತೆಗಳಿಗೆ ಸ್ಪಂದಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಈ ಸಮಿತಿಯು ಮಾರ್ಗದರ್ಶನ ನೀಡುತ್ತದೆ. ಗ್ರಾಮೀಣ ಅಭಿವೃದ್ಧಿಯಲ್ಲಿ ಅನುಭವ ಹೊಂದಿರುವ ಒಬ್ಬರು ನಿರ್ದೇಶಕರು ಮತ್ತು ಒಬ್ಬರು ಸಹನಿರ್ದೇಶಕರು

ಎಸ್.ಐ.ಆರ್.ಡಿಯ ಆಡಳಿತವನ್ನು ನೋಡಿಕೊಳ್ಳುತ್ತಾರೆ.

ಉದ್ದೇಶಿತ ವರ್ಗಗಳು

ಜಾತಿ, ಮತ, ವರ್ಗ, ಶೈಕ್ಷಣಿಕಮಟ್ಟ, ವೈವಾಹಿಕ ಅಂತಸ್ತಿನ ಭೇದವಿಲ್ಲದೆ ನಿರುದ್ಯೋಗಿ ಯುವಕ ಯುವತಿಯರು ಹಾಗೂ ಹೆಚ್ಚು ಹಣವಂತರಲ್ಲದ ಗ್ರಾಮೀಣ ಜನರು ಎಸ್.ಐ.ಆರ್.ಡಿ ಯ ಎಲ್ಲಾ ಚಟುವಟಿಕೆಗಳ ಕೇಂದ್ರ ಬಿಂದುವಾಗಿದ್ದಾರೆ. ಹೀಗಿದ್ದರೂ ಆಯಾ ಕಾರ್ಯಕ್ಷೇತ್ರದ ಅಗತ್ಯಗಳು ಮತ್ತು ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಂದು ಸಂಸ್ಥೆಯು ಆಯ್ದ ಕೆಲವು ನಿರ್ದಿಷ್ಟ ವರ್ಗಗಳನ್ನು ಕೇಂದ್ರವಾಗಿಸಿಕೊಳ್ಳಬಹುದು.

ಕಾರ್ಯಕ್ರಮಗಳು

೧. ಸ್ವ ಉದ್ಯೋಗ ಅಭಿವೃದ್ಧಿ ಕಾರ್ಯಕ್ರಮಗಳು

* ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳು

* ಸ್ವ ಸಹಾಯ ಗುಂಪು ಕಾರ್ಯಕ್ರಮಗಳು

೨.ಸರಕಾರ ಪ್ರಾಯೋಜಿತ ಕಾರ್ಯಕ್ರಮಗಳು

೩. ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮಗಳು

* ಗ್ರಾಮೀಣಾಭಿವೃದ್ಧಿ ಮತ್ತು ತಂತ್ರಜ್ಞಾನ ವರ್ಗಾವಣೆ ಕಾರ್ಯಕ್ರಮಗಳು

* ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮಗಳು

೪ ಅರಿವು ಕಾರ್ಯಕ್ರಮಗಳು

* ಉದ್ಯಮಶೀಲತಾ ಅರಿವು ಕಾರ್ಯಕ್ರಮಗಳು

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆಗಳ ವ್ಯಾಪ್ತಿ

ಕರ್ನಾಟಕದಲ್ಲಿ ಮಣಿಪಾಲ, ಕುಮಟ, ಬೆಳಗಾಂ, ಬಳ್ಳಾರಿ ಒಟ್ಟು ನಾಲ್ಕು, ಉತ್ತರ ಪ್ರದೇಶದಲ್ಲಿ ಮೊರದಾಬಾದ್ ಮತ್ತು ಮೀರತ್ ಗಳಲ್ಲಿ ಒಟ್ಟು ಎರಡು, ಕುರ್ನೂಲ್ ಮತ್ತು ಕಡಪ ಗಳಲ್ಲಿ ಒಟ್ಟು ಎರಡು, ಕೇರಳದ ಕೊಟ್ಟಿಯಂನಲ್ಲಿ ಒಂದು, ಹರಿಯಾಣದ ನೂಹ್ ಮತ್ತು ಮೇವತ್‌ಗಳಲ್ಲಿ ಒಟ್ಟು ಎರಡು, ಹೀಗೆ ಒಟ್ಟು ೧೦ ಸಂಸ್ಥೆಗಳು ಈ ಟ್ರಸ್ಟ್ ನ ಉದ್ದೇಶವನ್ನು ಈಡೇರಿಸಲು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ

ಮೀರತ್ ಮತ್ತು ನೂಹ್ ಗಳಲ್ಲಿ ಪ್ರಸಕ್ತ ಹಣಕಾಸಿನ ವರ್ಷದಲ್ಲಿ ಈ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ಈ ಸಂಸ್ಥೆಗಳ ಕಾರ್ಯ ವ್ಯಾಪ್ತಿ ಕೆಳಗಿನಂತಿವೆ.

ಉಚಿತ ಸ್ವ ಉದ್ಯೋಗ ತರಬೇತಿ ಸಂಸ್ಥೆಗಳು

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ, ಮಣಿಪಾಲ (ಕರ್ನಾಟಕ)

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ, ಕುಮಟ (ಕರ್ನಾಟಕ)

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ, ಬೆಳಗಾವಿ (ಕರ್ನಾಟಕ)

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ, ಬಳ್ಳಾರಿ (ಕರ್ನಾಟಕ)

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ, ಮೊರದಬಾದ್ (ಉ.ಪ್ರ)

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ, ಮೀರತ್ (ಉ.ಪ್ರ)

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ, ಕಡಪ (ಆಂಧ್ರ)

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ, ಕುರ್ನೂಲ್ (ಆಂಧ್ರ)

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ, ಕೊಟ್ಟಿಯುವಮ್ (ಕೇರಳ)

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ, ನೋವ್ (ಹರಿಯಾಣ)

ಕೋಷ್ಟಕ ಸಂಖ್ಯೆ ೪.೧

ಕ್ರ.ಸಂ	ಸಂಸ್ಥೆಯ ಹೆಸರು	ಕಾರ್ಯ ವ್ಯಾಪ್ತಿ-ಜಿಲ್ಲೆಗಳು
೧	ಮಣಿಪಾಲ	ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ
೨	ಕುಮಟ	ಉತ್ತರ ಕನ್ನಡ
೩	ಬೆಳಗಾಂ	ಬೆಳಗಾಂ
೪.	ಬಳ್ಳಾರಿ	ಬಳ್ಳಾರಿ, ರಾಯಚೂರು, ಕೊಪ್ಪಳ ಮತ್ತು ದಾವಣಗೆರೆ
೫.	ಮೊರದಾಬಾದ್	ಮೊರದಾಬಾದ್ ಜ್ಯೋತಿ ಬಾ ಫುಲೆ ನಗರ ಮತ್ತು ರಾಮಪುರ
೬.	ಕುರ್ನೂಲ್	ಕುರ್ನೂಲ್
೭	ಕಡಪ	ಕಡಪ, ನೆಲ್ಲೂರು ಮತ್ತು ಚಿತ್ತೂರು
೮.	ಕೊಟ್ಟಿಯಂ	ಕೊಲ್ಲಮ್
೯	ಮೀರತ್	ಮೀರತ್ ಮತ್ತು ಬಾಗ್ ಪತ್
೧೦	ನೂಹ್	ಮೇವತ್

ವಿಶೇಷತೆಗಳು

* ಸ್ವ -ಉದ್ಯೋಗಾಕಾಂಕ್ಷಿ ಯುವಕ ಯುವತಿಯರಿಗೆ ಸ್ವ-ಉದ್ಯಮ ಕೈಗೊಂಡು ಸ್ವಾವಲಂಬಿಗಳಾಗಲು ಪ್ರೇರಣೆ, ಕೌಶಲ್ಯ ಮತ್ತು ವ್ಯಾವಹಾರಿಕ ತರಭೇತಿ.
* ತರಭೇತಿಯ ನಂತರ ಸ್ವ ಉದ್ಯಮ ಸ್ಥಾಪಿಸಲು ಅಗತ್ಯವಿರುವ ಮಾರ್ಗದರ್ಶನ ಮತ್ತು ಬೆಂಬಲ ವ್ಯವಸ್ಥೆ.
* ಊಟ ಮತ್ತು ವಸತಿ ವ್ಯವಸ್ಥೆಯೊಂದಿಗೆ ತರಭೇತಿ ಸಂಪೂರ್ಣ ಉಚಿತ ನುರಿತ ಕೌಶಲ್ಯ ತರಭೇತಿದಾರರಿಂದ ಸ್ವ-ಉದ್ಯೋಗ ಪೂರಕ ತರಭೇತಿ.

ಸಂಸ್ಥೆಯ ತರಭೇತಿ ಕಾರ್ಯಕ್ರಮಗಳು

೧. ಕೃಷಿ ಮತ್ತು ತೋಟಗಾರಿಕೆ (೧೦ ದಿನಗಳು)

೨. ಹೈನುಗಾರಿಕೆ (೬ ದಿನಗಳು)

೩. ನರ್ಸರಿ ನಿರ್ವಹಣೆ (೬ ದಿನಗಳು)

೪. ಔಷಧೀಯ ಸಸ್ಯಗಳ ಕೃಷಿ (೬ ದಿನಗಳು)

೫. ಅಣಬೆ ಕೃಷಿ (೬ ದಿನಗಳು)

೬. ಜೇನು ಕೃಷಿ ಮತ್ತು ಜೇನುತುಪ್ಪ ಸಂಸ್ಕರಣೆ (೬ ದಿನಗಳು)

೭. ಉದ್ಯಮಶೀಲತಾ ಅಭಿವೃದ್ಧಿ ತರಭೇತಿ (ಸಣ್ಣ ಪ್ರಮಾಣದ ವ್ಯಾಪಾರ/ಸೇವೆ/ಕೈಗಾರಿಕೆ ನಿರ್ವಹಣೆ (೧೦ ದಿನಗಳು)

೮. ಗೃಹ ಬಳಕೆ ವಸ್ತುಗಳ ತಯಾರಿಕೆ (೬ದಿನಗಳು) (ಮೊಂಬತ್ತಿ ಫಿನಾಯಿಲ್ ಊದುಬತ್ತಿ ಸೋಪು ಕುಂಕುಮ ಅಗರ್ ಬತ್ತಿ ಇತ್ಯಾದಿ)

೯. ವಿವಿಧ ಆಹಾರ ಪದಾರ್ಥಗಳ ತಯಾರಿಕೆ (೧೦ ದಿನಗಳು)

೧೦. ಗೊಂಬೆ ತಯಾರಿಕೆ ಮತ್ತು ಗ್ಲಾಸ್ ಪೈಂಟಿಂಗ್ (೧೫ದಿನಗಳು)

೧೧. ಮಳೆ ಕೊಯ್ಲು (೬ ದಿನಗಳು)

೧೨. ಫೋಟೋಗ್ರಫಿ ಮತ್ತು ವಿಡಿಯೋಗ್ರಫಿ (೨೧ದಿನಗಳು)

೧೩. ವಿದ್ಯುತ್ ಗೃಹೋಪಕರಣಗಳ ದುರಸ್ತಿ/ಸರ್ವಿಸಿಂಗ್ (೩೦ ದಿನಗಳು)

೧೪. ಟಿ.ವಿ.,ರೇಡಿಯೊ ದುರಸ್ತಿ /ಸರ್ವಿಸಿಂಗ್ (೩೦ ದಿನಗಳು)

೧೫. ವಸ್ತ್ರ ವಿನ್ಯಾಸ ಮತ್ತು ಸಿದ್ಧ ಉಡುಪು ತಯಾರಿ (ಮಹಿಳೆಯರಿಗೆ)(೩೦ ದಿನಗಳು)

೧೬. ಎಂಬ್ರಾಯಡರಿ (ಕಸೂತಿ)

೧೭. ಫ್ಯಾಬ್ರಿಕ್ ಪೈಂಟಿಂಗ್ (೩೦ ದಿನಗಳು)

೧೮. ಮೋಟಾರ್ ರಿವೈಂಡಿಂಗ್ ಮತ್ತು ಪಂಪ್ ಸೆಟ್ ದುರಸ್ತಿ /ಸರ್ವಿಸಿಂಗ್(೩೦ ದಿನಗಳು)

೧೯. ಮೊಬೈಲ್ ಟೆಲಿಫೋನ್.ಫ್ಯಾಕ್ಸ್ ದುರಸ್ತಿ /ಸರ್ವಿಸಿಂಗ್(೩೦ ದಿನಗಳು)

೨೦. ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್ ದುರಸ್ತಿ/ಸರ್ವಿಸಿಂಗ್(೩೦ ದಿನಗಳು)

೨೧. ಸ್ವ ಸಹಾಯ ಗುಂಪು -ನಿರ್ವಹಣೆ ಕಾರ್ಯಕ್ರಮ-I (ರಚನಾ ಹಂತದಲ್ಲಿ)(೩ ದಿನಗಳು)

೨೨. ಸಹಾಯ ಗುಂಪು -ನಿರ್ವಹಣೆ ಕಾರ್ಯಕ್ರಮ-II (ಸಾಮರ್ಥ್ಯ ಹೆಚ್ಚಳ, ಲೆಕ್ಕ ಪತ್ರ, ಆಂತರಿಕ ಸಾಲ)(೩ ದಿನಗಳು)

೨೩. ಸ್ವ ಸಹಾಯ ಗುಂಪು -ನಿರ್ವಹಣೆ ಕಾರ್ಯಕ್ರಮ-III (ಕೌಶಲ್ಯಾಭಿವೃದ್ಧಿ)(೬ ದಿನಗಳು)

ಮಾನವ ಸಂಪನ್ಮೂಲ ಅಭಿವೃದ್ಧಿ ತರಭೇತಿ

೨೪. ಸರ್ಕಾರಿ, ಸರ್ಕಾರೇತರ, ಬ್ಯಾಂಕ್ ಅಧಿಕಾರಿಗಳಿಗೆ ವಿಷಯಾಧಾರಿತ ಅರಿವು ಮೂಡಿಸುವಲ್ಲಿ ತರಭೇತಿ.

೨೫. ಸ್ವ ಸಹಾಯ ಗುಂಪು ಹಾಗೂ ನಿರುದ್ಯೋಗಿ ಯುವಕ/ಯುವತಿಯರಿಗೆ ಸ್ವ ಉದ್ಯೋಗದ ಕುರಿತು ಮಾರ್ಗದರ್ಶನ

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ, ಮಣಿಪಾಲ

ಗ್ರಾಮೀಣ ಉದ್ಯಮಶೀಲತೆ ಮತ್ತು ಕಿರು ಉದ್ಯಮಕ್ಕೆ ಪ್ರೋತ್ಸಾಹ ನೀಡುವ ಒಂದು ಸಾಂಸ್ಥಿಕ ಪ್ರಯತ್ನ.ಇದು ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಟ್ರಸ್ಟ್, ಮಣಿಪಾಲ-೫೭೬೧೦೪ ಇವರ ಆಶ್ರಯದಲ್ಲಿ ಸ್ಥಾಪಿಸಲ್ಪಟ್ಟಿದೆ. ಪ್ರಾಯೋಜಕರು ದೇಶದ ಅಗ್ರ ಸಾರ್ವಜನಿಕ ಬ್ಯಾಂಕುಗಳಲ್ಲೊಂದಾದ ವಿಶ್ವಸನೀಯ ಮತ್ತು ಸಂವೇದನಾಶೀಲ ಸಿಂಡಿಕೇಟ್ ಬ್ಯಾಂಕ್ ಕರಾವಳಿ ಕರ್ನಾಟಕದಲ್ಲಿ ಹುಟ್ಟಿ ಬೆಳೆದ ಪ್ರತಿಷ್ಠಿತ ಬ್ಯಾಂಕ್ ಪ್ರಧಾನ ಕಛೇರಿಯನ್ನು ಮಣಿಪಾಲದಲ್ಲಿ ಹೊಂದಿರುವ ಬ್ಯಾಂಕ್ ದೇಶದಾದ್ಯಂತ ಶಾಖೆಗಳನ್ನು ಹೊಂದಿದೆ. ಮಾತ್ರವಲ್ಲದೆ ೨೦೦೦ದಿಂದೀಚೆಗೆ ರಾಷ್ಟ್ರದ ಅಭಿವೃದ್ಧಿಗಾಗಿ ಬ್ಯಾಂಕ್ ವ್ಯವಹಾರದೊಂದಿಗೆ ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ದೃಷ್ಟಿಯಿಂದ ೨೦೦೦ ಇಸವಿಯಲ್ಲಿ ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಟ್ರಸ್ಟ್ ಸ್ಥಾಪಿಸುವ ಮೂಲಕ ಹೊಸ ಇತಿಹಾಸವನ್ನು ಬರೆಯಿತು.

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ ಮಣಿಪಾಲವು ನಾಲ್ಕು ಜಿಲ್ಲೆಗಳನ್ನು ಒಳಗೊಂಡಿದೆ. ಅವೆಂದರೆ ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಶಿವಮೊಗ್ಗ.

ಬಡ ಜನರಿಗೆ ಅವರಲ್ಲೂ ವಿಶೇಷವಾಗಿ ದುರ್ಬಲ ವರ್ಗದವರಿಗೆ ಮತ್ತು ಮಹಿಳೆಯರಿಗೆ ಯೋಗ್ಯವಾದ ತರಬೇತಿ ನೀಡಿ ಸಹಾಯ ಹಸ್ತ ಚಾಚಿದರೆ ಅವರು ತಮ್ಮ ಬದುಕಿಗೆ ತಾವೇ ಭಾಗ್ಯ ಶಿಲ್ಪಿಗಳಾಗುವ ನಿಟ್ಟಿನಲ್ಲಿ ಶಕ್ತರಾಗಬಲ್ಲರೆಂಬುದು ಎಲ್ಲರೂ ಒಪ್ಪಿರುವ ಸಂಗತಿಯಾಗಿದೆ. ಸರಿಯಾದ ಪ್ರೇರಣೆ ಮತ್ತು ಮಾರ್ಗದರ್ಶನ ಮೂಲಕ ಅವರನ್ನು ಸಾಮಾಜಿಕ ಆರ್ಥಿಕ ವಿಮೋಚನೆಯ ಕಡೆಗೆ ಸ್ವಾವಲಂಬಿಗಳಾಗಿ ಹೆಜ್ಜೆ ಹಾಕುವಂತೆ ಮಾಡಲು ಸಾಧ್ಯ ಸಮರ್ಪಕವಾದ ತರಬೇತಿಯು ಅವರ ಮನೋಭಾವ, ಕೌಶಲ್ಯ ಮತ್ತು ತಿಳುವಳಿಕೆಗಳಲ್ಲಿ ಅಪೇಕ್ಷಣೀಯ ಪರಿವರ್ತನೆಗಳನ್ನು ಉಂಟುಮಾಡಬಲ್ಲದು. ಜೀವನ ವಿಧಾನದಲ್ಲಿ ಬದಲಾವಣೆಯ ನಿರ್ವಹಣೆಗೆ ಬೇಕಾದ ಮನಃ ಸ್ಥಿತಿ ಸಿದ್ಧವಾಗದೆ ಫಲಾನುಭವಿಗಳಿಗೆ ಹಣಕಾಸು ಒದಗಿಸುವ ಅಥವಾ ಸಹಾಯಧನ ನೀಡುವ ಯಾವುದೇ ಯೋಜನೆಯು ಯಶಸ್ವಿಯಾಗಲಾರದು.

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ, (ಎಸ್.ಐ.ಆರ್.ಡಿ) ಜಾತಿ, ಮತ, ಧರ್ಮ, ಶೈಕ್ಷಣಿಕ ಮಟ್ಟ ವರ್ಗಭೇದವಿಲ್ಲದೆ ಜನ ಸಾಮಾನ್ಯರಿಗೆ ಅಂತಹ ತರಬೇತಿ ಮತ್ತು ಸಹಾಯ ಹಸ್ತದ ಬೆಂಬಲ ನೀಡುತ್ತಿದೆ.

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಟ್ರಸ್ಟ್ (ಎಸ್.ಆರ್.ಡಿ.ಟಿ)ನಿಂದ ಸ್ಥಾಪಿಸಲ್ಪಟ್ಟ ಎಸ್.ಆರ್.ಡಿ.ಟಿಯು ಒಂದು ಸರಕಾರೇತರ ಸೇವಾ ಸಂಸ್ಥೆಯಾಗಿ ೨೦೦೦ದ ಇಸವಿಯ ಅಕ್ಟೋಬರ್ ೨ ರಂದು ತನ್ನ ಮಹತ್ಕಾರ್ಯವನ್ನು ಪ್ರಾರಂಭಿಸಿತು. ಎಸ್.ಆರ್.ಡಿ.ಟಿ ಎಂಬುದು ಗ್ರಾಮೀಣ ಪ್ರದೇಶಗಳಲ್ಲಿ ದೃಢವಾಗಿ ಬೇರೂರಿರುವ ಸಿಂಡಿಕೇಟ್ ಬ್ಯಾಂಕಿನಿಂದ ಸ್ಥಾಪಿಸಲ್ಪಟ್ಟಿರುವ ಒಂದು ಲಾಭೋದ್ದೇಶರಹಿತ ಚ್ಯಾರಿಟೇಬಲ್ ಟ್ರಸ್ಟ್. ತೀವ್ರ ಪ್ರಯತ್ನಗಳ ಮೂಲಕ ಸಮಗ್ರ ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸುವುದೇ ಇದರ ಹೆಗ್ಗುರಿ.

ಧ್ಯೇಯ

ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಮೂಲಕ ಗ್ರಾಮೀಣ ಜನರನ್ನು ಸಬಲಗೊಳಿಸುವುದು. ಕಿರು ಉದ್ದಿಮೆಗಳ ಅಭಿವೃದ್ಧಿಗೆ ಪ್ರೋತ್ಸಾಹ ಮತ್ತು ಸಂಶೋಧನೆ.

ಉದ್ದೇಶಗಳು

೧. ನಿರುದ್ಯೋಗಿ ಯುವ ಜನತೆ ವಿಶೇಷವಾಗಿ ಮಹಿಳೆಯರು ಮತ್ತು ದುರ್ಬಲ ವರ್ಗದವರನ್ನು ತರಬೇತಿ ಮತ್ತು ಸಮಾಲೋಚನೆಯ ಮೂಲಕ ಉದ್ಯಮಶೀಲರನ್ನಾಗಿಸುವುದು ಮತ್ತು ಬೆಂಬಲ ನೀಡುವುದು.

೨. ಕಿರು ಉದ್ದಿಮೆಗಳನ್ನು ಪ್ರೋತ್ಸಾಹಿಸುವುದು.

೩. ಸ್ವಸಹಾಯ ಸಂಘಗಳ ಅಭಿವೃದ್ಧಿಗಾಗಿ ನೆರವಿಗರನ್ನು ಮತ್ತು ಸಂಸ್ಥೆಗಳನ್ನು ರೂಢಿಸುವುದು.

೪. ಸರಕಾರದ ಮತ್ತು ಬ್ಯಾಂಕುಗಳ ಬಡತನ ನಿರ್ಮೂಲನ ಹಾಗೂ ಸ್ವ ಉದ್ಯೋಗ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಿಸಲು ಪೂರಕ ವಾತಾವರಣ ನಿರ್ಮಿಸುವುದು.

೫. ಕಿರು ಉದ್ಯಮಗಳ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಂಶೋಧನೆ ಕೈಗೊಳ್ಳುವುದು.

ಮಾರ್ಗೋಪಾಯಗಳು

ತರಬೇತಿ ಕಾರ್ಯಕ್ರಮಗಳನ್ನು ಎಸ್.ಐ.ಆರ್.ಡಿ ಯ ಆವರಣದಲ್ಲೇ ನಡೆಸಲಾಗುವುದು. ತರಬೇತಿಯ ಕಾಲಾವಧಿಯು ಒಂದು ವಾರದಿಂದ ಎಂಟು ವಾರ ಗಳಷ್ಟಿರುತ್ತದೆ. ತರಬೇತಿಯ ಕಾಲಾವಧಿಯಲ್ಲಿ ತರಬೇತಿ ಪಡೆಯುವವರಿಗೆ ಊಟ ಮತ್ತು ವಸತಿ ಸೌಕರ್ಯಗಳನ್ನು ಉಚಿತವಾಗಿ ಒದಗಿಸಲಾಗುತ್ತದೆ. ತರಬೇತಿ ಪಡೆಯುವವರ ವಾಸ ಸ್ಥಳದ ಸಮೀಪವೂ ತರಬೇತಿ ಕಾರ್ಯಕ್ರಮಗಳನ್ನು ಶಿಬಿರ ಕಾರ್ಯಕ್ರಮಗಳಾಗಿ ನಡೆಸಬಹುದಾಗಿದೆ. ಹೀಗೆ ಕ್ಯಾಂಪಸ್ ಕಾರ್ಯಕ್ರಮಗಳಿಗೆ ಬರಲು ಸಾಧ್ಯವಾಗದ ಮಹಿಳೆಯರಿಗೆ

ಎಸ್.ಐ.ಆರ್.ಡಿ ಯ ಸೇವೆಗಳನ್ನು ಲಭ್ಯವಿರುವಂತೆ ನೋಡಿಕೊಳ್ಳಲಾಗಿದೆ. ಇಂತಹ ಶಿಬಿರ ಕಾರ್ಯಕ್ರಮಗಳ ಕಾಲಾವಧಿ ೩ ರಿಂದ ೭ ದಿನಗಳಿಗಷ್ಟಕ್ಕೆ ಸೀಮಿತವಾಗಿರುತ್ತದೆ.

ಕಾರ್ಯಕ್ರಮಗಳು

ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು

ತರಭೇತಿ ಪಡೆಯುವ ವ್ಯಕ್ತಿ ವೈಯಕ್ತಿಕವಾಗಿ ಅಥವಾ ಇತರರೊಂದಿಗೆ ಸೇರಿ ಕಿರು ಉದ್ಯಮವನ್ನು ಪ್ರಾರಂಭಿಸಲು ಸಾಧ್ಯವಾಗುವಂತೆ ಆತನಲ್ಲಿ ಸ್ವ ಪ್ರೇರಣೆ ಸ್ಫುರಿಸುವಂತೆ ಮಾಡಿ ಆತನ ತಾಂತ್ರಿಕ ಮತ್ತು ಉದ್ಯಮ ಕೌಶಲ್ಯಗಳನ್ನು ವಿಕಸನಗೊಳಿಸಬಲ್ಲ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ತರಭೇತಿಯನ್ನು ಕೃಷಿ ಮತ್ತು ಜಾನುವಾರು ನಿರ್ವಹಣೆಯಿಂದ ತೊಡಗಿ ಕಂಪ್ಯೂಟರ್ ಹಾರ್ಡ್ ವೇರ್ ರಿಪೇರಿ, ಡಿಟಿಪಿ ಇಲೆಕ್ಟ್ರಾನಿಕ್ ಸಲಕರಣೆಗಳ ರಿಪೇರಿಯಂತಹ ತಾಂತ್ರಿಕವಾಗಿ ಅತ್ಯಾಧುನಿಕವಾದ ಸೇವೆಗಳ ಮುಂತಾದ ವಿಷಯಗಳಲ್ಲಿ ನೀಡಲಾಗುವುದು. ತರಭೇತಿ ಹೊಂದುವವರ ಪ್ರಬುದ್ಧತೆಯ ಮಟ್ಟಕ್ಕೆ ಹೊಂದಿಕೊಂಡು ಸ್ಥೂಲವಾದ ಅದನ್ನು ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಕೌಶಲ್ಯ ವೃದ್ಧಿ ಕಾರ್ಯಕ್ರಮಗಳೆಂದು ವರ್ಗೀಕರಿಸಬಹುದು..

ಸ್ವ –ಸಹಾಯ ಗುಂಪು ಕಾರ್ಯಕ್ರಮಗಳು

ಈ ಕಾರ್ಯಕ್ರಮ ಎಸ್.ಐ.ಆರ್.ಡಿ ಯು ಸ್ವ ಸಹಾಯ ಗುಂಪುಗಳನ್ನು ಸಂಘಟಿಸುವ ನಿಟ್ಟಿನಲ್ಲಿ ಬ್ಯಾಂಕಿನ ಪ್ರಯತ್ನಗಳಿಗೆ ಪೂರಕವಾಗಿ ಕೆಲಸ ಮಾಡುತ್ತದೆ. ಸೂಕ್ತ ತರಭೇತಿ ನೀಡುವ ಮೂಲಕ ಇಂತಹ ತಂಡಗಳು ತಮ್ಮ ವ್ಯವಹಾರಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಮರ್ಥರನ್ನಾಗಿಸುದೇ ಈ ಕಾರ್ಯಕ್ರಮಗಳ ಉದ್ದೇಶ. ಎಸ್.ಐ.ಆರ್.ಡಿ ಯು ತರಭೇತಿ ಪೂರ್ವದ ಹಾಗೂ ತರಭೇತಿ ತರುವಾಯದ ಚಟುವಟಿಕೆಗಳನ್ನು ಕೈಗೊಳ್ಳಬಲ್ಲ ಸ್ಥಳೀಯರಾದ ಸಂಪನ್ಮೂಲ ವ್ಯಕ್ತಿಗಳನ್ನು ಪತ್ತೆ ಹಚ್ಚಿ ತರಭೇತಿ ನೀಡಿ ಅವರನ್ನು ನೆರವಿಗರನ್ನು ರೂಪಿಸುತ್ತದೆ.

ನಿರ್ದೇಶನ ಸೇವೆಗಳು

ಎಸ್.ಐ.ಆರ್.ಡಿ ಯು ತರಭೇತಿ ಪಡೆಯುವವರಿಗೆ ಅಗತ್ಯವಾದ ತರಭೇತಿಯ ನಂತರದ ಬೆಂಬಲ ಸಮಾಲೋಚನೆ ಸಲಹೆಗಳನ್ನು ನೀಡಿ ಅವರು ಕಿರು ಉದ್ಯಮಗಳನ್ನು ಸ್ಥಾಪಿಸಿ ಮಿತವ್ಯಯ ಪಾಲಿಸಿ ಬ್ಯಾಂಕ್‌ನೊಂದಿಗೆ ಸಾಲ ಸಂಬಂಧದೊಂದಿಗೆ ನಿರ್ವಹಿಸಲು ಶಕ್ತರಾಗುವಂತೆ ಮಾಡುತ್ತದೆ.

ಸರಕಾರವು ಪ್ರಾಯೋಜಿಸುವ ಯೋಜನೆಗಳು

ಎಸ್.ಐ.ಆರ್.ಡಿ ಯ ಕಾರ್ಯಕ್ರಮಗಳು ಸರಕಾರ ಮತ್ತು ಬ್ಯಾಂಕ್ ಅನುಷ್ಠಾನಕ್ಕೆ ತರುವ ಬಡತನ ನಿವಾರಣಾ ಯೋಜನೆಗಳು ಮತ್ತು ಉದ್ಯೋಗ ಸೃಷ್ಟಿಸುವ ಯೋಜನೆಗಳ ಪರಿಣಾಮವನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿವೆ.

ಸಂಪನ್ಮೂಲ ಕೇಂದ್ರ

ಎಸ್.ಐ.ಆರ್.ಡಿ ಯು ತನ್ನ ಕಾರ್ಯ ಕ್ಷೇತ್ರದಲ್ಲಿ ಇತರ ಸರಕಾರೇತರ ಸಂಘಟನೆಗಳು. ಮಹಿಳಾ ಮಂಡಲಗಳು, ಸಾಮಾಜಿಕ ಮತ್ತು ಸೇವಾ ಸಂಸ್ಥೆಗಳು, ಯುವಕ ಸಂಘಗಳು ವಿವಿಧ ಸರಕಾರೀ ಖಾತೆಗಳು, ಸ್ಥಳೀಯ ಸಂಸ್ಥೆಗಳು ಶಿಕ್ಷಣ ಸಂಸ್ಥೆಗಳೊಂದಿಗೆ ನಿಕಟವಾದ ಸಂಪರ್ಕ ಮತ್ತು ಸಂಬಂಧ ಹೊಂದಿದೆ. ಜಿಲ್ಲೆಯ ವಿಕಸನ ಸಂಬಂಧಿ ವಿಷಯಗಳ ಮಟ್ಟಿಗೆ ಎಸ್.ಐ.ಆರ್.ಡಿ ಏಕೈಕ ಪರಾಮರ್ಶನ ಬಿಂದು ಹಾಗೂ ಸಮಾಲೋಚನಾ ಕೇಂದ್ರ ಮೇಲಾಗಿ ಎಸ್.ಐ.ಆರ್.ಡಿ ಸಂಸ್ಥೆಯು ಸರಕಾರೇತರ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರಿಗೂ, ಸ್ವಯಂ ಸೇವಕರಿಗೂ ತರಬೇತಿ ನೀಡುವ ಸಂಪನ್ಮೂಲ ಸಂಸ್ಥೆಯಾಗಿಯೂ ಕಾರ್ಯನಿರ್ವಹಿಸುತ್ತಿದೆ. ತಂತ್ರಜ್ಞಾನದ ವರ್ಗಾವಣೆ, ಸಂಸ್ಥೆಯು ಗ್ರಾಮೀಣ ಸಮುದಾಯಗಳಿಗೆ ತಂತ್ರಜ್ಞಾನವನ್ನು ವರ್ಗಾಯಿಸಬಲ್ಲ ವೇದಿಕೆಯನ್ನೂ ಒದಗಿಸುತ್ತದೆ.

ವಿಧಾನಗಳು

ಕ್ಷೇತ್ರ ಸಂದರ್ಶನ ಉಪನ್ಯಾಸಗಳು ಪ್ರತ್ಯಕ್ಷ ಅನುಭವಗಳು ಪಾತ್ರ ನಿಷ್ಕರ್ಷೆ, ವರ್ತನಾ ಪ್ರೋತ್ಸಾಹ ಅಭ್ಯಾಸಗಳು. ಅನುಭವ ವಿನಿಮಯ, ಸಮೂಹ ವಿಚಾರ ವಿನಿಮಯ, ಕಿರು ಭಾಷಣಗಳು ಮುಂತಾದ ವಯಸ್ಕ ಕಲಿಕೆಯತಂತ್ರಗಳ ಅಧಾರದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಅನುಭವಾತ್ಮಕ ಕಲಿಕೆ ಮತ್ತು ಶಿಬಿರಾರ್ಥಿಗಳ ಚಾರಿತ್ರ್ಯ ನಿರ್ಮಾಣಕ್ಕೆ ಒತ್ತು ನೀಡಲಾಗುವುದು. ತರಭೇತಿಯನ್ನು ಪರಿಣಾಮಕಾರಿಯಾಗಿಸಲು ದೃಶ್ಯ ಶ್ರಾವ್ಯ ಉಪಕರಣಗಳನ್ನು ಧಾರಾಳವಾಗಿ ಬಳಸಲಾಗುವುದು.

ಶಿಕ್ಷಕ ವೃಂದ

ತರಭೇತಿ ನೀಡುವುದರಲ್ಲಿ ಬಹಳ ಅನುಭವಿಗಳಾದ ಸಂಸ್ಥೆಯ ಶಿಕ್ಷಕ ವೃಂದವಲ್ಲದೆ ಎಸ್.ಐ.ಆರ್.ಡಿಗೆ ತಮ್ಮ ವೃತ್ತಿಯಲ್ಲಿ ಬೇರೂರಿರುವ ಹಾಗೂ ಮೊದಲ ಪೀಳಿಗೆಯ ಯುವ ಉದ್ಯಮಶೀಲರ ಬೆಂಬಲವೂ ಇದೆ. ಅವರು ತಮ್ಮ ತಮ್ಮ ಕಾರ್ಯಕ್ಷೇತ್ರದಲ್ಲಿ ನಡೆಯುವ ತರಭೇತಿ ತರಗತಿಗಳಿಗೆ ಆಗಮಿಸಿ ನಿರ್ದಿಷ್ಟ ವೃತ್ತಿಗಳಲ್ಲಿ ತಮಗಿರುವ ತಿಳುವಳಿಕೆಯನ್ನೂ, ಕೌಶಲ್ಯಗಳನ್ನು ತರಭೇತಿ ಪಡೆಯುವವರೊಂದಿಗೆ ಹಂಚಿಕೊಳ್ಳುತ್ತಾರೆ. ಮೇಲಾಗಿ

ಬ್ಯಾಂಕುಗಳು ಸರಕಾರದ ಖಾತೆಗಳು ಮತ್ತು ಇತರ ಸಂಘ ಸಂಸ್ಥೆಗಳೇ ಮೊದಲಾದುವುಗಳಿಂದ ಆಮಂತ್ರಿತ ಸಂಪನ್ಮೂಲ ವ್ಯಕ್ತಿಗಳನ್ನು ತರಭೇತಿ ನೀಡುವ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಗುತ್ತದೆ.

ಸೌಕರ್ಯಗಳು

ಎಸ್.ಐ.ಆರ್.ಡಿ ಯ ಆವರಣಗಳು ಸುಸಜ್ಜಿತವಿದ್ದು ತರಗತಿ ಕೊಠಡಿಗಳು, ಕಂಪ್ಯೂಟರ್ ಪ್ರಯೋಗ ಶಾಲೆಗಳು, ಪ್ರಾಯೋಗಿಕ ಕೆಲಸಗಳ ಶೆಡ್ಡುಗಳು ವಾಸದ ಕೋಣೆಗಳು, ಭೋಜನಾ ಶಾಲೆಗಳು ಮತ್ತು ವಾಚನಾಲಯುಗಳನ್ನು ಒಳಗೊಂಡಿರುತ್ತವೆ.

ವ್ಯಕ್ತಿತ್ವ ವಿಕಸನ

ಗ್ರಾಮೀಣ ಮಹಿಳೆಯರಲ್ಲಿ ಸ್ವ ಉದ್ಯೋಗ ಪ್ರಾರಂಭಿಸಲು ಬೇಕಾದ ಕೌಶಲ್ಯ ಎಂಬುದಿಲ್ಲ. ಇದಲ್ಲದೆ ಮಾನಸಿಕವಾಗಿಯೂ ಸಿದ್ಧರಿರುವುದಿಲ್ಲ. ಇದನ್ನರಿತ ಸಂಸ್ಥೆಯು ತರಭೇತಿಯ ಜೊತೆ ಜೊತೆಗೆ ವ್ಯಕ್ತಿತ್ವ ವಿಕಸನದ ತರಗತಿಗಳನ್ನು ನಡೆಸಲಾಗುತ್ತಿದೆ. ವ್ಯಕ್ತಿತ್ವ ವಿಕಸನದ ಮುಖ್ಯ ಉದ್ದೇಶ ಅಭ್ಯರ್ಥಿಗಳು ಉದ್ಯಮವನ್ನು ಪ್ರಾರಂಭಿಸಲು ಬೇಕಾದ ಮಾನಸಿಕ ಧೈರ್ಯವನ್ನು ತುಂಬುವುದು ಆ ಮೂಲಕ ಸ್ವ ಉದ್ಯೋಗವನ್ನು ಕೈಗೊಳ್ಳಲು ಅಣಿ ಮಾಡುವುದು.

ನಕಾರಾತ್ಮಕ ಆಲೋಚನೆಯನ್ನು ಅಳಿಸುವುದು, ಸೃಜನಶೀಲತೆಯನ್ನು ಬೆಳೆಸುವುದು, ಮಾನವೀಯತೆಯನ್ನು ಉಳಿಸುವುದು ವ್ಯಕ್ತಿತ್ವ ವಿಕಸನದ ತರಭೇತಿಯ ಪ್ರಮುಖ ಅಂಶಗಳು. ಇದರ ಜೊತೆಗೆ ಉತ್ತಮ ನಡತೆ, ಉತ್ತಮ ಶೀಲ ಮತ್ತು ಉತ್ತಮ ಶಿಸ್ತನ್ನು ಬೆಳೆಸುವುದು ತರಗತಿಯ ವೈಶಿಷ್ಟ್ಯ. ತರಗತಿಯ ವಿಶೇಷತೆಗಳು ಅಭ್ಯರ್ಥಿಗಳಿಗೆ ಜೀವನ ಕೌಶಲ್ಯಗಳನ್ನು ಬೆಳೆಸುವುದು.

ಜೀವನ ಕೌಶಲ್ಯಗಳು

* ಕ್ರಿಯಾಶೀಲತೆ
* ದೃಢ ನಿರ್ಧಾರ
* ವಿಮರ್ಶಾತ್ಮಕ ಆಲೋಚನೆ
* ಸಮಸ್ಯೆಗೆ ತಕ್ಕ ಪರಿಹಾರ
* ಹೊಂದಾಣಿಕೆ ಸ್ವಭಾವ
* ಪರಿಣಾಮಕಾರಿ ಸಂವಹನ

* ಒತ್ತಡ ಸಹಿಸುವಿಕೆ

* ಸ್ವ ಅರಿವು

* ಇತರರ ಕುರಿತು ಕಾಳಜಿ

* ಭಾವನೆಗಳ ಮೇಲೆ ಹತೋಟಿ.

ಹೀಗೆ ಮೇಲ್ಕಾಣಿಸಿದ ಜೀವನ ಕೌಶಲ್ಯಗಳನ್ನು ತಿಳಿಸುವುದರೊಂದಿಗೆ ತರಬೇತಿಯನ್ನು ನೀಡುವುದು ಈ ಸಂಸ್ಥೆಯ ವೈಶಿಷ್ಟ್ಯ.

೪.೩ ಸಂಗ್ರಹಿಸಿದ ಮಾಹಿತಿ

ಸಿಂಡಿಕೇಟ್ ಗ್ರಾಮೀಣ ಅಭಿವೃದ್ಧಿ ಟ್ರಸ್ಟ್, ಮಣಿಪಾಲ ಮತ್ತು ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ ಮಣಿಪಾಲ ಇವುಗಳ ಸಾಧನೆಗೆ ಸಂಬಂಧ ಪಟ್ಟ ಅಂಕಿ ಅಂಶಗಳು

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆಗಳು:-೩೧-೦೩-೨೦೦೯ರ ಪ್ರಗತಿ

ಕೋಷ್ಟಕ ೪.೨

೧.	ತರಬೇತಿ ಸಂಸ್ಥೆಗಳ ಸಂಖ್ಯೆ	೧೦
೨.	ನಡೆಸಲಾದ ತರಬೇತಿ ಕಾರ್ಯಕ್ರಮಗಳ ಸಂಖ್ಯೆ	೧೫೬೫
೩.	ತರಬೇತಿ ಪಡೆದ ಅಭ್ಯರ್ಥಿಗಳು	೫೨೬೩೧
೪.	ತರಬೇತಿ ಪಡೆದ ಮಹಿಳಾ ಅಭ್ಯರ್ಥಿಗಳು	೩೦೬೩೦
೫.	ತರಬೇತಿ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು	೨೦೧೨೦
೬.	ವಿಲೇವಾರಿ ದರ	೬೭%
೭.	ತರಬೇತಿ ಪಡೆದ ಅಭ್ಯರ್ಥಿಗಳಿಗೆ ವಿಸ್ತರಿಸಲಾದ ಬ್ಯಾಂಕ್ ಹಣಕಾಸು(ರೂಪಾಯಿ ಕೋಟಿಗಳಲ್ಲಿ)	೧೨೭.೮೨

೦೧-೦೪-೨೦೦೮ ರಿಂದ ೩೧-೦೩-೨೦೦೯ ರ ವರೆಗಿನ ಪ್ರಗತಿ ಮಾರ್ಚ್ ೩೧ ೨೦೦೯ರಂದು

ಕೋಷ್ಟಕ ೪.೨

೧. ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು

ಕಾರ್ಯಕ್ರಮಗಳು	೧೨೯	೯೭೩
ತರಬೇತಿ ಪಡೆದವರು	೩೯೦೭	೩೦೧೨೨
ಮಹಿಳೆಯರ ಸಂಖ್ಯೆ	೨೦೧೫	೧೧೦೨೮

೨. ಸ್ವಸಹಾಯ ಗುಂಪಿನ ಕಾರ್ಯಕ್ರಮಗಳು

ಕಾರ್ಯಕ್ರಮಗಳು	೬೬	೪೮೧
ತರಭೇತಿ ಪಡೆದವರು	೩೧೯೦	೧೯೫೭೦
ಮಹಿಳೆಯರ ಸಂಖ್ಯೆ	೨೯೮೪	೧೭೪೪೮

೩. ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು

ಕಾರ್ಯಕ್ರಮಗಳು	೧೧	೧೧೧
ತರಭೇತಿ ಪಡೆದವರು	೩೧೫	೨೯೩೯
ಮಹಿಳೆಯರ ಸಂಖ್ಯೆ	೨೩೨	೨೦೬೦

೪. ಉದ್ಯಮಶೀಲತಾ ಅರಿವು ಕಾರ್ಯಕ್ರಮಗಳು

ಕಾರ್ಯಕ್ರಮಗಳು	೧೩೪	೮೮೫
ತರಭೇತಿ ಪಡೆದವರು	೭೫೭೪	೫೭೯೩೩
೫. ವಿಷಯಾಧಾರಿತ ಅರಿವು ಮೂಡಿಸುವ ಕಾರ್ಯಕ್ರಮಗಳು	೩	೬೬
೬. ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು	೧೬	೧೬೮

೭. ಒಟ್ಟು

ಕಾರ್ಯಕ್ರಮಗಳು	೨೦೬	೧೫೬೫
ತರಭೇತಿ ಪಡೆದವರು	೭೪೧೨	೫೨೬೩೧
ಮಹಿಳೆಯರ ಸಂಖ್ಯೆ	೫೨೨೫	೩೦೫೩೦
ಶೇಕಡಾ ವಾರು	೭೦	೫೮
ಪ.ಜಾ.ಪ.ಪಂ	೧೬೫೧	೧೦೬೮೮
ಶೇಕಡಾ ವಾರು	೨೨	೨೦
ಹಿಂದುಳಿದ ವರ್ಗ	೩೦೮೮	೨೦೧೨೦

ಶೇಕಡಾ ವಾರು	೪೨	೩೮
ಅಲ್ಪ ಸಂಖ್ಯಾತರು	೧೦೭೯	೭೩೨೬
ಶೇಕಡಾ ವಾರು	೧೫	೧೪
ಅಂಗ ವಿಕಲರು	೪೩	೫೮೪
ಶೇಕಡಾ ವಾರು	೧	೧
ಬಡತನ ರೇಖೆಗಿಂತ ಕೆಳಗಿನವರು	೬೦೦೧	೩೭೫೧೮
ಶೇಕಡಾ ವಾರು	೮೧	೭೧
ಗ್ರಾಮೀಣ ಮತ್ತು ಅರೆ ನಗರವಾಸಿಗಳು	೬೫೯೧	೪೪೯೯೮
ಶೇಕಡಾ ವಾರು	೮೯	೮೫
ಸರಕಾರದ ವಿಶೇಷ ಯೋಜನೆಯಡಿ ಪ್ರಯೋಜನ ಪಡೆದವರು	೩೦೨೨	೨೩೪೯೬
ಶೇಕಡಾ ವಾರು	೪೧	೪೫

ಪ್ರಾಯೋಜಕರು

ಸಿಂಡಿಕೇಟ್ ಬ್ಯಾಂಕ್	೨೫೨೮	೨೪೭೬೯
ಶೇಕಡಾ ವಾರು	೩೯	೪೯
ಆರ್ ಆರ್ ಬಿ	೧೭೬೯	೧೧೨೦೫
ಶೇಕಡಾ ವಾರು	೨೭	೨೨
ಇತರೆ	೨೧೭೬	೧೫೦೧೨
ಒಟ್ಟು	೬೪೭೩	೫೦೯೮೬

ಸ್ವ ಉದ್ಯೋಗ ಪ್ರಾರಂಭಿಸಿದವರ ವಿವರ

ಸ್ವ ಉದ್ಯೋಗ ಪ್ರಾರಂಭಿಸಿದ ಅಭ್ಯರ್ಥಿಗಳ ಸಂಖ್ಯೆ	೬೪೪೨	೩೫೩೦೨
ಮಹಿಳೆಯರ ಸಂಖ್ಯೆ	೪೫೧೦	೧೮೯೭೦
ಶೇಕಡಾ ವಾರು	೮೭	೬೭

೨೦೦೮-೦೯ ಸಾಲಿನ ಪ್ರಗತಿ ನೋಟ

೨೦೦೮-೦೯ರ ಸಾಲಿನಲ್ಲಿ ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆಗಳು ಒಟ್ಟು ೩೫೯ ತರಬೇತಿ ಕಾರ್ಯಕ್ರಮಗಳನ್ನು ನಡೆಸಿದೆ. ಅದರಲ್ಲಿ ೧೨೯ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು, ೬೬ ಸ್ವ ಸಹಾಯ ಸಂಘಗಳ ಸದಸ್ಯರುಗಳಿಗೆ ನಡೆಸಲಾದ ಕಾರ್ಯಕ್ರಮಗಳು, ೧೧ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು.

ತರಭೇತಿ ಪಡೆದ ಅಭ್ಯರ್ಥಿಗಳು: ಈ ಸಂಸ್ಥೆಗಳು ಒಟ್ಟು ೨೦೬ ತರಬೇತಿ ಕಾರ್ಯಕ್ರಮಗಳ ಮೂಲಕ ೭೪೧೨ ಅಭ್ಯರ್ಥಿಗಳಿಗೆ ತರಭೇತಿಯನ್ನು ನೀಡಿವೆ.

ಮಹಿಳಾ ಸಬಲೀಕರಣ: ಒಟ್ಟು ತರಭೇತಿ ಪಡೆದವರಲ್ಲಿ ೫೨೨೫ ಅಂದರೆ ಶೇ.೭೦ ಮಹಿಳೆಯರು.

ದುರ್ಬಲ ವರ್ಗದವರು: ಒಟ್ಟು ತರಭೇತಿ ಪಡೆದವರಲ್ಲಿ ಶೇ.೨೨ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರು, ಶೇ. ೪೨ ಹಿಂದುಳಿದ ವರ್ಗಕ್ಕೆ ಸೇರಿದವರು, ಶೇ. ೧೫ ಅಲ್ಪ ಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿದ್ದಾರೆ ಅಲ್ಲದೆ ಶೇ. ೮೧ ರಷ್ಟು ಬಡತನ ರೇಖೆಗಿಂತ ಕೆಳಗಿನ ಕುಟುಂಬದಿಂದ ಬಂದವರು.

ಸರಕಾರ ಪ್ರಾಯೋಜಿತ ಯೋಜನೆಗಳು:

ಒಟ್ಟು ತರಭೇತಿ ಪಡೆದವರಲ್ಲಿ ೩೦೨೨ ಅಂದರೆ ಶೇ. ೪೧ ರಷ್ಟು ಸರಕಾರ ಪ್ರಾಯೋಜಿತ ಯೋಜನೆಯಡಿ ತರಭೇತಿ ಪಡೆದವರು. ೧೯೩ ನಿರುದ್ಯೋಗಿಗಳು ಪಿ.ಎಮ್ ಇ ಜಿ ಪಿ ಮತ್ತು ಪಿ ಎಮ್ ಆರ್ ವೈ ಯೋಜನೆಯಡಿ, ೨೮೨೯ ಸ್ವರ್ಣ ಜಯಂತಿ ಗ್ರಾಮ್ ಸ್ವರೋಜ್‌ಗಾರ್ ಯೋಜನೆ, ಸ್ವರ್ಣ ಜಯಂತಿ ಶಹರಿ ರೋಜ್ ಗಾರ್ ಯೋಜನೆ ಮತ್ತು ಇತರೆ ಸರ್ಕಾರ ಪ್ರಾಯೋಜಿತ ಕಾರ್ಯಕ್ರಮಗಳಾದ ಕರ್ನಾಟಕದ ಯಶಸ್ವಿನಿ, ಸ್ತ್ರೀ ಶಕ್ತಿ, ಶ್ರಮ ಶಕ್ತಿ, ಕೇರಳದ ಕುಡುಂಬ ಮತ್ತು ಆಂಧ್ರ ಪ್ರದೇಶದ ರಾಜೀವ್ ಯುವ ಶಕ್ತಿ ಯೋಜನೆಯಡಿ ತರಭೇತಿ ಪಡೆದಿದ್ದಾರೆ.

ಪ್ರಾಯೋಜಕತ್ವ

೨೦೦೮-೦೯ನೇ ಸಾಲಿನಲ್ಲಿ ಸಿಂಡಿಕೇಟ್ ಬ್ಯಾಂಕ್ ಪ್ರಾಯೋಜಿತ ೨೫೨೮ (ಶೇ.೩೯), ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಪ್ರಾಯೋಜಿತ ೧೭೬೯(ಶೆ.೨೭) ಮತ್ತು ಇತರ ಬ್ಯಾಂಕ್ ಮತ್ತು ಸಂಘಟನೆಗಳ ಪ್ರಾಯೋಜಿತ ೨೧೭೬ ಅಭ್ಯರ್ಥಿಗಳನ್ನು ತರಭೇತುಗೊಳಿಸಲಾಗಿದೆ.

ಎಸ್ ಆರ್ ಡಿ ಟಿ ಯು ತನ್ನ ಕಾರ್ಯ ಚಟುವಟಿಕೆಗಳನ್ನು ನಡೆಸಲು ಬಾಹ್ಯ ಸಂಘಟನೆಗಳಿಂದ ನೆರವನ್ನು ಪಡೆಯುತ್ತಿದೆ. ಕರ್ನಾಟಕ, ಅಂಧ್ರ ಪ್ರದೇಶ, ಕೇರಳ ಮತ್ತು ಉತ್ತರ ಪ್ರದೇಶದಲ್ಲಿ ನಡೆಸಲ್ಪಡುತ್ತಿರುವ ಸಂಸ್ಥೆಗಳು ಯೋಜಿಸುವ ಕೌಶಲ್ಯಾಭಿವೃದ್ಧಿ ತರಭೇತಿ ಕಾರ್ಯಕ್ರಮಗಳಿಗೆ ನಬಾರ್ಡ್ ಹಣಕಾಸಿನ ನೆರವನ್ನು ಒದಗಿಸುತ್ತಿದೆ. ೨೦೦೮-೦೯ ಸಾಲಿನಲ್ಲಿ ೮ ಎಸ್ ಐ ಆರ್ ಡಿ ಗಳಲ್ಲಿ ನಡೆಸಲಾದ ೭೪ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳಿಗೆ ರೂ.೩೬ ಲಕ್ಷವನ್ನು ಮಂಜೂರು ಮಾಡಿದೆ.

ಸಿಂಡಿಕೇಟ್ ಗ್ರಾಮೀಣ ಅಭಿವೃದ್ಧಿ ಟ್ರಸ್ಟ್, ಮಣಿಪಾಲ ಇದರ ಪ್ರಗತಿ

ಕೋಷ್ಟಕ -೪.೩

೦೧-೦೪-೨೦೦೮ ರಿಂದ ೩೧-೦೩-೨೦೦೯ ರ ವರೆಗಿನ ಪ್ರಗತಿ ಮಾರ್ಚ್ ೩೧ ೨೦೦೯ರಂದು

೧. ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು

ಕಾರ್ಯಕ್ರಮಗಳು	೧೬	೧೦೮
ತರಭೇತಿ ಪಡೆದವರು	೪೫೬	೩೧೦೩
ಮಹಿಳೆಯರ ಸಂಖ್ಯೆ	೩೫೦	೧೧೫೦

೨. ಸ್ವಸಹಾಯ ಗುಂಪಿನ ಕಾರ್ಯಕ್ರಮಗಳು

ಕಾರ್ಯಕ್ರಮಗಳು	೭	೬೭
ತರಭೇತಿ ಪಡೆದವರು	೨೦೯	೨೦೪೮
ಮಹಿಳೆಯರ ಸಂಖ್ಯೆ	೧೯೬	೧೯೪೩

೩. ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು

ಕಾರ್ಯಕ್ರಮಗಳು	೧	೨೪
ತರಭೇತಿ ಪಡೆದವರು	೩೭	೫೪೫
ಮಹಿಳೆಯರ ಸಂಖ್ಯೆ	೩೭	೩೫೯

೪. ಉದ್ಯಮಶೀಲತಾ ಅರಿವು ಕಾರ್ಯಕ್ರಮಗಳು

ಕಾರ್ಯಕ್ರಮಗಳು	೧೮	೧೨೮
ತರಭೇತಿ ಪಡೆದವರು	೧೪೭೪	೧೧೧೩೨

೫. ವಿಷಯಾಧಾರಿತ ಅರಿವು ಮೂಡಿಸುವ ಕಾರ್ಯಕ್ರಮಗಳು	೦	೧೮
೬. ಮಾನವ ಸಂಪನ್ಮೂಲ ಅಭಿವೃದ್ದಿ ಮತ್ತು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು	೦	೧೭

೭. ಒಟ್ಟು

ಕಾರ್ಯಕ್ರಮಗಳು	೨೪	೧೯೯
ತರಭೇತಿ ಪಡೆದವರು	೭೦೨	೫೬೯೬
ಮಹಿಳೆಯರ ಸಂಖ್ಯೆ	೫೮೩	೩೪೫೨
ಶೇಕಡಾ ವಾರು	೮೩	೬೧
ಪ.ಜಾ. ಪ.ಪಂ	೧೭೨	೧೦೨೧
ಶೇಕಡಾ ವಾರು	೨೫	೧೮
ಹಿಂದುಳಿದ ವರ್ಗ	೪೩೬	೩೦೩೩
ಶೇಕಡಾ ವಾರು	೬೨	೫೩
ಅಲ್ಪ ಸಂಖ್ಯಾತರು	೨೮	೫೨೧
ಶೇಕಡಾ ವಾರು	೪	೯
ಅಂಗ ವಿಕಲರು	೪	೩೭
ಶೇಕಡಾ ವಾರು	೧	೧

ಬಡತನ ರೇಖೆಗಿಂತ ಕೆಳಗಿನವರು	೬೦೦	೪೪೬೭
ಶೇಕಡಾ ವಾರು	೮೫	೭೮
ಗ್ರಾಮೀಣ ಮತ್ತು ಅರೆಪಟ್ಟಣ	೬೭೦	೪೪೬೭
ಶೇಕಡಾ ವಾರು	೯೫	೮೭
ಸರಕಾರದ ವಿಶೇಷ ಯೋಜನೆಯಡಿ ಪ್ರಯೋಜನ ಪಡೆದವರು	೪೭೯	೩೨೫೫
ಶೇಕಡಾ ವಾರು	೬೮	೫೭

೮. ಪ್ರಾಯೋಜಕರು

ಸಿಂಡಿಕೇಟ್ ಬ್ಯಾಂಕ್	೮೯	೩೪೪೭
ಶೇಕಡಾ ವಾರು	೧೩	೬೪
ಆರ್ ಆರ್ ಬಿ	೭೫	೫೮೯
ಶೇಕಡಾ ವಾರು	೧೧	೧೧
ಇತರೆ	೩೭೯	೧೩೨೧
ಒಟ್ಟು	೫೪೩	೫೩೫೭

೯. ಸ್ವ ಉದ್ಯೋಗ ಪ್ರಾರಂಭಿಸಿದವರ ವಿವರ

ಸ್ವ ಉದ್ಯೋಗ ಪ್ರಾರಂಭಿಸಿದ ಅಭ್ಯರ್ಥಿಗಳ ಸಂಖ್ಯೆ	೬೬೧	೪೦೦೧
ಮಹಿಳೆಯರ ಸಂಖ್ಯೆ	೫೫೬	೨೩೧೮
ಶೇಕಡಾ ವಾರು	೯೪	೭೦

ಮೇಲೆ ತಿಳಿಸಿದ ಅಂಕಿ ಅಂಶಗಳು ಸಂಸ್ಥೆಯ ಉದ್ಯಮಶೀಲತೆಯ ಸಾಧನೆಯನ್ನು ಪಟ್ಟಿ ಮಾಡುತ್ತವೆ ಮತ್ತು ತಮ್ಮ ಧ್ಯೇಯೊದ್ದೇಶಗಳನ್ನು ಈಡೇರಿಸುವಲ್ಲಿ ಯಶಸ್ವಿಯಾಗಿವೆ ಎಂದು ಹೇಳಬಹುದು.

ಅಧ್ಯಾಯ – ೫ : ಅಂಕಿ ಅಂಶಗಳ ವಿಶ್ಲೇಷಣೆ

- ಮುಖ್ಯ ಚಲಕಗಳು
- ವಿಶ್ಲೇಷಣೆ ಮತ್ತು ಫಲಿತಗಳು
- ಒಂದು ಮಾದರಿ

ಅಧ್ಯಾಯ-೫: ಅಂಕಿ ಅಂಶಗಳ ವಿಶ್ಲೇಷಣೆ

೫.೧ ಮುಖ್ಯ ಚಲಕಗಳು

ಈ ಭಾಗವು ನಾಲ್ಕನೇ ಅಧ್ಯಾಯದಲ್ಲಿ ಸಂಸ್ಥೆಗೆ ಸಂಬಂಧಪಟ್ಟಂತೆ ಸಂಗ್ರಹಿಸಿದ ಮಾಹಿತಿಯ ಅಂಕಿ ಅಂಶಗಳ ವಿಶ್ಲೇಷಣೆಯನ್ನು ಒಳಗೊಂಡಿದೆ. ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆಯ ಬಗ್ಗೆ ಸಂಗ್ರಹಿಸಿದ ಮಾಹಿತಿಯು ಹಲವಾರು ವಿಷಯಗಳ ಬಗ್ಗೆ ಬೆಳಕನ್ನು ಚೆಲ್ಲಿರುವುದು ಗಮನಿಸಬಹುದಾಗಿದೆ. ಗ್ರಾಮೀಣಾಭಿವೃದ್ಧಿಯನ್ನು ಧ್ಯೇಯವಾಗಿಟ್ಟುಕೊಂಡು ಉದ್ಯೋಗ ಸೃಷ್ಟಿಗೆ ಶ್ರಮಿಸುವ ಮೂಲಕ ಉದ್ಯಮಶೀಲತೆಯ ಗುಣವನ್ನು ನಿರುದ್ಯೋಗಿ ಯುವಜನರಲ್ಲಿ ಅದರಲ್ಲೂ ವಿಶೇಷವಾಗಿ ಸಮಾಜದ ದುರ್ಬಲ ವರ್ಗದವರು ಮತ್ತು ಮಹಿಳೆಯರ ಏಳಿಗೆಗಾಗಿ ಪಣ ತೊಟ್ಟಿರುವ ಸಂಸ್ಥೆಯ ಸಾಧನೆಯನ್ನು ಈ ವಿಶ್ಲೇಷಣೆಯಲ್ಲಿ ಕೈಗೊಳ್ಳಲಾಗಿದೆ. ವಿಶ್ಲೇಷಣೆಯು ಸಂಸ್ಥೆಯಿಂದ ಲಭ್ಯವಾದ ಹಾಗೂ ಪ್ರಶ್ನಾವಳಿ ಮೂಲಕ ಪ್ರಾಥಮಿಕ ಮೂಲದಿಂದ ಪಡೆಯಲಾದ ಮಾಹಿತಿಯುನ್ನು ಆಧರಿಸಿ ಈ ಕೆಳಗಿನ ಚಲಕಗಳನ್ನು ವಿಶ್ಲೇಷಣೆಗೆ ಬಳಸಿಕೊಳ್ಳಲಾಗಿದೆ.

*ಉದ್ಯಮಶೀಲತಾ, ಸ್ವ ಸಹಾಯ ಗುಂಪು, ಕೌಶಲ್ಯಾಭಿವೃದ್ಧಿ ಮುಂತಾದ ಸಂಸ್ಥೆಯ ಕಾರ್ಯಕ್ರಮಗಳು

*ಮಹಿಳೆಯರು

*ದುರ್ಬಲ ವರ್ಗದವರು

*ಗ್ರಾಮೀಣ ಪ್ರದೇಶದವರು

*ಉದ್ಯೋಗ ಕೈಗೊಂಡವರು

೫.೨ ವಿಶ್ಲೇಷಣೆ ಮತ್ತು ಫಲಿತಾಂಶಗಳು

ಕೋಷ್ಟಕ ೨ ರಲ್ಲಿ ತಿಳಿಸಿದಂತೆ ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಟ್ರಸ್ಟ್ ನಿಂದ ನಡೆಸಲ್ಪಡುತ್ತಿರುವ ೧೦ ಸಂಸ್ಥೆಗಳು ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಯಶಸ್ವಿಯಾಗಿರುವುದು ತಿಳಿದುಬರುತ್ತದೆ.

ಇಲ್ಲಿಯವರೆಗೆ ಒಟ್ಟು ೧೫೬೫ ಕಾರ್ಯಕ್ರಮಗಳನ್ನು ಈ ಸಂಸ್ಥೆಗಳು ನಡೆಸಿವೆ. ಅಲ್ಲದೆ ೨೦೦೮-೦೯ ನೇ ಸಾಲಿನಲ್ಲಿ ಒಟ್ಟು ೨೦೬ ಕಾರ್ಯಕ್ರಮಗಳನ್ನು ನಡೆಸಿವೆ.

ಕೋಷ್ಟಕ ೩ ರಲ್ಲಿ ಮಣಿಪಾಲದ ಸಂಸ್ಥೆಯು ೨೦೦೮-೦೮ ನೇ ಸಾಲಿನಲ್ಲಿ ೨೪ ಕಾರ್ಯಕ್ರಮಗಳು ಸೇರಿದಂತೆ ಒಟ್ಟು ೧೯೯ ಕಾರ್ಯಕ್ರಮಗಳು ನಡೆಸಲ್ಪಟ್ಟಿವೆ.

ಅದರಂತೆ ಉದ್ಯಮಶೀಲತೆಯ ೧೬, ಸ್ವ ಸಹಾಯ ಸಂಘಗಳ ೭ ಮತ್ತು ಕೌಶಲ್ಯಾಭಿವೃದ್ಧಿಯ ೧

ಕಾರ್ಯಕ್ರಮಗಳು ನಡೆಸಲಾಗಿದ್ದು ಬಹು ಸಂಖ್ಯೆಯಲ್ಲಿ ಅಂದರೆ ಒಟ್ಟು ೭೦೨ ಅಭ್ಯರ್ಥಿಗಳು ತರಭೇತಿ ಪೂರ್ಣಗೊಳಿಸಿದ್ದಾರೆ.

* ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆಗಳು ಒಟ್ಟು ೫೨೬೩೧ ಜನರನ್ನು ತರಭೇತಿಗೊಳಿಸಿದೆ. ಮಣಿಪಾಲದ ಸಂಸ್ಥೆಯಿಂದ ಈವರೆಗೆ ೭೪೧೨ ಮಂದಿ ತರಭೇತಿ ಪೂರ್ಣ ಗೊಳಿಸಿದ್ದಾರೆ.

* ಮಹಿಳೆಯರ ವಿಷಯಕ್ಕೆ ಬಂದಾಗ ಸಂಸ್ಥೆಗಳು ಒಟ್ಟು ೩೦೫೩೦ ಮಹಿಳೆಯರನ್ನು ಉದ್ಯಮಶೀಲತೆ ಮುಂತಾದ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು, ಸ್ವ ಉದ್ಯೋಗ ಕೈಗೊಳ್ಳಲು ಆಸಕ್ತಿಯನ್ನು ತೋರಿಸಿದ್ದಾರೆ.

ಮಣಿಪಾಲದ ಸಂಸ್ಥೆಯು ಈ ವರೆಗೆ ೫೨೨೫ ಮಹಿಳೆಯರನ್ನು ತರಭೇತು ಗೊಳಿಸುವಲ್ಲಿ ಯಶಸ್ವಿಯಾಗಿದೆ. ೨೦೦೮-೦೯ ನೇ ಸಾಲಿನಲ್ಲಿ ೫೮೩ ಅಂದರೆ ಶೇ. ೮೩ ರಷ್ಟು ಮಹಿಳೆಯರು ಫಲಾನುಭವಿಗಳಾಗಿದ್ದಾರೆ. ವಿವಿಧ ತರಭೇತಿ ಕಾರ್ಯಕ್ರಮಗಳಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯು ಸ್ವ ಉದ್ಯೋಗ ಕೈಗೊಳ್ಳುವ ಅವರ ಒಲವನ್ನು ತೋರಿಸುತ್ತದೆ. ಉದ್ಯಮಶೀಲತಾ ಅಭಿವೃದ್ದಿ ಕಾರ್ಯಕ್ರಮಗಳಲ್ಲಿ ೨೦೦೮-೦೯ರಲ್ಲಿ ಒಟ್ಟು ೩೫೦, ಸ್ವ ಸಹಾಯ ಗುಂಪುಗಳ ಕಾರ್ಯಕ್ರಮಗಳಲ್ಲಿ ೧೯೬ ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ೩೭ ಮಂದಿ ಮಹಿಳೆಯರು ತರಭೇತು ಪೂರ್ಣಗೊಳಿಸಿದ್ದಾರೆ.

* ಇನ್ನು ಸಮಾಜದ ದುರ್ಬಲ ವರ್ಗದವರಾದ ಹಿಂದುಳಿದ ವರ್ಗ, ಅಲ್ಪ ಸಂಖ್ಯಾತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರು ಅಧಿಕ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ವಿವಿಧ ಸಂಸ್ಥೆಗಳಲ್ಲಿ ಒಟ್ಟು ೨೦೧೨೦ ಹಿಂದುಳಿದ ವರ್ಗ, ೭೩೨೬ ಅಲ್ಪ ಸಂಖ್ಯಾತರು, ೧೦೬೮೮ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಗಳಿಗೆ ಸೇರಿದ ಜನರು ತರಭೇತಿ ಪಡೆದಿರುವುದು ವಿಶೇಷ. ಸಮಾಜದಲ್ಲಿ ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದು ಉತ್ತಮ ಬೆಳವಣಿಗೆ.

ಮಣಿಪಾಲದ ಸಂಸ್ಥೆಯಲ್ಲಿ ಒಟ್ಟು ೩೦೮೮(ಶೇ.೪೨) ಹಿಂದುಳಿದ ವರ್ಗ, ೧೦೭೪(ಶೇ.೧೫)ಅಲ್ಪ ಸಂಖ್ಯಾತರು, ೧೬೫೧(ಶೇ.೨೨) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರು ತರಭೇತಿ ಪಡೆದಿರುತ್ತಾರೆ.

* ಗ್ರಾಮೀಣ ಪ್ರದೇಶದ ಜನರ ವಿಷಯದಲ್ಲಿ ಬೇರೆ ಬೇರೆ ಸಂಸ್ಥೆಗಳಲ್ಲಿ ಒಟ್ಟು ೪೪೯೮ (ಶೇ.೮೫)ರಷ್ಟು ಅಭ್ಯರ್ಥಿಗಳು ತರಭೇತಿಯನ್ನು ಪೂರೈಸಿದ್ದಾರೆ.

ಪ್ರಕರಣ ಅಧ್ಯಯನದ ಸಂಸ್ಥೆಯಾದ ಮಣಿಪಾಲದಲ್ಲಿ ಒಟ್ಟು ೬೫೯೧ (ಶೇ.೮೯)ರಷ್ಟು ಗ್ರಾಮೀಣ ಮತ್ತು ಅರೆ ಪಟ್ಟಣ ಪ್ರದೇಶಕ್ಕೆ ಸೇರಿದ ಜನರು ಅಧಿಕ ಸಂಖ್ಯೆಯಲ್ಲಿ ತರಭೇತಿಯ ಪ್ರಯೋಜನ ಪಡೆದಿರುವುದು

ತಿಳಿದುಬರುತ್ತದೆ. ಯಾವ ಹೆಗ್ಗುರಿಯನ್ನು ಇಟ್ಟುಕೊಂಡು ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆಯೋ ಅದು ಈಡೇರಿದೆ ಎನ್ನುವುದು ಸ್ಪಷ್ಟವಾಗುತ್ತದೆ.

* ವಿವಿಧ ಸಂಸ್ಥೆಗಳಿಂದ ಬಡತನ ರೇಖೆಗಿಂತ ಕೆಳಗಿನ ಕುಟುಂಬದ ೩೭೫೧೮(ಶೇ.೭೧)ರಷ್ಟು, ಜನರು ಪ್ರಯೋಜನವನ್ನು ಪಡೆದಿರುತ್ತಾರೆ.

ಮಣಿಪಾಲದ ಸಂಸ್ಥೆಯಲ್ಲಿ ೬೦೦೧ (ಶೇ.೮೧) ಮಂದಿ ತರಬೇತಿಯನ್ನು ಪೂರ್ಣಗೊಳಿಸಿದ್ದು ಗ್ರಾಮೀಣ ಪ್ರದೇಶಗಳಲ್ಲಿ ಕಂಡು ಬರುತ್ತಿರುವ ಬಡತನ ಎಂಬ ಸಮಸ್ಯೆಗೆ ಈ ಉದ್ಯಮಶೀಲತೆ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸಿವೆ ಎಂದು ಹೇಳಬಹುದು.

ಮತ್ತೊಂದು ಮುಖ್ಯವಾದ ಅಂಶ ವಿವಿಧ ಸಂಸ್ಥೆಗಳಿಂದ

* ತರಭೇತಿ ಪೂರ್ಣ ಗೊಳಿಸಿದವರಲ್ಲಿ ೧೮೯೭೦(ಶೇ.೬೭) ಮಹಿಳೆಯರು ಸ್ವ ಉದ್ಯೋಗ ಪ್ರಾರಂಭಿಸಿದ್ದಾರೆ ಎಂಬುದು.

ಮಣಿಪಾಲದ ಸಂಸ್ಥೆಯಿಂದ ೪೫೧೦(ಶೇ.೮೭) ಮಹಿಳೆಯರು ಉದ್ಯಮ ಪ್ರಾರಂಭಿಸಿದ್ದಾರೆ ಎಂಬುದು ಗಮನಿಸಬೇಕಾದ ವಿಷಯ.

ಸಂಸ್ಥೆಯ ಅಂಕಿ ಅಂಶಗಳ ಪ್ರಗತಿಯನ್ನು ಗಮನಿಸಿದಾಗ ಕೆಲವೊಂದು ಅಂಶಗಳು ಸ್ಪಷ್ಟವಾಗುತ್ತವೆ.

I ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು

೧. ಉದ್ಯಮಶೀಲತಾ ಅಭಿವೃದ್ಧಿಯ ಒಟ್ಟು ೧೦೮ ಕಾರ್ಯಕ್ರಮಗಳನ್ನು ನಡೆಸಲಾಗಿದ್ದು

೨. ನಡೆಸಲಾದ ೧೦೮ ಕಾರ್ಯಕ್ರಮಗಳಲ್ಲಿ ಒಟ್ಟು ೩೧೦೩ ಮಂದಿ ತರಭೇತಿಯನ್ನು ಪಡೆದಿದ್ದಾರೆ.

೩. ತರಭೇತಿ ಪಡೆದ ೩೧೦೩ ಮಂದಿಯಲ್ಲಿ ೧೧೫೦ ಮಹಿಳೆಯರು ಅಂದರೆ ಶೇ.೩೮ ರಷ್ಟು ಎಂಬುದು ಗಮನಿಸಬೇಕಾದ ವಿಚಾರ. ಮಹಿಳೆಯರು ಉದ್ಯಮಶೀಲತಾ ಚಟುವಟಿಕೆಗಳಲ್ಲಿ ಹೆಚ್ಚು ಆಸಕ್ತಿಯನ್ನು ಹೊಂದುತ್ತಿದ್ದಾರೆ ಎಂದು ತಿಳಿದು ಬರುತ್ತದೆ.

II ಸ್ವಸಹಾಯ ಗುಂಪುಗಳ ಕಾರ್ಯಕ್ರಮಗಳು

೧. ಸ್ವಸಹಾಯ ಗುಂಪುಗಳಿಗೆ ಸಂಬಂಧಪಟ್ಟಂತೆ ಒಟ್ಟು ೬೭ ಕಾರ್ಯಕ್ರಮಗಳು ನಡೆಸಲ್ಪಟ್ಟಿದೆ.

೨. ಇದರಲ್ಲಿ ತರಭೇತಿ ಪಡೆದವರು ೨೦೪೮ ಮಂದಿ

೩. ಈ ಕಾರ್ಯ ಕ್ರಮಗಳಲ್ಲಿ ಮಹಿಳೆಯರ ಸಂಖ್ಯೆ ೧೯೪೩.ಅಂದರೆ ಸುಮಾರು ಶೇ.೯೫ರಷ್ಟು ಮಹಿಳಾ ಸ್ವಸಹಾಯ ಸಂಘಗಳ ಮಹಿಳೆಯರು ಪ್ರಯೋಜನ ಪಡೆದಿದ್ದಾರೆ.

III ಕೌಶಲ್ಯಾಭಿವೃದ್ಧಿ ಯೋಜನೆಗಳು

ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆಗೆ ಬೇಕಾದ ಒಂದು ಬಹು ಮುಖ್ಯ ಅಂಶ. ಕೌಶಲ್ಯಾಭಿವೃದ್ಧಿಯ ಒಟ್ಟು ೨೪ ಕಾರ್ಯಕ್ರಮಗಳಲ್ಲಿ ೫೪೫ ಅಭ್ಯರ್ಥಿಗಳು ಭಾಗವಹಿಸಿದ್ದು, ಇದರಲ್ಲಿ ಒಟ್ಟು ೩೫೯ ಮಹಿಳೆಯರು ಪಾಲ್ಗೊಂಡಿದ್ದರು. ಶೇ.೬೬ ರಷ್ಟು ಮಹಿಳೆಯರು ಉದ್ಯಮಶೀಲತೆಗೆ ಬೇಕಾಗುವ ಕೌಶಲ್ಯವನ್ನು ಪಡೆದಿದ್ದಾರೆ.

IV ಉದ್ಯಮಶೀಲತಾ ಅರಿವು ಕಾರ್ಯಕ್ರಮಗಳು

ಉದ್ಯಮಶೀಲತಾ ಅರಿವು ಬಗ್ಗೆ ನಡೆಸಿದ ಒಟ್ಟು ೧೨೮ ಕಾರ್ಯಕ್ರಮಗಳಲ್ಲಿ ೧೧೧೩೨ ಮಂದಿ ಪ್ರಯೋಜನ ಪಡೆದಿದ್ದಾರೆ.

V ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಗ್ರಾಮೀನ ಅಭಿವೃದ್ಧಿ ಕಾರ್ಯಕ್ರಮಗಳು ಒಟ್ಟು ೧೭ ನಡೆದಿವೆ.

VI ಒಟ್ಟಾರೆಯಾಗಿ

೧. ಒಟ್ಟು ೧೯೯ ಕಾರ್ಯಕ್ರಮಗಳು ಈ ಸಂಸ್ಥೆಯಿಂದ ನಡೆಸಲ್ಪಟ್ಟಿವೆ.

೨. ೩೪೫೨ ಮಹಿಳೆಯರು ಸೇರಿದಂತೆ ಒಟ್ಟು ೫೬೯೬ ತರಭೇತಿಯನ್ನು ಪೂರ್ಣಗೊಳಿಸಿದ್ದಾರೆ.
ಈ ಅಂಕಿ ಅಂಶವು ಮಹಿಳೆಯರು ಸ್ವಾವಲಂಬಿಗಳಾಗಲು ಆಸಕ್ತಿ ತೋರಿಸುತ್ತಿರುವುದನ್ನು ಸ್ಪಷ್ಟಪಡಿಸುತ್ತದೆ.
ಇದು ಸಬಲೀಕರಣದತ್ತ ಮಹಿಳೆಯರ ಪ್ರಮುಖ ಹೆಜ್ಜೆಯಾಗಿದೆ.

೫. ತರಭೇತಿ ಪಡೆದವರಲ್ಲಿ ಸಮಾಜದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಒಟ್ಟು ೧೦೨೧, ಶೇ.೧೮ ರಷ್ಟು ಪ್ರಯೋಜನ ಪಡೆದುದು ತಿಳಿದುಬರುತ್ತದೆ.

ಸ್ಥಾಪನೆಯಾದಂದಿನಿಂದ ೩೧-೦೩-೨೦೦೯ ವರೆಗಿನ ಪ್ರಗತಿ ವಿವರಗಳು

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆಯ ಪ್ರಗತಿ

೧. ನಡೆಸಲ್ಪಟ್ಟ ಕಾರ್ಯಕ್ರಮಗಳು ಸ್ಥಾಪನೆಯಾದಂದಿನಿಂದ ೧೦ ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆಗಳು ಒಟ್ಟು ೧೫೬೫ ತರಭೇತಿ ಕಾರ್ಯಕ್ರಮಗಳು ಅದರಲ್ಲಿ ೯೭೩ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು, ೪೮೧ ಸ್ವ ಸಹಾಯ ಗುಂಪು ಕಾರ್ಯಕ್ರಮಗಳು ಮತ್ತು ೧೧೧ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸಿದೆ.

೨.ತರಭೇತಿ ಪಡೆದ ಅಭ್ಯರ್ಥಿಗಳಲ್ಲಿ ೮೫% ಗ್ರಾಮೀಣ ಮತ್ತು ಅರೆ-ಪಟ್ಟಣಕ್ಕೆ ಸೇರಿದವರು ,೧೫% ನಗರ ಪ್ರದೇಶದವರು

೩.ತರಭೇತಿ ಪಡೆದ ಅಭ್ಯರ್ಥಿಗಳ ಶೈಕ್ಷಣಿಕ ಮಟ್ಟ: ೫೭% ಶಾಲೆಯನ್ನು ಅರ್ಧಕ್ಕೆ ಬಿಟ್ಟವರು,೧೫% ಅನಕ್ಷರಸ್ಥರು, ಕಾಲೇಜು ಅರ್ಧಕ್ಕೆ ಬಿಟ್ಟವರು ೧೯% ಪದವಿ ಅರ್ಹತೆಯವರು ೮% ಮತ್ತು ಸ್ನಾತಕೋತ್ತರ

ಪದವಿ ಪಡೆದವರು ೧%.

೪.ನಿರುದ್ಯೋಗಿ ಯುವ ಜನತೆ ಮತ್ತು ಬಡವರು ಈ ಸಂಸ್ಥೆಯು ಮುಖ್ಯ ಲಕ್ಷ್ಯ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ೨೦%, ಹಿಂದುಳಿದ ವರ್ಗ ೩೮% ಅಲ್ಪ ಸಂಖ್ಯಾತರು ೧೪% ಸಾಮಾನ್ಯ ವರ್ಗ ೨೮%

೫.ಆರ್ಥಿಕ ಸ್ಥಾನಮಾನ: ೭೧% ಅಭ್ಯರ್ಥಿಗಳು ಬಡತನ ರೇಖೆಗಿಂತ ಕೆಳಗಿನವರು

೬.ಮಹಿಳೆಯರ ಪಾಲು: ೫೮% ಅಭ್ಯರ್ಥಿಗಳು ಮಹಿಳೆಯರಾಗಿದ್ದಾರೆ ಅಲ್ಲದೆ ಗ್ರಾಮೀಣ ಮಹಿಳೆಯರಿಗೆ ವಿಶೇಷ ಪ್ರಾಮುಖ್ಯತೆ ನೀಡಲಾಗಿದೆ.ವಿಶೇಷ ತರಬೇತಿಗಳಾದ ವಸ್ತ್ರ ವಿನ್ಯಾಸ.ಕಸೂತಿ.ಬ್ಯೂಟಿಷನ್ ಇತ್ಯಾದಿ ಗಳನ್ನು ಮಹಿಳೆಯರಿಗಾಗಿ ನಡೆಸಲಾಗುತ್ತಿದೆ.

೭. ಅಂಗ ವಿಕಲರಿಗೆ ತರಬೇತಿ: ೫೮೪ ಅಭ್ಯರ್ಥಿಗಳು ಅಂಗವಿಕಲರು ಅಂದರೆ ಶೇ.೧

೮. ಸರಕಾರದ ಯೋಜನೆ ಅಡಿಯಲ್ಲಿ ತರಬೇತುಗೊಳಿಸಿದ ಅಭ್ಯರ್ಥಿಗಳು ೨೩೪೯೬ ಅಂದರೆ ೪೫೫. ಅದರಲ್ಲಿ ೨೪% ಸ್ವರ್ಣ ಜಯಂತಿ ಗ್ರಾಮ್ ಸ್ವರೋಜ್ಗಾರ್ ಯೋಜನೆ, ಸ್ವರ್ಣ ಜಯಂತಿ ಶಹರಿ ಯೋಜನೆ ಮತ್ತು ಇತರ ೨೧%.

ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆಯು ೨೦೦೮-೦೯ ನೇ ಸಾಲಿನಲ್ಲಿ ಒಟ್ಟು ೩೪೯ ತರಬೇತಿ ಕಾರ್ಯಕ್ರಮಗಳನ್ನು ನಡೆಸಿದೆ. ಇದರಲ್ಲಿ ೧೨೯ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ೬೬ ಕಾರ್ಯಕ್ರಮಗಳು ಸ್ವ ಸಹಾಯ ಗುಂಪುಗಳ ಸದಸ್ಯರುಗಳಿಗೆ ನೀಡಲಾಗಿದ್ದು ೧೧ ಪ್ರಾಯೋಗಿಕ ಕೌಶಲ್ಯವನ್ನು ನೀಡುವ ಕೌಶಲ್ಯಭಿವೃದ್ಧಿ ಕಾರ್ಯಕ್ರಮಗಳಾಗಿವೆ

ಅಲ್ಲದೆ ಸ್ವ ಉದ್ಯೋಗಕ್ಕಾಗಿ ೭೪೧೨ ಅಭ್ಯರ್ಥಿಗಳಿಗೆ ೨೦೬ ತರಬೇತಿ ಕಾರ್ಯಕ್ರಮಗಳ ಮೂಲಕ ತರಬೇತಿ ನೀಡಲಾಗಿದೆ. ಒಟ್ಟು ಅಭ್ಯರ್ಥಿಗಳಲ್ಲಿ ೭೦% (೫೨೨೫) ಮಹಿಳೆಯರು. ಆ ಮೂಲಕ ಮಹಿಳಾ ಸಬಲೀಕರಣಕ್ಕೆ ಮಹತ್ವದ ಕೊಡುಗೆ ನೀಡಿದೆ.

ಒಟ್ಟು ತರಬೇತಿ ಪಡೆದವರಲ್ಲಿ ೨೨% ಪ.ಜಾ ಮತ್ತು ಪ. ಪಂ ಕ್ಕೆ ಸೇರಿದವರು ೪೨% ಹಿಂದುಳಿದ ವರ್ಗ ಮತ್ತು೧೫% ಅಲ್ಪ ಸಂಖ್ಯಾತ ವರ್ಗ ಕ್ಕೆ ಸೇರಿದವರಾಗಿದ್ದಾರೆ. ೮೧% ದಷ್ಟು ಬಡತನ ರೇಖೆಗಿಂತ ಕೆಳಗಿನವರು. ಒಟ್ಟು ತರಬೇತಿ ಪಡೆದವರಲ್ಲಿ ೪೧% (೩೦೨೨) ದಷ್ಟು ಜನರು ಬೇರೆ ಬೇರೆ ಸರ್ಕಾರದ ಪ್ರಾಯೋಜಿತ ಯೋಜನೆಯ ಅಡಿಯಲ್ಲಿ ತರಬೇತಿ ಪಡೆದವರು. ೧೯೩ ನಿರುದ್ಯೋಗಿ ಯುವಕರು ,೨೮೭೯ ಸ್ವರ್ಣಜಯಂತಿ ಗ್ರಾಮ್ ಸ್ವರೋಜ್ಗಾರ್ ಯೋಜನೆ, ಸ್ವರ್ಣ ಜಯಂತಿ ಶಹರಿ ರೋಜ್ಗಾರ್ ಯೋಜನೆ ಮತ್ತು ಇತರ ಸರಕಾರದ ಯೋಜನೆಗಳಾದ ಯಶಸ್ವಿನಿ, ಸ್ತ್ರೀ ಶಕ್ತಿ ,ಶ್ರಮ ಶಕ್ತಿ ಇತ್ಯಾದಿ ಕರ್ನಾಟಕದಲ್ಲಿ. ೨೦೦೮-೦೯ ನೇ ಸಾಲಿನಲ್ಲಿ ಸಿಂಡಿಕೇಟ್ ಪ್ರಾಯೋಜಿತ ೨೫೨೮(೩೯%) ಅಭ್ಯರ್ಥಿಗಳು ಮತ್ತು ಆರ್‌ಆರ್‌ಬಿ

ಪ್ರಾಯೋಜಿತ ೧೭೬೯(೨೭%) ಉಳಿದಂತೆ ಇತರೆ ಬ್ಯಾಂಕ್ ಮತ್ತು ಸಂಘಟನೆಗಳು ಪ್ರಾಯೋಜಿತ ೨೧೭೬ (೩೪%) ಅಭ್ಯರ್ಥಿಗಳನ್ನು ತರಬೇತು ಗೊಳಿಸಲಾಗಿದೆ.

ಸಂಸ್ಥೆಯು ತನ್ನ ಚಟುವಟಿಕೆಗಳನ್ನು ನಡೆಸಲು ನಬಾರ್ಡ್ ಹಣಕಾಸಿನ ನೆರವನ್ನು ನೀಡುತ್ತಿದೆ. ೨೦೦೮-೦೯ರಲ್ಲಿ ಎಂಟು ಎಸ್ ಐ ಆರ್.ಡಿ ಗಳಲ್ಲಿ ೭೪ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳಿಗೆ ೩೬.೦೦ ಲಕ್ಷಗಳಷ್ಟು ಹಣಕಾಸಿನ ನೆರವನ್ನು ನೀಡಿದೆ.

ಮಣಿಪಾಲದ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆಯ ಫಲಾನುಭವಿಗಳಿಂದ ಪ್ರಶ್ನಾವಳಿಯ ಮೂಲಕ ಸಂಗ್ರಹಿಸಿದ ಮಾಹಿತಿಯಲ್ಲಿ ಉದ್ಯಮಶೀಲತೆಯು ಮಹಿಳೆಯರ ಸಬಲೀಕರಣದಲ್ಲಿ ಪಾತ್ರ ವಹಿಸಿವೆ ಎಂಬುದನ್ನು ಈ ಕೆಳಗಿನ ಚಲಕಗಳನ್ನು ಬಳಸಿ ವಿಶ್ಲೇಷಿಸಲಾಗಿದೆ.

* ಮಹಿಳೆಯರ ವೈಯಕ್ತಿಕ ವಿವರಗಳಲ್ಲಿ ತಿಳಿದು ಬಂದ ಅಂಶವೆಂದರೆ ಉದ್ಯೋಗದಲ್ಲಿ ನಿರತರಾದವರು ಹೆಚ್ಚಿನವರು ೨೦-೩೦ರ ವಯಸ್ಸಿನವರು. ಆದರೆ ಉದ್ಯಮವನ್ನು ಪ್ರಾರಂಭಿಸಿದವರು. ೨೫-೩೫ರ ನಡುವಿನ ವಯಸ್ಸಿನವರು. ಅಂದರೆ ತರಭೇತಿಯ ನಂತರ ಕೂಡಲೆ ಪ್ರಾರಂಭಿಸಿಲ್ಲ. ಮಾನಸಿಕ ಸಿದ್ಧತೆಯು ಬಹುಮುಖ್ಯ ಪಾತ್ರ ವಹಿಸಿದೆ ಎಂಬುದು ತಿಳಿದು ಬರುತ್ತದೆ.

*ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಹೊಲಿಗೆಯಲ್ಲಿ ನಿರತರಾಗಿದ್ದಾರೆ. ಹೊಲಿಗೆ ಘಟಕಗಳನ್ನು ಸುಲಭವಾಗಿ ಮತ್ತು ಕಡಿಮೆ ಬಂಡವಾಳದೊಂದಿಗೆ ಪ್ರಾರಂಭಿಸಬಹುದಾದ್ದರಿಂದ ಈ ತರಭೇತಿಯನ್ನು ಪಡೆದವರೇ ಹೆಚ್ಚು.

* ಹೊಲಿಗೆಯೊಂದಿಗೆ ಕಸೂತಿ ಕೆಲಸ ಮಾಡುವವರ ಸಂಖ್ಯೆ ಸ್ವಲ್ಪ ಮಟ್ಟಿಗೆ ಇದೆ. ಎರಡೂ ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಇಂದು ಕಸೂತಿಗೆ ಬಹು ಬೇಡಿಕೆ ಇರುವುದರಿಂದ ಕಸೂತಿ ತರಭೇತಿ ಪಡೆದು ಉತ್ತಮ ಸ್ಥಿತಿಯಲ್ಲಿದ್ದಾರೆ ಎಂಬುದು ಕಂಡು ಕೊಂಡ ವಿಚಾರ.

* ಉದ್ಯೋಗ ಪ್ರಾರಂಭಿಸಿದವರಲ್ಲಿ ಹೆಚ್ಚಿನವರು ವಿವಾಹಿತರಾಗಿದ್ದಾರೆ. ಕುಟುಂಬದ ಸಹಕಾರ ಉದ್ಯಮ ಆರಂಭಿಸಲು ಅತೀ ಮುಖ್ಯ. ಹಾಗಾಗಿ ಅವಿವಾಹಿತರಿಗಿಂತ ವಿವಾಹಿತರ ಸಂಖ್ಯೆ ಹೆಚ್ಚಿರುವುದು ಕಂಡುಬರುತ್ತದೆ.

* ಶಿಕ್ಷಣದ ವಿಷಯದಲ್ಲಿ ಉದ್ಯೋಗ ನಿರತರಾದವರು ಹೆಚ್ಚಿನವರು ಹೈಸ್ಕೂಲ್ ಶಿಕ್ಷಣ ಪಡೆದವರು.

* ಉದ್ಯೋಗದಲ್ಲಿ ನಿರತರಾದವರಲ್ಲಿ ಶೇ. ೬೦ ರಷ್ಟು ಹಿಂದುಳಿದ ವರ್ಗಕ್ಕೆ ಸೇರಿದವರು, ಶೇ.೮ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ.

* ಉದ್ಯಮ ಅಥವಾ ಉದ್ಯೋಗ ಕೈಗೊಳ್ಳಲು ಪಡೆದ ತರಬೇತಿಯು ಆಸಕ್ತಿಯ ವಿಷಯವೆಂಬ ಕಾರಣಕ್ಕೆ ಆರಿಸಿಕೊಂಡಿರುವುದು ತಿಳಿದು ಬಂತು. ಉದಾ: ಹೊಲಿಗೆ, ಕಸೂತಿ, ವಸ್ತ್ರ ವಿನ್ಯಾಸ ಇತ್ಯಾದಿ.

* ಹಣಕಾಸಿನ ವಿಚಾರದಲ್ಲಿ ಕಡಿಮೆ ಬಂಡವಾಳ ಹೂಡಿ ಪ್ರಾರಂಭಿಸಬಹುದಾದ ಉದ್ಯಮಗಳಾದ ಹೊಲಿಗೆ, ಕಸೂತಿ,ಬೊಂಬೆ ತಯಾರಿಕೆ ಇತ್ಯಾದಿಗಳು ಹೆಚ್ಚಾಗಿ ಕೈಗೊಳ್ಳಲಾಗಿದೆ.

* ಬಹುಪಾಲು ಮಹಿಳೆಯರು ಮನೆಯಲ್ಲೇ ನಡೆಸಬಹುದಾದ ಉದ್ಯಮವನ್ನು ಕೈಗೊಂಡವರು ಮತ್ತು ಕಡಿಮೆ ಬಂಡವಾಳವನ್ನು ಬಯಸುವ ಉದ್ಯಮಗಳಾದ್ದರಿಂದ ಸ್ವಂತ ಬಂಡವಾಳವನ್ನೇ ಹಾಕಿದವರು. ಆದರೆ ಮನೆಯಿಂದ ಹೊರಗಡೆ ನಡೆಸಲ್ಪಡುವ ಉದ್ಯಮಗಳಿಗೆ ಬ್ಯಾಂಕುಗಳ ನೆರವನ್ನು ಪಡೆಯಲಾಗಿದೆ. ಬ್ಯಾಂಕುಗಳ ಯೋಜನೆಗಳಾದ ಪ್ರಧಾನ ಮಂತ್ರಿ ರೋಜಗಾರ್ ಯೋಜನೆ ಮತ್ತು ಸ್ವರ್ಣ ಜಯಂತಿ ಗ್ರಾಮ್ ಸ್ವರೋಜ್‌ಗಾರ್ ಯೋಜನೆಯಡಿಯ ಫಲಾನುಭವಿಗಳಾಗಿದ್ದಾರೆ.

* ತರಭೇತಿ ಮುಗಿಸಿದ ತಕ್ಷಣವೆ ಪ್ರಾರಂಭಿಸಿದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆರ್ಥಿಕ ಅಗತ್ಯತೆ ಅವರನ್ನು ಉದ್ಯೋಗ ಆರಂಭಿಸಲು ಪ್ರೇರೇಪಿಸಿದ್ದು ತಿಳಿದು ಬರುತ್ತದೆ.

* ಸ್ವಂತ ಕಟ್ಟಡಗಳಲ್ಲಿ ಉದ್ಯಮ ನಡೆಸುತ್ತಿರುವವರ ಸಂಖ್ಯೆ ವಿರಳ, ಇಲ್ಲವೆ ಎಂದು ಹೇಳಬಹುದು. ಪ್ರತಿಕ್ರಿಯೆ ನೀಡಿದವರಲ್ಲಿ ಯಾರೂ ಸ್ವಂತ ಕಟ್ಟಡದಲ್ಲಿ ಉದ್ಯಮ ನಡೆಸುತ್ತಿಲ್ಲ.

* ಎದುರಿಸುತ್ತಿರುವ ಸಮಸ್ಯೆಗಳಲ್ಲಿ, ವರ್ಷದ ಕೆಲವು ದಿನಗಳಲ್ಲಿ ಮಾತ್ರ ಬೇಡಿಕೆ ಇದ್ದು, ಉಳಿದ ಸಮಯದಲ್ಲಿ ಸಾಧಾರಣ ಅಥವಾ ಕಡಿಮೆ ಸಿಗುತ್ತಿರುವವರು.

* ಉದ್ಯಮ ಪ್ರಾರಂಭಿಸಿದವರು ಎಲ್ಲರೂ ಗ್ರಾಮೀಣ ಪ್ರದೇಶಕ್ಕೆ ಸೇರಿದವರಾಗಿದ್ದಾರೆ.

* ಆದಾಯದಲ್ಲಿ ವಿಷಯದಲ್ಲಿ ಹೆಚ್ಚಿನ ಮಹಿಳೆಯರು ೫೦೦೦ಕ್ಕಿಂತ ಕಡಿಮೆ ಮಾಸಿಕ ಸಂಬಳ ಗಳಿಸುತ್ತಿರುವುದು. ಇದು ಬಂಡವಾಳ ಮತ್ತು ಆದಾಯವು ನೇರ ಅನುಪಾತದಲ್ಲಿ ಇರುವುದು ತಿಳಿದುಬರುತ್ತದೆ. ಹೆಚ್ಚಿನ ಉದ್ಯಮಗಳು ಮನೆಯಲ್ಲೇ ನಡೆಸಲ್ಪಡುತ್ತಿರುವುದು, ಬೇಡಿಕೆ ಕಡಿಮೆ ಇರುವುದು ಇದಕ್ಕೆ ಕಾರಣ.

* ಹಾಗಾಗಿ ಉದ್ಯಮವು ಸಾಧಾರಣ ಮಟ್ಟಿಗೆ ಲಾಭದಾಯಕವಾಗಿದೆ ಎನ್ನುವ ತೀರ್ಮಾನಕ್ಕೆ ಬರಲಾಗಿದೆ.

* ಸ್ವಂತ ಉದ್ದಿಮೆ ನಡೆಸುತ್ತಿರುವವರು ೫ ಕ್ಕಿಂತಲೂ ಕಡಿಮೆ ಜನರಿಗೆ ಉದ್ಯೋಗ ಕಲ್ಪಿಸಿಕೊಟ್ಟಿದ್ದಾರೆ. ಏಕೆಂದರೆ ಘಟಕವು ಸಣ್ಣದಾಗಿದ್ದು ವ್ಯವಹಾರ ಕಡಿಮೆ ಇರುವುದರಿಂದ ಎಂಬ ಕಾರಣಕ್ಕೆ, ಕೆಲಸಗಾರರು ಕಡಿಮೆ.

* ಆದರೆ ಗಮನಿಸಬೇಕಾದ, ಪ್ರಸ್ತುತ ಅಧ್ಯಯನಕ್ಕೆ ಬೇಕಾದ ಮುಖ್ಯ ಮಾಹಿತಿಗಳಲ್ಲಿ ಒಂದಾದ ಉದ್ಯಮ ಕೈಗೊಂಡ ನಂತರ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆ ಎಂಬುದು ಪ್ರತಿಕ್ರಿಯಿಸಿದವರು ಹೆಚ್ಚು. ಉದ್ಯೋಗ


ಕೈಗೊಳ್ಳುವ ಮೊದಲು ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ ಎಂಬುದು ಅಭಿಪ್ರಾಯ.

* ಸಂಸ್ಥೆಯಿಂದ ಪಡೆದ ತರಭೇತಿಯ ಬಗೆಗೆ ಮಹಿಳೆಯರಲ್ಲಿ ಪೂರ್ಣ ತೃಪ್ತಿ ಇದೆ. ಅದನ್ನು ಚೆನ್ನಾಗಿಯೂ ಬಳಸಿಕೊಳ್ಳುತ್ತಿದ್ದಾರೆ ಎಂದು ತಿಳಿಸಲಾಗಿದೆ.

ಸಂಸ್ಥೆಯಿಂದ ಲಭ್ಯವಾದ ಅಂಕಿ ಅಂಶಗಳು ಮತ್ತು ಸಂಗ್ರಹಿಸಿದ ಅಂಕಿ ಅಂಶಗಳ ವಿಶ್ಲೇಷಣೆಯಿಂದ ತಿಳಿದುಬರುವುದೇನಂದರೆ ಸಂಸ್ಥೆಯು ಉದ್ಯಮಶೀಲತಾ ತರಭೇತಿಗಳು ಗ್ರಾಮೀಣ ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಬೆಳೆಸಿ ಸ್ವಾವಲಂಬಿಗಳನ್ನಾಗಿ ಮಾಡಿ ಅವರ ಸಬಲೀಕರಣದಲ್ಲಿ ಮಹತ್ತರ ಪಾತ್ರವನ್ನು ವಹಿಸಿದೆ.

೫.೨ ಒಂದು ಮಾದರಿ

ಮಹಿಳಾ ಸಬಲೀಕರಣದ ಒಂದು ಮಾದರಿ.



ಅಧ್ಯಾಯ–೬: ಸಾರ ಮತ್ತು ಕೊನೆಮಾತು

- ಸಾರ
- ಅಧ್ಯಯನದ ಶೋಧ
- ಕೊನೆಮಾತು
- ಸಲಹೆ ಸೂಚನೆಗಳು

ಅಧ್ಯಾಯ-೬: ಸಾರ ಮತ್ತು ಕೊನೆಮಾತು

೬.೧ ಸಾರ

ಹಳ್ಳಿಗಳು ದೇಶದ ಬೆನ್ನೆಲುಬು. ಯಾವುದೇ ಅಭಿವೃದ್ಧಿ ಕಾರ್ಯಗಳು ಹಳ್ಳಿಗಳನ್ನು ಕೇಂದ್ರವಾಗಿಸಬೇಕು. ಕಾರಣ ರಾಷ್ಟದ ಒಟ್ಟು ಮಾನವ ಸಂಪನ್ಮೂಲದ ಶೇ.೭೦ ರಷ್ಟು ಜನಸಂಖ್ಯೆ ಹಳ್ಳಿಗಳಲ್ಲೇ ವಾಸಿಸುತ್ತಿರುವುದು. ಗ್ರಾಮಗಳ ಉದ್ಧಾರದಿಂದ ದೇಶದ ಉದ್ಧಾರ ಸಾಧ್ಯ. ಸಮಾಜದ ಅಭಿವೃದ್ಧಿಯ ಮುಖ್ಯ ಸೂಚಕ ಮಹಿಳೆಯರ ಸ್ಥಾನಮಾನ. ಮಾನವ ಸಂಪನ್ಮೂಲದ ಅರ್ಧದಷ್ಟು ಪ್ರತಿನಿಧಿಸಲ್ಪಟ್ಟಿರುವ ಅವರು ಅಂಚಿಗೆ ಸರಿಸಲ್ಪಟ್ಟಿದ್ದಾರೆ. ಮಹಿಳೆಯರನ್ನು ಅಭಿವೃದ್ಧಿಯಲ್ಲಿ ಪುರುಷರಿಗೆ ಸಮಾನ ಪಾಲುದಾರರು ಎಂದು ಪರಿಗಣಿಸಿದಾಗ ಮಾತ್ರವೇ ದೇಶದ ಸರ್ವತೋಮುಖ ಬೆಳವಣಿಗೆಯಾಗಲು ಸಾಧ್ಯ. ಮಹಿಳೆಯರ ಕ್ರಿಯಾಶೀಲ ಭಾಗವಹಿಸುವಿಕೆ ಇಲ್ಲದೆ ಅವಿಶ್ರಾಂತ ಅಭಿವೃದ್ಧಿ ಅಸಾಧ್ಯ ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಇಂದು ಎಲ್ಲೆಡೆ ಕೇಳಿಬರುತ್ತಿರುವ ಅಭಿವೃದ್ಧಿಯ ಪರಿಕಲ್ಪನೆ ಎಂದರೆ ಒಳಗೊಳ್ಳುವ ಅಭಿವೃದ್ಧಿ. ಆದ್ದರಿಂದ ಇಂದು ತ್ವರಿತ ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಮಹಿಳೆಯರನ್ನು ಉದ್ಯಮಶೀಲತಾ ರಂಗಕ್ಕೆ ಕರೆತರಬೇಕಾದ ಅಗತ್ಯವಿದೆ.

ಮಹಿಳಾ ಸಬಲೀಕರಣದ ಗುರಿ ಸಾಧನೆಗೆ ಆರ್ಥಿಕ ಭದ್ರತೆಯೇ ಮೂಲ ಮಂತ್ರ. ಮಹಿಳೆಯರ ಸಬಲೀಕರಣದ ವಿಷಯದಲ್ಲಿ ಆರ್ಥಿಕ ಸ್ವಾವಲಂಬನೆಯು ಪ್ರಮುಖ ಪಾತ್ರ ವಹಿಸುತ್ತದೆ. ಅಶಕ್ತ ಮಹಿಳೆಯರು ಆರ್ಥಿಕ ಸ್ವಾವಲಂಬಿಗಳಾಗಲು ಉದ್ಯಮಶೀಲತೆ ಗುಣವನ್ನು ಬೆಳೆಸಬೇಕಾಗಿದೆ. ಉದ್ಯಮಶೀಲತೆಯು ಮಹಿಳೆಯರನ್ನು ಆರ್ಥಿಕ ಸ್ವಾವಲಂಬಿಗಳಾಗಲು ಪ್ರೇರೇಪಿಸುತ್ತದೆ. ಇದಕ್ಕಾಗಿ ಕೈಗೊಂಡ ಈ ಅಧ್ಯಯನವು ಒಂದು ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆಯ ಪ್ರಕರಣವನ್ನು ಬಳಸಿಕೊಂಡು ಸಬಲೀಕರಣಕ್ಕೆ ಉದ್ಯಮಶೀಲತೆಯು ಯಾವ ರೀತಿ ಸಹಕರಿಸಿದೆ ಎಂಬುದನ್ನು ಸ್ಥಳೀಯ ಚೌಕಟ್ಟಿನಲ್ಲಿ ವಿವರಿಸಿದೆ. ವಿಶ್ಲೇಷಣೆ ಭಾಗದಲ್ಲಿ ಸಂಗಹಿಸಿದ ಮಾಹಿತಿಯಲ್ಲಿನ ಕಂಡುಕೊಂಡ ವಿಚಾರವನ್ನು ವಿವರಿಸಲಾಗಿದೆ. ಗ್ರಾಮೀಣ ವಲಯದ ಮಹಿಳೆಯರ ಸಬಲೀಕರಣದಲ್ಲಿ ಉದ್ಯಮಶೀಲತೆಯು ವಹಿಸುವ ಪಾತ್ರ ಹಿರಿದಾದುದು ಮತ್ತು ಮಹತ್ವವಾದುದು.

ಮೊದಲನೆಯ ಅಧ್ಯಯದಲ್ಲಿ ಅಧ್ಯಯನದ ಉದ್ದೇಶಗಳು, ವ್ಯಾಪ್ತಿ, ಮಹತ್ವ, ಅಧ್ಯಯನ ಪ್ರದೇಶದ ಪರಿಚಯವನ್ನು ನೀಡಲಾಗಿದೆ. ಯಾವ ಉದ್ದೇಶಗಳನ್ನು ಮುಂದಿಟ್ಟುಕೊಂಡು ಅಧ್ಯಯನವನ್ನು ಕೈಗೊಳಾಲಾಗಿದೆ, ಅಧ್ಯಯನವು ಏಕೆ ಮಹತ್ವಪೂರ್ಣವಾಗಿದೆ, ವ್ಯಾಪ್ತಿಯಲ್ಲಿ ಯಾವೆಲ್ಲಾ ಪರಿಕಲ್ಪನೆಗಳನ್ನು, ವಿಷಯಗಳನ್ನು ಬಳಸಿಕೊಳ್ಳಲಾಗಿದೆ ಎಂದು ವಿವರಿಸಲಾಗಿದೆ. ಅಧ್ಯಯನವು ಒಂದು ಸಂಸ್ಥೆಗೆ ಸಂಬಂಧಿಸಿದ್ದರಿಂದ ಅ ಸಂಸ್ಥೆಯು ಕಾರ್ಯ ವೆಸಗುತ್ತಿರುವ ಪ್ರದೇಶವಾದ ಉಡುಪಿ ಜಿಲ್ಲೆಯ ಚಿತ್ರಣವನ್ನು ನೀಡಲಾಗಿದೆ.

ಎರಡನೆ ಅಧ್ಯಯದಲ್ಲಿ ಅಭಿವೃಧ್ಧಿ, ಸಬಲೀಕರಣ, ಮಹಿಳೆ ಮತ್ತು ಅಭಿವೃದ್ಧಿಯ ಬಗ್ಗೆ ತಿಳಿಸಲಾಗಿದೆ. ಸಬಲೀಕರಣದ ನಿರೂಪಣೆ, ಅಭಿವೃದ್ಧಿಯ ಬದಲಾದ ಪರಿಕಲ್ಪನೆ, ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ, ಮಹಿಳೆಯರ ಸಬಲೀಕರಣ ಎಂಬಿತ್ಯಾದಿ ವಿಷಯಗಳನ್ನು ಚರ್ಚಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಅಧ್ಯಯನದ ಪ್ರಮುಖ ವಿಷಯವಾಗಿರುವ ಉದ್ಯಮಶೀಲತೆ, ಗ್ರಾಮೀಣಾಭಿವೃದ್ಧಿ, ಉದ್ಯಮಶೀಲತೆ ಮತ್ತು ಮಹಿಳಾ ಸಬಲೀಕರಣ ಮುಂತಾದ ವಿಷಯಗಳ ಬಗ್ಗೆ ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಸಂಸ್ಥೆಯಿಂದ ಪಡೆದ ಮಾಹಿತಿ, ಸಂಸ್ಥೆಯ ಧ್ಯೇಯೋದ್ಧೇಶಗಳು, ಲಕ್ಷ್ಯ, ಕಾರ್ಯವ್ಯಾಪ್ತಿ, ತರಭೇತಿಗಳು, ವ್ಯಕ್ತಿತ್ವವಿಕಸನ ಇತ್ಯಾದಿ ವಿಷಯಗಳನ್ನು ವಿವರಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಸಂಗ್ರಹಿಸಿ ಮಾಹಿತಿಯ ವಿಶ್ಲೇಷಣೆ ಮಾಡಲಾಗಿದೆ. ಮತ್ತು ವಿಶ್ಲೇಷಣೆಯಿಂದ ತಿಳಿದು ಬಂದ ಅಂಶವಾದ ಸಬಲೀಕರಣದಲ್ಲಿ ಉದ್ಯಮಶೀಲತೆಯ ಪಾತ್ರವನ್ನು ವಿವರಿಸಲಾಗಿದೆ.

ಕೊನೆಯ ಅಧ್ಯಾಯದಲ್ಲಿ ಇಡೀ ಅಧ್ಯಾಯನದ ಸಾರ, ಶೋಧ, ಕೊನೆಮಾತು ಮತ್ತು ಮಹಿಳಾ ಸಬಲೀಕರಣಕ್ಕೆ ಬೇಕಾದ ಸಲಹೆ ಸೂಚನೆಗಳನ್ನು ನೀಡಲಾಗಿದೆ.

೬.೨ ಅಧ್ಯಯನದ ಶೋಧ:

ಅಭಿವೃದ್ದಿಯು ದೇಶದ ಮಾನವ ಸಂಪನ್ಮೂಲದ ಪೂರ್ಣ ಪ್ರಮಾಣದ ಬಳಕೆಯನ್ನು ಬಯಸುತ್ತದೆ. ಮಾನವ ಸಂಪನ್ಮೂಲದ ಮುಖ್ಯ ಭಾಗವಾಗಿರುವ ಮಹಿಳೆಯರನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು ಎಂಬುದು ಕಂಡುಕೊಂಡ ವಿಚಾರ. ಮಾತ್ರವಲ್ಲದೆ ಗ್ರಾಮೀಣ ಮಹಿಳೆಯರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಭಾರತೀಯ ಗ್ರಾಮೀಣ ಮಹಿಳೆಯರ ಅಭಿವೃದ್ಧಿಯನ್ನು ಸರಿಯಾಗಿ ವಿಶ್ಲೇಷಿಸಲು ಮತ್ತಷ್ಟು ಅಧ್ಯಯನದ ಅವಶ್ಯಕತೆ ಇದೆ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರು ಯಾವ ರೀತಿ ಒಳಗೊಳ್ಳಲ್ಪಟ್ಟರು ಮತ್ತು ಅಭಿವೃದ್ಧಿಯಲ್ಲಿ ಹೇಗೆ ಸ್ವೀಕರಿಸಲ್ಪಟ್ಟರು ಎಂಬುದು ಗಮನಿಸಬೇಕಾದ ಇನ್ನೊಂದು ಅಂಶ.

ಮಹಿಳಾ ಸಶಕ್ತೀಕರಣ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು ಅವರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರಲು ಅವರನ್ನು ಉದ್ಯಮಶೀಲರನ್ನಾಗಿ ಮಾಡಬೇಕು. ಉದ್ಯಮಲೋಕದಲ್ಲಿ ಸ್ತ್ರೀಯರನ್ನು ಉದ್ಯಮಿಗಳನ್ನಾಗಿ ಮಾಡದ ಹೊರತು ಅವರ ಅರ್ಹತೆ ಮತ್ತು ಶಕ್ತಿಯನ್ನು ಗುರುತಿಸಲು ಸಾಧ್ಯವಿಲ್ಲ. ಮಹಿಳೆಯರ ಬಗೆಗಿನ ಪುರುಷ ಸಮುದಾಯದ ನಿಲುವು ಬದಲಾಗಿರುವುದು ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಬೆಳೆಸಲು ಮತ್ತಷ್ಟು ಸಹಕಾರಿಯಾಗಲಿದೆ. ಹಾಗಾಗಿಯೇ ಇಂದು ಮಹಿಳೆಯರು ಉದ್ಯಮದತ್ತ ಆಕರ್ಷಿತರಾಗುತ್ತಿದ್ದಾರೆ.

ಉದ್ಯಮಶೀಲತೆಯು ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಪ್ರೇರೇಪಿಸುತ್ತದೆ. ಈ ಪ್ರಕರಣದ ಅಧ್ಯಯನದಿಂದ ಸರಕಾರೇತರ ಸಂಘ ಸಂಸ್ಥೆಗಳು ಮಹಿಳೆಯರ ಸಬಲೀಕರಣಕ್ಕೆ ಉದ್ಯಮಶೀಲತೆಯನ್ನು ಅಸ್ತ್ರವನ್ನಾಗಿ ಮಾಡಿಕೊಂಡು ಮಹಿಳಾ ಸಬಲೀಕರಣ ಮತ್ತು ಗ್ರಾಮೀಣಾಭಿವೃದ್ಧಿಯೆಂಬ ತನ್ನ ಹೆಗ್ಗುರಿಯನ್ನು ಸಾಧಿಸುವಲ್ಲಿ ಸಫಲವಾಗಿವೆ ಎಂದು ಹೇಳಬಹುದು.

೬.೩ ಕೊನೆ ಮಾತು

ಇಂದು ನಾವು ಸಮಾನತೆಯೆಡೆಗೆ ಸಾಗುವ ಉದ್ದೇಶದಿಂದ ಸಬಲೀಕರಣದೆಡೆಗೆ ಸಾಗುತ್ತಿದ್ದೇವೆ. ಭಾರತವು ಒಂದು

ಮುಂದುವರಿಯುತ್ತಿರುವ ರಾಷ್ಟ್ರವೆಂದು ಹೇಳುವಾಗ ಆ ಮುಂದುವರಿಕೆಯಲ್ಲಿ ಮಹಿಳಾ ಸಮುದಾಯದಲ್ಲಿ ಆದಂತಹ ಪ್ರಗತಿಯನ್ನೂ ಒಳಗೊಂಡಿರಬೇಕು. ಮಹಿಳೆಯರು ಎಲ್ಲಿಯವರೆಗೆ ಅಡಿಯಾಳು ಸ್ಥಾನದಲ್ಲಿರುತ್ತಾರೋ ಮತ್ತು ತಮ್ಮ ಪ್ರತಿಭೆಗಳನ್ನು ತೋರ್ಪಡಿಸಲು ಸಾಧ್ಯವಿಲ್ಲವೋ ಅಲ್ಲಿಯವರೆಗೆ ದೇಶದ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಕಾಣಲು ಸಾಧ್ಯವಿಲ್ಲ. ದೇಶದ ಮಾನವ ಸಂಪನ್ಮೂಲದ ಬಹು ಭಾಗವಾಗಿರುವ ಅವರು ದೇಶದ ಅಭಿವೃದ್ಧಿ ಮತ್ತು ಉತ್ಪಾದಕತೆಯಲ್ಲಿ ಪ್ರಮುಖ ಕೊಡುಗೆ ನೀಡಿದ್ದಾರೆ. ಹಾಗಿರುವಾಗ ಸಮಾಜದ ಕಲ್ಯಾಣಕ್ಕೆ ಲಿಂಗ ಸಮಾನತೆಯನ್ನು ಕಾಯ್ದುಕೊಳ್ಳಬೇಕಾಗಿರುವುದು ಮತ್ತು ಮಹಿಳೆಯರನ್ನು ಉತ್ಪಾದನೆಯ ಏಜೆಂಟ್‌ಗಳನ್ನಾಗಿ ಮಾಡಬೇಕು. ದೇಶದ ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ತಮ್ಮ ಸಾಮರ್ಥ್ಯವನ್ನು ಹೊರಗೆಡಹಿ, ಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಪ್ರೋತ್ಸಾಹಿಸಬೇಕು. ಹೆಚ್ಚಿನ ರಂಗಗಳಲ್ಲಿ ಮಹಿಳೆಯರು ಯಶಸ್ವಿ ಉದ್ಯಮಿಗಳಗುವ ಮೂಲಕ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಉದ್ಯಮಶೀಲತೆಯನ್ನು ಆಯ್ದುಕೊಳ್ಳುವ ಅಗತ್ಯತೆ ಮಹಿಳೆಯರಿಗಿದೆ.

ಸಣ್ಣ ಉದ್ದಿಮೆ ವಲಯದಲ್ಲಿ ಸ್ವ ಉದ್ಯೋಗಕ್ಕೆ ಹೇರಳ ಅವಕಾಶಗಳು ಇರುವುದು ಮಾತ್ರವಲ್ಲದೆ, ಆರ್ಥಿಕ ಸ್ವಾವಲಂಬನೆಗೆ ಸ್ವ ಉದ್ಯೋಗವು ದಾರಿ ಮಾಡಿಕೊಡುತ್ತದೆ. ಯಶಸ್ಸು ಸಾಧಿಸಲು ಮತ್ತು ಪರಿಪೂರ್ಣತೆಗೆ ಯೋಜನೆ ಮಾಡಿಕೊಳ್ಳಬೇಕು. ಸಮಗ್ರ ಅಭಿವೃದ್ಧಿ ಅಶಕ್ತರನ್ನು ಸಶಕ್ತರನ್ನಾಗಿ ಆರ್ಥಿಕ ಸ್ವಾವಲಂಬಿಗಳಾಗಳನ್ನಾಗಿ ಮಾಡುವುದು ಗ್ರಾಮೀಣ ಬದುಕಿನ ಆಶಾಕಿರಣ. ಕೇರಳದ ಸರದಾಮೊನಿ ಎಂಬ ವಿಚಾರವಾದಿ ಹೇಳುವುದೇನೆಂದರೆ ಮಹಿಳೆ ಯಾವಾಗ ಒಬ್ಬ ಸ್ವತಂತ್ರ ವ್ಯಕ್ತಿಯಾಗಿ ಅಭಿವೃದ್ಧಿ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾಳೊ, ಆಗ ಅಭಿವೃದ್ಧಿ ಎಂಬ ಪದದ ಮರುವ್ಯಾಖ್ಯಾನ ಅವಶ್ಯಕ. ಗ್ರಾಮೀಣ ಪ್ರದೇಶಗಳಲ್ಲಿ ಜನರನ್ನು ಮುಖ್ಯವಾಗಿ ಮಹಿಳೆಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮೆಲೆತ್ತುವ ಪ್ರಯತ್ನ ಮಾಡದಿದ್ದಲ್ಲಿ ಆರ್ಥಿಕ ಉನ್ನತಿ ಒಂದು ಹಗಲು ಕನಸು ಮಾತ್ರ..

ದೇಶದ ಸರ್ವಾಂಗೀಣ ಪ್ರಗತಿಗಾಗಿ ಮಹಿಳೆಯರು ಸಲ್ಲಿಸುತ್ತಿರುವ ಸೇವೆ ಅತೀ ದೊಡ್ಡದು ಹಾಗೂ ಅಮೋಘವಾದುದು. ಆದ್ದರಿಂದಲೇ ಅವರನ್ನು ಅವರ ಶಕ್ತಿಯನ್ನು ಗುರುತಿಸಿ, ಅಭಿವೃದ್ಧಿ ಪಥದಲ್ಲಿ ಮುನ್ನಡೆಯುವ ಅವಶ್ಯಕತೆ ಇದೆ. ಇದರಲ್ಲಿ ಬರಿಯ ಅವರ ಪ್ರಗತಿ ಮಾತ್ರವಲ್ಲದೆ, ದೇಶದ ಪ್ರಗತಿಯೂ ಸಹ ಅಡಕವಾಗಿದೆ.

೬.೪ ಸಲಹೆ ಸೂಚನೆಗಳು:

ದೇಶದ ಕೈಗಾರಿಕಾಭಿವೃದ್ಧಿಗೆ ಉದ್ಯಮಶೀಲತೆಯು ಅವಶ್ಯಕವಾಗಿರುವುದರಿಂದ ಉದ್ಯಮಶೀಲತೆಯನ್ನು ಬೆಳೆಸುವುದು ಇಂದಿನ ಅಗತ್ಯತೆಯಾಗಿದೆ. ಅದರಲ್ಲಿ ಮಹಿಳಾ ಉದ್ಯಮಶೀಲತೆಯನ್ನು ಅಭಿವೃದ್ಧಿ ಪಡಿಸುವುದು ತುಂಬಾ ಅವಶ್ಯಕವಾದ ಅಂಶವಾಗಿದೆ.

ಮಹಿಳಾ ಸಬಲೀಕರಣ ಮತ್ತು ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕೆಲವು ಉಪಯುಕ್ತ ಸಲಹೆಗಳನ್ನು ನೀಡಲಾಗಿದೆ.

* ಮೊದಲನೆಯದಾಗಿ ಲಿಂಗ ಸಮಾನತೆಗೆ ಒತ್ತು ಕೊಡಬೇಕು.

* ಎರಡನೆಯದಾಗಿ, ಮಹಿಳೆಯರ ಶಿಕ್ಷಣಕ್ಕೆ ಮಹತ್ವ ನೀಡುವುದು.

* ಮೂರನೆಯದಾಗಿ ಮಹಿಳೆಯರಿಗಾಗಿಯೇ ಪ್ರತ್ಯೇಕ ಯೋಜನೆ ರೂಪಿಸುವುದು. ಅಂಚಿನ ಸಮುದಾಯಗಳಿಗೆ ಸಹಾಯಧನ, ವಿಶೇಷ ಪ್ಯಾಕೇಜ್ ಕಲ್ಪಿಸಬೇಕು.

* ನಾಲ್ಕನೆಯದಾಗಿ, ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಯಾಗಲು, ಅವರಲ್ಲಿ ಅಡಗಿರುವ ಪ್ರತಿಭೆ, ಸಾಮರ್ಥ್ಯಗಳನ್ನು ಹೊರತರಲು ಸರಕಾರ ಹಾಗೂ ಸರಕಾರೇತರ ಸಂಸ್ಥೆಗಳ ಮಧ್ಯ ಪ್ರವೇಶ ಅವಶ್ಯಕ.

* ಐದನೆಯದಾಗಿ, ಸರಕಾರವು ಉದ್ಯಮದ ವಿಚಾರದಲ್ಲಿ ಪ್ರಮುಖ ನಿರ್ಧಾರ ಕೈಗೊಳ್ಳುವಾಗ ಮಹಿಳಾ ಉದ್ಯಮಿಗಳ ನಿಲುವನ್ನು, ಅವರ ಅಭಿಪ್ರಾಯವನ್ನು ಪರಿಗಣಿಸಬೇಕು.

* ಮಹಿಳಾ ಉದ್ಯಮಿಗಳು ಪರಸ್ಪರ ಸಂಘಟಿತರಾಗಿ, ತಮ್ಮ ನಡುವೆ ಸಂಪರ್ಕ ಜಾಲ ಏರ್ಪಡಿಸಿಕೊಂಡು, ತಾವು ಯಶಸ್ವಿ ಉದ್ಯಮಿಗಳಾಗಿ ಇತರ ಮಹಿಳೆಯರನ್ನೂ ಉದ್ಯಮಿಗಳನ್ನಾಗಿ ರೂಪಿಸುವಂತಾಗಬೇಕು.

* ಮಹಿಳೆಯರು ಉದ್ಯಮ ನಡೆಸುವುದನ್ನು ಒಂದು ಪರ್ಯಾಯ ಮತ್ತು ಒಂದು ವೃತ್ತಿಯಾಗಿ ಆಯ್ಕೆ ಮಾಡಿಕೊಳ್ಳುವಂತೆ ಪ್ರೇರೇಪಿಸಬೇಕು.

* ಮಹಿಳೆಯರು ಉದ್ಯಮ ಕ್ಷೇತ್ರವನ್ನು ಪ್ರವೇಶಿಸುವ ಮೊದಲು ಔಪಚಾರಿಕ ತರಭೇತಿ ಪಡೆಯುವುದು ಅವಶ್ಯಕ. ಮಹಿಳೆಯರಿಗೆ ವಿಶೇಷ ತರಭೇತಿ ನೀಡಲು ಉದ್ಯಮ ತರಭೇತಿ ಕೇಂದ್ರಗಳ ಸ್ಥಾಪನೆಯಾಗಬೇಕು. ಅದರಲ್ಲಿಯೂ ಬಡ ಮಹಿಳೆಯರಿಗೆ ಉಚಿತ ತರಭೇತಿ ವ್ಯವಸ್ಥೆಯಾಗಬೇಕು. ಯಶಸ್ವಿ ಮಹಿಳಾ ಉದ್ಯಮಿಗಳು ತರಭೇತುದಾರರಾಗಿ ಮತ್ತು ಮುಖ್ಯ ಸಂಘಟಕಾರಾಗಿ ಕೆಲಸ ಮಾಡಬೇಕು.

* ಮಹಿಳಾ ಸಂಘಟನೆಗಳನ್ನು ಸಧೃಡಗೊಳಿಸುವುದು. ಮಹಿಳಾ ಸಂಘಟನೆಗಳು ಉದ್ಯಮಶೀಲತೆಯಂತಹ ಆರ್ಥಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಬೇಕು.


* ಉದ್ಯಮಶೀಲತಾ ಅಭಿವೃದ್ಧಿ ಯೋಜನೆಗಳಲ್ಲಿ ಮಹಿಳಾ ಉದ್ಯಮಶೀಲತೆಯನ್ನು ಪ್ರತ್ಯೇಕವಾಗಿ ಪರಿಗಣಿಸಿದಲ್ಲಿ, ಮಹಿಳಾ ಉದ್ಯಮಶೀಲತೆಗೆ ಹೆಚ್ಚಿನ ಪ್ರೋತ್ಸಾಹ ದೊರಕಬಹುದು. ಗ್ರಾಮೀಣ ಮಹಿಳೆಯರು ನಾನಾ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದರಿಂದ ಅವುಗಳ ಪರಿಹಾರಕ್ಕೆ ಸರಕಾರ ವಿಶೇಷ ಕಾಳಜಿ ವಹಿಸಬೇಕು.

ಗ್ರಾಮೀಣ ಮಹಿಳಾ ಉದ್ಯಮಿಗಳ ಸಮಸ್ಯೆಗಳನ್ನು ಪರಿಹರಿಸಲು ಸೂಕ್ತವಾದ ಶಾಸನಗಳನ್ನು ರೂಪಿಸಬೇಕು. ಇಂತಹ ಉದ್ಯಮಿಗಳಿಗೆ ಪ್ರೋತ್ಸಾಹಿಸಲು ಉದಾರ ನೀತಿಯನ್ನು ಅನುಸರಿಸಬೇಕು.

ಗ್ರಾಮೀಣ ಮಹಿಳೆಯರು ಗ್ರಾಮೀಣಾಭಿವೃದ್ಧಿಯ ಕೇಂದ್ರ ಬಿಂದು ಆಗಿರುವುದರಿಂದ ಅವರ ಏಳಿಗೆಯು ಆರ್ಥಿಕ ಅಭಿವೃದ್ಧಿಯೊಂದಿಗೆ ಸಹ್ಯ ಅಭಿವೃದ್ಧಿಗೆ ದಾರಿ ಮಾಡಿಕೊಡುವುದರಲ್ಲಿ ಎರಡು ಮಾತಿಲ್ಲ.

ಅನುಬಂಧ I

ಕರ್ನಾಟಕದಲ್ಲಿ ಉಡುಪಿ ಜಿಲ್ಲೆ



ಉಡುಪಿ ಜಿಲ್ಲೆ


UDIPI
District Map
N
Uttara Kannada
Shivamogga
Chikmagalur
Dakshina Kannada
ARABIAN SEA
Kadike
Goliguddej
Mavinakaru
Golihole
Jadkal
Muduru
Ambaglu
Aluru
Chittur
Talahurane
Baregundi
Vandse
Harmannu
Doltinaberu
Nachchattu
Halaski Hola
Kundapura
Nettukalluguddo
Koteswar
Thalamakki
Surkodlu
Someshvar
Hangarkatta
Kokkaroni
Shivapura
Chantaru
Kud tola
Tonse
Bommarubettu
Ajekar
UDUPI
Nagabail
Umikal
Pemankile
Pangala
Pitarkan
Karkal
Bija
Yermal
Kanyala
Sanuru
Kodlamale
Kadandale
Map not to Scale
Copyright © 2007 Compare Infobase Limited
LEGEND
District Boundary
National Highway
Major Road
Railway
District Headquarter
Major Town
Other Town
River

ಅನುಬಂಧ II

ಗ್ರಾಮೀಣ ಮಹಿಳಾ ಸಬಲೀಕರಣದಲ್ಲಿ ಉದ್ಯಮಶೀಲತೆಯ ಪಾತ್ರ: ಒಂದು ಪ್ರಕರಣ ಅಧ್ಯಯನ

೧. ವೈಯಕ್ತಿಕ ವಿಚಾರ

೨. ಸಾಮಾಜಿಕ ವಿಚಾರ

೩. ಆರ್ಥಿಕ ವಿಚಾರ

೧. ವೈಯಕ್ತಿಕ ಮತ್ತು ಕೌಟುಂಬಿಕ ವಿಚಾರ:

೧.೧ ಮಾಹಿತಿದಾರನ ಹೆಸರು:

೧.೨. ವಿಳಾಸ(ತಾಲೂಕು ಮತ್ತು ಜಿಲ್ಲೆ):

೧.೩. ಮಾತೃ ಭಾಷೆ:

೧.೪. ಹುಟ್ಟಿದ ಸ್ಥಳ:

೧.೫. ವಯಸ್ಸು:

೧.೬. ವಿವಾಹಿತೆ: ಹೌದು ಇಲ್ಲ

೧.೭. ಮಕ್ಕಳ ಸಂಖ್ಯೆ:

೨. ಸಾಮಾಜಿಕ ವಿಚಾರ

೨.೧. ಶಿಕ್ಷಣ:
ಅ) ಪ್ರಾಥಮಿಕ
ಬ) ಪ್ರೌಢ
ಕ) ಪದವಿ ಪೂರ್ವ
ಡ) ಪದವಿ

೨.೨ ಯಾವ ಧರ್ಮಕ್ಕೆ ಸೇರಿದವರು?
ಅ) ಹಿಂದು
ಬ) ಮುಸ್ಲಿಂ
ಕ) ಕ್ರಿಶ್ಚಿಯನ್
ಡ) ಇತರ

೨.೩ ಹಿಂದು ಆಗಿದ್ದಲ್ಲಿ, ಯಾವ ಜಾತಿಗೆ ಸೇರಿದವರು?

ಅ) ಮುಂದುವರಿದ

ಬ) ಹಿಂದುಳಿದ

ಕ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ

ಡ) ಅಲ್ಪಸಂಖ್ಯಾತರು

೩. ಆರ್ಥಿಕ-ವ್ಯಾವಹರಿಕ ವಿಚಾರ

೩.೧. ಪಡೆದುಕೊಂಡಿರುವ ತರಬೇತಿಯ ಹೆಸರು/ಸ್ಥಳ:

೩.೨ ಪಡೆದುಕೊಂಡಿರುವ ತರಬೇತಿಯ ಅವಧಿ:-

ಮತ್ತು ತಗಲಿದ ಒಟ್ಟು ಖರ್ಚು:-

೩.೩ ಯಾವ ವರ್ಷ ಪಡೆದದ್ದು?

೩.೪ ಈ ತರಬೇತಿಯನ್ನೇ ಯಾಕೆ ಆರಿಸಿಕೊಂಡಿರಿ?

೩.೫ ತರಬೇತಿಯ ಬಗ್ಗೆ ಹೇಗೆ ತಿಳಿಯಿತು?

ಅ) ದಿನಪತ್ರಿಕೆ ಮೂಲಕ

ಬ) ಸ್ನೇಹಿತರಿಂದ

ಕ) ಸಂಬಂಧಿಕರಿಂದ

ಡ) ಇತರ (ತಿಳಿಸಿ)

೩.೬ ತರಬೇತಿಯ ಜೊತೆಗೆ ಪಡೆದ ಕೆಲಸದ ಅನುಭವ:

೩.೭ ಔಪಚಾರಿಕ ತರಬೇತಿ ನೆರವಾಗಿದೆಯೇ?

೩.೮ ಸಂಸ್ಥೆಯ ವ್ಯಕ್ತಿತ್ವ ವಿಕಸನ ಉದ್ಯಮ ಕೈಗೊಳ್ಳಲು ನೆರವಾಗಿದೆಯೇ?

ಅ) ಮಾನಸಿಕ ಮತ್ತು ನೈತಿಕ

ಬ) ಅರ್ಥಿಕ

ಕ) ಇತರ (ತಿಳಿಸಿ)

೩.೯ ತೊಡಗಿಸಿಕೊಂಡಿರುವ ಚಟುವಟಿಕೆ ಹೆಸರು:

೩.೧೦. ಎಷ್ಟು ವರ್ಷಗಳಿಂದ ನಡೆಸುತ್ತಿದ್ದೀರಿ?

೩.೧೧ ಮದುವೆಯ ನಂತರ ಪ್ರಾರಂಭಿಸಿದ ಅಥವಾ ಮೊದಲು

೩.೧೨ ಕುಟುಂಬದ ಸಹಕಾರವಿತ್ತೇ?

೩.೧೩ ಉದ್ಯಮ ಮನೆಯಿಂದ ಎಷ್ಟು ದೂರದಲ್ಲಿದೆ?

೩.೧೪ ಉದ್ಯಮಕ್ಕೆ ಹೂಡಿರುವ ಒಟ್ಟು ಬಂಡವಾಳ:

ಅ) ರೂ. ೫೦೦೦-೧೫೦೦೦

ಬ) ರೂ. ೧೫೦೦೦-೩೦೦೦೦

ಕ) ರೂ. ೩೦೦೦೦-೫೦೦೦೦

ಡ) ರೂ. ೫೦೦೦೦ ಕ್ಕಿಂತ ಹೆಚ್ಚು

೩.೧೫ ಬಂಡವಾಳದ ಮೂಲ: ಅ) ಬ್ಯಾಂಕ್

ಬ) ಸಹಕಾರಿ ಸಂಘ

ಕ) ಸ್ವಸಹಾಯ ಸಂಸ್ಥೆ

ಡ) ಸ್ವಂತ ಹಣ

ಇ) ಇತರ (ತಿಳಿಸಿ)

೩.೧೬ ಗಳಿಸುತ್ತಿರುವ ತಿಂಗಳ ಆದಾಯ:

ಅ) ೩೦೦೦ಕ್ಕಿಂತ ಕಡಿಮೆ ಕ) ೫೦೦೦-೧೦೦೦೦

ಬ) ೩೦೦೦-೫೦೦೦ ಡ) ೧೦೦೦೦ ಕ್ಕಿಂತ ಹೆಚ್ಚು

೩.೧೭ ತರಬೇತಿ ಸಂಸ್ಥೆಯಿಂದ ಹಣಕಾಸಿನ ನೆರವು ದೊರೆತಿದೆಯಾ?:

೩.೧೮ ಉದ್ಯಮವನ್ನು ಸ್ವಂತ ಕಟ್ಟಡದಲ್ಲಿ ನಡೆಸುತ್ತಿದ್ದೀರಾ?:

೩.೧೯ ಬಾಡಿಗೆಯದಾದಲ್ಲಿ ತಿಂಗಳ ಬಾಡಿಗೆ ಎಷ್ಟು?:

೩.೨೦ ಉದ್ಯಮವು ಲಾಭದಯಕವಾಗಿದೆ: ಅ) ಬಹಳ ಬ) ಸಾಧಾರಣ

೩.೨೧. ನೀವು ನಿಮ್ಮ ಉದ್ದಿಮೆಯಲ್ಲಿ ಎಷ್ಟು ಮಂದಿಗೆ ಉದ್ಯೋಗ ಕಲ್ಪಿಸಿಕೊಟ್ಟಿದ್ದೀರಿ?

ಅ) ೫ ಕ್ಕಿಂತ ಕಡಿಮೆ

ಬ) ೫-೧೦ ನ್

ಕ) ೧೦-೧೫

ಡ) ೧೫-೨೦

೩.೨೨ ಉದ್ಯಮ ಕೈಗೊಳ್ಳುವ ಮೊದಲು ಆರ್ಥಿಕ ಪರಿಸ್ಥಿತಿ: ಅ) ಉತ್ತಮ ಬ) ಅತ್ಯುತ್ತಮ

೩.೨೩ ಉದ್ಯಮ ಕೈಗೊಂಡ ನಂತರ ಆರ್ಥಿಕ ಪರಿಸ್ಥಿತಿ: ಅ) ಉತ್ತಮ ಬ) ಸಾಧಾರಣ

ಕ) ಅತ್ಯುತ್ತಮ ಡ) ಕೆಳಮಟ್ಟ

೩.೩೩. ಪ್ರಸ್ತುತ ಏನಾದರೂ ಸಮಸ್ಯೆ ಎದುರಿಸುತ್ತಿದ್ದೀರಾ? :

೩.೩೪. ಇದ್ದರೆ ಯಾವ ಸಮಸ್ಯೆ ಎದುರಿಸುತ್ತಿದ್ದೀರಿ:

೩.೩೫. ತರಬೇತಿಯನ್ನು ಇನ್ನೂ ಉತ್ತಮಗೊಳಿಸಲು ನಿಮ್ಮ ಸಲಹೆಗಳು:

೩.೩೬ ನಿಮಗೆ ಇನ್ನೂ ಹೆಚ್ಚಿನ ತರಬೇತಿಯ ಅಗತ್ಯ ಇದೆಯೇ?

೩.೩೭. ಇದ್ದರೆ ಯಾವ ಸ್ವರೂಪದ್ದು ಮತ್ತು ಎಲ್ಲಿ?

೩.೩೮ ನೀವು ಪಡೆದುಕೊಂಡ ತರಬೇತಿ ಮತ್ತು ಉದ್ಯಮ/ವ್ಯವಹಾರದ ಅನುಭವವನ್ನು ಇತರರೊಂದಿಗೆ ಹಂಚಿಕೊಂಡಿದ್ದೀರಾ?

೩.೩೯ ಇಂಥ ತರಬೇತಿಯನ್ನು ಕೊಡುವ ತರಬೇತುದಾರರಾಗಲು ನೀವು ಸಿದ್ಧರಿದ್ದೀರಾ?

೩.೪೦ ಗ್ರಾಮೀಣ ಮಹಿಳಾ ಸಬಲೀಕರಣದಲ್ಲಿ ಉದ್ಯಮಶೀಲತೆಯ ಪಾತ್ರ: ಈ ವಿಷಯದ ಬಗ್ಗೆ/ಇಂಥಾ ಸಂಶೋಧನೆಯ ಬಗ್ಗೆ ನಿಮ್ಮ ಅಭಿಪ್ರಾಯಗಳು:

ಗ್ರಂಥ ಸೂಚಿ

೧. **ಆಂಜನಪ್ಪ ಬಿ ಎಚ್:** ಮಹಿಳೆ ಮತ್ತು ದುಡಿಮೆ, ಸೃಷ್ಟಿ ಪಬ್ಲಿಕೇಶನ್ಸ್, ಬೆಂಗಳೂರು, ೨೦೦೬

೨. **ಆಂಜನಪ್ಪ ಬಿ ಎಚ್:** ಭಾರತದ ಆರ್ಥಿಕತೆಯಲ್ಲಿ ಮಹಿಳೆ, ಹೊಸತು, ಸೆಪ್ಟೆಂಬರ್, ೨೦೦೭

೩. **ಕಲಾಂ ಅಬ್ದುಲ್ ಎ ಪಿ ಜೆ:** ಎಂಪವರ್‌ಮೆಂಟ್ ಥ್ರೂ ಎಂಟ್ರೆಪ್ರಿನಿಯರ್ ಶಿಪ್, ಕಿಸಾನ್ ವರ್ಲ್ಡ್, ೩೪(೧), ಜನವರಿ ೨೦೦೭

೪. **ಕುಮಾರ್ ಯತೀಶ್:** ವಿಮೆನ್ ಎಂಟ್ರೆಪ್ರಿನಿಯರ್ಶಿಪ್ : ಇಶ್ಯೂಸ್ ಆಂಡ್ ಕನ್ಸರ್ನ್ಸ್, ಡಾ. ಎಲ್. ರಾಧಾಕೃಷ್ಣನ್(ಸಂ), ಎಂಪವರ್ ಮೆಂಟ್ ಆಫ್ ವಿಮೆನ್ ಥ್ರೂ ಎಂಟ್ರೆಪ್ರಿನಿಯರ್ಶಿಪ್, ಜ್ಞಾನ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, ೨೦೦೮

೫. **ಗೋಮತಿ ವಿ:** ಡೆವೆಲಪ್‌ಮೆಂಟ್ ಆಫ್ ವಿಮೆನ್ ಎಂಟ್ರೆಪ್ರಿನಿಯರ್ಸ್– ರೀಸೆಂಟ್ ಟ್ರೆಂಡ್ಸ್, ೩೩(೯), ಕಿಸಾನ್ ವರ್ಲ್ಡ್, ೩೩(೯), ಸೆಪ್ಟೆಂಬರ್, ೨೦೦೬

೬. **ಚಿನ್ನಪ್ಪ ಗೌಡ.ಕೆ:** ಮುನ್ನುಡಿ, ಮಹಿಳೆ ಮತ್ತು ಅಭಿವೃದ್ಧಿ, ಜಯಶೀಲ, ಶೌಕತ್ ಆಲಿ ಎಂ, ಮೇಗಲಮನಿ, ಸುಧಾಕರ ಎಸ್ (ಸಂ), ಕಿಸಾನ್ ಪಬ್ಲಿಕೇಷನ್ಸ್, ಮಂಗಳೂರು, ೨೦೦೭

೭. **ಜಯಶೀಲ ಮತ್ತು ಸುಧಾಕರ ಎಸ್:** ಗ್ರಾಮೀಣ ಮಹಿಳೆಯರ ಸಬಲೀಕರಣದ ವಿವಿಧ ಆಯಾಮಗಳು, ಮಹಿಳೆ ಮತ್ತು ಅಭಿವೃದ್ಧಿ, ಜಯಶೀಲ, ಶೌಕತ್ ಆಲಿ ಎಂ, ಮೇಗಲಮನಿ, ಸುಧಾಕರ ಎಸ್ (ಸಂ), ಕಿಸಾನ್ ಪಬ್ಲಿಕೇಷನ್ಸ್, ಮಂಗಳೂರು, ೨೦೦೭

೮. **ಜಯಲತಾ ಜೆ:** ರೋಲ್ ಆಫ್ ವಿಮೆನ್ ಎಂಟ್ರೆಪ್ರಿನಿಯರ್ಸ್ ಇನ್ ಸೋಶಿಯಲ್ ಅಪ್ ಲಿಫ್ಟ್‌ಮೆಂಟ್, ಸದರ್ನ್ ಇಕೋನಾಮಿಕ್ಸ್, ೪೭ (೧), ಮೇ, ೨೦೦೮

೯. **ಜೋಶಿ ಜ.ವಿ:** ಬಡತನ ನಿರ್ಮೂಲನೆ ಮತ್ತು ಮಹಿಳಾ ಸಬಲೀಕರಣದಲ್ಲಿ ಕಿರುಹಣಕಾಸಿನ ಪಾತ್ರ, ಜಯಶೀಲ, ಶೌಕತ್ ಆಲಿ ಎಂ, ಮೇಗಲಮನಿ, ಸುಧಾಕರ ಎಸ್ (ಸಂ), ಕಿಸಾನ್ ಪಬ್ಲಿಕೇಷನ್ಸ್, ಮಂಗಳೂರು, ೨೦೦೭

೧೦. **ದಿನೇಶ್ ಪಿ ಟಿ, ಮತ್ತು ಗೌಡ ಎನ್ ಕೆ:** ಮಹಿಳಾ ಉದ್ಯಮಶೀಲತೆ, ಜಯಶೀಲ, ಶೌಕತ್ ಆಲಿ ಎಂ, ಮೇಗಲಮನಿ, ಸುಧಾಕರ ಎಸ್ (ಸಂ), ಕಿಸಾನ್ ಪಬ್ಲಿಕೇಷನ್ಸ್, ಮಂಗಳೂರು, ೨೦೦೭

೧೦. **ದಿನೇಶ ಪಿ ಟಿ ಮತ್ತು ಶಿವಚಿತ್ತಪ್ಪ:** ಮಹಿಳೆಯರ ಆರ್ಥಿಕ ಸ್ವಾವಲಂಬನೆಯಲ್ಲಿ ಕಿರು ಹಣಕಾಸಿನ ಪಾತ್ರ, ಜಯಶೀಲ, ಶೌಕತ್ ಆಲಿ ಎಂ, ಮೇಗಲಮನಿ, ಸುಧಾಕರ ಎಸ್ (ಸಂ), ಕಿಸಾನ್ ಪಬ್ಲಿಕೇಷನ್ಸ್, ಮಂಗಳೂರು, ೨೦೦೭

೧೧. **ಪಾಟೀಲ ಎನ್ ಆರ್:** ಸಶಕ್ತ ಮಹಿಳೆ– ಸಶಕ್ತ ರಾಷ್ಟ್ರ, ಕರ್ನಾಟಕ ವಿಕಾಸ, ೩೦(೪), ಮಾರ್ಚ್, ೨೦೦೯

೧೨. **ಪಂಗನ್ನವರ್ ಅರ್ಜುನ್:** ರೂರಲ್ ಡೆವೆಲಪ್‌ಮೆಂಟ್ ಆಂಡ್ ವಿಮೆನ್ ಸೆಲ್ಫ್ ಹೆಲ್ಪ್ ಗ್ರೂಪ್ಸ್, ಸದರ್ನ್ ಇಕೊನೊಮಿಸ್ಟ್ ೪೭(೨೧), ಮಾರ್ಚ್, ೨೦೦೯

೧೩. **ಪಿಂಟೋ ಸಂತೋಷ್:** ವಿಮೆನ್ ಎಂಟ್ರೆಪ್ರಿನಿಯರ್ ಶಿಪ್–ಕೀ ಟು ಎಂಪವರಿಂಗ್ ವಿಮೆನ್, ಎಕ್ಸ್‌ಪ್ಲೋರೇಶನ್ಸ್ ೧(೧), ಮಂಗಳೂರು, ೨೦೦೮

೧೪. **ಬಾಲಮುರುಗನ್ ಪಿ:** ವಿಮೆನ್ ಎಂಟ್ರೆಪ್ರಿನಿಯರ್ಶಿಪ್ ಇನ್ ಇಂಡಿಯಾ: ಎ ಜೆಂಡರ್ ಪರ್ಸ್ಪೆಕ್ಟಿವ್, ಡಾ.ಎಲ್.ರಾಧಾಕೃಷ್ಣನ್(ಸಂ), ಎಂಪವರ್ ಮೆಂಟ್ ಆಫ್ ವಿಮೆನ್ ಥ್ರೂ ಎಂಟ್ರೆಪ್ರಿನಿಯರ್ಶಿಪ್, ಜ್ಞಾನ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, ೨೦೦೮

೧೫. **ಬಾಲ ಸುಬ್ರಮಣ್ಯಂ ಆರ್:** ಎ ಸ್ಟಡಿ ಆಫ್ ದ ಸ್ಟೇಟಸ್ ಆಫ್ ವಿಮೆನ್ ಎಂಟ್ರೆಪ್ರಿನಿಯರ್ಸ್ ಆಂಡ್ ಡಿಟರ್‌ಮಿನಾಂಟ್ಸ್ ಆಫ್ ದೆಯರ್ ಎಂಪವರ್ ಮೆಂಟ್ ಇನ್ ಇಂಡಿಯಾ, ಡಾ.ಎಲ್. ರಾಧಾಕೃಷ್ಣನ್(ಸಂ), ಎಂಪವರ್ ಮೆಂಟ್ ಆಫ್ ವಿಮೆನ್ ಥ್ರೂ ಎಂಟ್ರೆಪ್ರಿನಿಯರ್ಶಿಪ್, ಜ್ಞಾನ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, ೨೦೦೮

೧೬. **ಮಲಿಕ್ ಬಿ ಎಸ್ ಮತ್ತು ಶ್ರೀಲತಾವಾಣಿ :** ಮೈಕ್ರೊ ಎಂಟರ್ ಪ್ರೈಸಸ್ ಫಾರ್ ಎಂಪವರ್ ಮೆಂಟ್ ಆಫ್ ವಿಮೆನ್, ಕಿಸಾನ್ ವರ್ಲ್ಡ್ ೩೩(೫), ಮೇ, ೨೦೦೬

೧೭. **ಮಾಸಾಪತಿ ಎ ಎಚ್:** ಗ್ರಾಮೀಣ ಮಹಿಳೆ ಮತ್ತು ಉದ್ಯಮಶೀಲತೆ, ಕರ್ನಾಟಕ ವಿಕಾಸ, ೪೯(೧೨), ಮಾರ್ಚ್, ೨೦೦೯

೧೮. **ರಾಜ್ ಪ್ರವೀಣ ಸಿ ಎಂ ಮತ್ತು ಶಿವಣ್ಣ ಎಸ್:** ಪ್ರಜಾಪ್ರಭುತ್ವ ತಳಹದಿಯ ವಿಕೇಂದ್ರೀಕರಣ ಮತ್ತು ಮಹಿಳೆಯ ಅಭಿವೃದ್ಧಿ ಸಮಸ್ಯೆಗಳು ಮತ್ತು ಅವಕಾಶಗಳು, ಜಯಶೀಲ, ಶೌಕತ್ ಆಲಿ ಎಂ,

ಮೇಗಲಮನಿ, ಸುಧಾಕರ ಎಸ್ (ಸಂ), ಕಿಸಾನ್ ಪಬ್ಲಿಕೇಷನ್ಸ್, ಮಂಗಳೂರು, ೨೦೦೭

೧೯. **ರಾವ್ ಪುಲ್ಲಾ ಡಿ:** ವಿಮೆನ್ ಎಂಟ್ರೆಪ್ರಿನಿಯರ್ಶಿಪ್ ಇನ್ ಇಂಡಿಯಾ: ಆನ್ ಎನಾಲಿಸಿಸ್, ಎಲ್.ರಾಧಾಕೃಷ್ಣನ್(ಸಂ), ಎಂಪವರ್ ಮೆಂಟ್ ಆಫ್ ವಿಮೆನ್ ಥ್ರೂ ಎಂಟ್ರೆಪ್ರಿನಿಯರ್ಶಿಪ್, ಜ್ಞಾನ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, ೨೦೦೮

೨೦. **ರಾವ್ ಪುಲ್ಲಾ ಡಿ:** ವಿಮೆನ್ ಎಂಟ್ರೆಪ್ರಿನಿಯರ್ಶಿಪ್ ಇನ್ ಇಂಡಿಯಾ– ಪ್ರೊಬ್ಲೆಮ್ಸ್ ಆಂಡ್ ಪ್ರೊಸ್ಪೆಕ್ಟಿವ್ಸ್ , ಎಲ್.ರಾಧಾಕೃಷ್ಣನ್(ಸಂ), ಎಂಪವರ್ ಮೆಂಟ್ ಆಫ್ ವಿಮೆನ್ ಥ್ರೂ ಎಂಟ್ರೆಪ್ರಿನಿಯರ್ಶಿಪ್, ಜ್ಞಾನ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, ೨೦೦೮

೨೧. **ವರದರಾಜನ್ ಜಿ:** ವಿಮೆನ್ ಎಂಟ್ರೆಪ್ರಿನಿಯರ್ಶಿಪ್ ಪ್ರೊಬ್ಲೆಮ್ಸ್ – ಕ್ಯಾಶುವಲ್ ಟ್ರೆಂಡ್ಸ್, ಎಲ್. ರಾಧಾಕೃಷ್ಣನ್(ಸಂ), ಎಂಪವರ್ ಮೆಂಟ್ ಆಫ್ ವಿಮೆನ್ ಥ್ರೂ ಎಂಟ್ರೆಪ್ರಿನಿಯರ್ಶಿಪ್, ಜ್ಞಾನ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, ೨೦೦೮

೨೨. **ವಿಜಯಲಕ್ಷ್ಮಿ ಮತ್ತು ಪ್ರಜೀತ ಬಿ:** ಎಂಪವರ್ ಮೆಂಟ್ ಆಫ್ ವಿಮೆನ್ ಥ್ರೂ ಎಂಟ್ರೆಪ್ರಿನಿಯರ್ಶಿಪ್: ಆನ್ ಎಂಪಿರಿಕಲ್ ಸ್ಟಡಿ, ಎಲ್.ರಾಧಾಕೃಷ್ಣನ್(ಸಂ), ಎಂಪವರ್ ಮೆಂಟ್ ಆಫ್ ವಿಮೆನ್ ಥ್ರೂ ಎಂಟ್ರೆಪ್ರಿನಿಯರ್ಶಿಪ್, ಜ್ಞಾನ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, ೨೦೦೮

೨೩. **ಶಿಶಿಲ ಪ್ರಭಾಕರ:** ಅಭಿವೃದ್ಧಿಯ ಅರ್ಥಶಾಸ್ತ್ರ, ಕಲಾ ಪ್ರಕಾಶನ, ಬೆಂಗಳೂರು, ೨೦೦೫

೨೪. **ಶೆಟ್ಟಿ ಉದಯಕುಮಾರ್:** ಸ್ತ್ರೀ ಶಕ್ತಿ ಯೋಜನೆ – ಮಹಿಳಾ ಸಬಲೀಕರಣ, ಸ್ಪರ್ಧಾ ಚೈತ್ರ, ೮(೧೧), ಜನವರಿ, ೨೦೦೭

೨೫. **ಶೌಕತ್ ಆಲಿ ಎಂ ಮೇಗಲಮನಿ ಮತ್ತು ಹೊನಕೇರಿ ಪಿ.ಎಂ:** ಸ್ತ್ರೀಯರ ಸಬಲೀಕರಣದಲ್ಲಿ ಶಿಕ್ಷಣದ ಪಾತ್ರ, ಜಯಶೀಲ, ಶೌಕತ್ ಆಲಿ ಎಂ, ಮೇಗಲಮನಿ, ಸುಧಾಕರ ಎಸ್ (ಸಂ), ಕಿಸಾನ್ ಪಬ್ಲಿಕೇಷನ್ಸ್, ಮಂಗಳೂರು, ೨೦೦೭

೨೬. **ಶ್ರೀ ರಂಗರಾಜನ್ ಆರ್, ಮತ್ತು ನರಸಿಂಹನ್ ಎ. ಟಿ:** ಸೆಲ್ಫ್ ಹೆಲ್ಪ್ ಗ್ರೂಪ್ಸ್ ಎ ವಯಬಲ್ ಆಲ್ಟರ್ನೆಟಿವ್ ಫಾರ್ ಸಸ್ಟೇನೆಬಲ್ ಡೆವೆಲೊಪ್ಮೆಂಟ್, ಎಲ್. ರಾಧಾಕೃಷ್ಣನ್(ಸಂ), ಎಂಪವರ್ ಮೆಂಟ್ ಆಫ್ ವಿಮೆನ್ ಥ್ರೂ ಎಂಟ್ರೆಪ್ರಿನಿಯರ್ಶಿಪ್, ಜ್ಞಾನ್ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, ೨೦೦೮

೨೭. **ಶ್ರೀ ಪ್ರಸಾದ್ ಎಚ್ ಮತ್ತು ಮೂರ್ತಿ ಟಿ ಎಚ್**: ಸ್ವ ಉದ್ಯೋಗ ಹಾಗೂ ಮಹಿಳಾ ಸ್ವಾವಲಂಬನೆಯ ಯಶೋಗಾಥೆ, ಜಯಶೀಲ, ಶೌಕತ್ ಆಲಿ ಎಂ, ಮೇಗಲಮನಿ, ಸುಧಾಕರ ಎಸ್ (ಸಂ), ಕಿಸಾನ್ ಪಬ್ಲಿಕೇಷನ್ಸ್, ಮಂಗಳೂರು, ೨೦೦೭

೨೮. ಸುಜಾತ ಕೆ ಎಸ್ ಮತ್ತು ರಘು ರಾಮ ಎ: ಮಹಿಳಾ ಸಬಲೀಕರಣ, ಕಿರು ಸಾಲ ಮತ್ತು ಸ್ವ ಸಹಾಯ ಗುಂಪುಗಳು: ಸತ್ಯ- ಮಿಥ್ಯಗಳು, ಜಯಶೀಲ, ಶೌಕತ್ ಆಲಿ ಎಂ, ಮೇಗಲಮನಿ, ಸುಧಾಕರ ಎಸ್ (ಸಂ), ಕಿಸಾನ್ ಪಬ್ಲಿಕೇಷನ್ಸ್, ಮಂಗಳೂರು, ೨೦೦೭

೨೯. ಸಿಂಡಿಕೇಟ್ ಗ್ರಾಮೀಣ ಅಭಿವೃದ್ಧಿ ಟ್ರಸ್ಟ್ (ಎಸ್ ಆರ್ ಡಿ ಟಿ) ವಾರ್ಷಿಕ ವರದಿ, ೨೦೦೮-೦೯

೩೦. **ಹೆಗ್ಗಡೆ ಒಡೆಯರ್ ಡಿ ಮತ್ತು ಅನ್ನಪೂರ್ಣೇಶ್ವರಿ ಎನ್.**: ಮಹಿಳಾ ಅಧ್ಯಯನಗಳು, ಆರ್ಥಿಕ ನೆಲೆಗಳು ಮತ್ತು ಆಯಾಮಗಳು, ಮಾನವಾಭಿವೃದ್ಧಿಗಳ ಕೇಂದ್ರ, ಮೈಸೂರು, ೨೦೦೩

೩೧. **ಹೇಮಲತಾ ಎಚ್ ಎಂ**: ಅರ್ಥ, ಹುಟ್ಟು, ಬೆಳವಣಿಗೆ, ಪರಿಕಲ್ಪನೆ ಸಿದ್ಧಾಂತಗಳು, ಮಹಿಳಾ ಅಧ್ಯಯನ ೧, ಮೈಸೂರು, ೨೦೦೪

೩೨. **ಹೇಮಲತಾ ಎಚ್. ಎಂ**: ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆ, ರಾಜಕೀಯ ಮತ್ತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರು, ಮಹಿಳಾ ಅಧ್ಯಯನ ೨, ಡಿ ವಿ ಕೆ ಮೂರ್ತಿ ಪ್ರಕಾಶಕರು, ಮೈಸೂರು, ೨೦೦೪

೩೩. **ಹೇಮಲತಾ ಎಚ್ ಎಂ**: ಮಹಿಳೆ ಮತ್ತು ದುಡಿಮೆ, ಮಹಿಳಾಭಿವೃದ್ಧಿ ಕಾರ್ಯ ಯೋಜನೆಗಳು, ಮಹಿಳಾ ಅಧ್ಯಯನ ೩, ಕರ್ನಾಟಕ ಪ್ರೆಸ್, ಮೈಸೂರು, ೨೦೦೬